ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 3

ಜನವರಿ 16, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com

ಪಂಚಾಯತ್ ಚುನಾವಣಾ ಫಲಿತಾಂಶ



ಪರ್ಯಾಯದ ಹುಡುಕಾಟದಲ್ಲಿ ಜನತೆ...



ರಾಜ್ಯಪಾಲರ ಭಾಷಣ : ವಂಚಕ ಸರ್ಕಾರದ ಸುಳ್ಳುಗಳ ಗೊಂಚಲು

ಮತಾಂತರ ಆರೋಪ: ಪಾದ್ರಿ ಮೇಲೆ ಹಲ್ಲೆ



ದಾವಣಗೆರೆಯಲ್ಲಿ ಕೋಮುಗಲಭೆ ಅಲ್ಪಸಂಖ್ಯಾತರ ಮೇಲೆ ಹಲ್ಲೆ



ತೃಣಮೂಲ-ಮಾವೋವಾದಿ ನಂಟು ಇದೀಗ ಬಟಾಬಯಲು

ಅರವತ್ತರ ದಶಕ ಬೊಲಿವಿಯಾದಲ್ಲಿ ಚೆ ಗೆವಾರಾ ತನ್ನ ಪ್ರಾಣವನ್ನೇ ಅರ್ಪಿಸಿದ ಕಾಲವಾಗಿದ್ದು ಇತಿಹಾಸದಲ್ಲಿ ಒಂದು ಮಹತ್ತಾದ ಅವಧಿ. ಸ್ಥಳೇಕರ್ ಈ ಸಮಯದಲ್ಲೇ ಕ್ರಾಂತಿಕಾರಿ ಕಾರ್ಮಿಕ ವರ್ಗದ ರಾಜಕೀಯದ ಆಚರಣೆಗೆ ತಮ್ಮನ್ನು ಅರ್ಪಿಸಿಕೊಂಡವರು. ಸಮರಶೀಲ ಕಾರ್ಮಿಕ ಆಂದೋಲನಕ್ಕೆ ಮತ್ತು ಸ್ಥಳೀಯ ಸ್ವಯಮಾಡಳಿತದಲ್ಲಿ ಕಾರ್ಮಿಕರ ಪಾತ್ರಕ್ಕೆ ಸಂಬಂಧಪಟ್ಟಂತೆ ಅವರ ಕೊಡುಗೆಗಳು ಶಾಶ್ವತವಾಗಿ ಉಳಿಯುವಂತವು. ಕರ್ನಾಟಕದ ಕಾರ್ಮಿಕ ಮತ್ತು ಪ್ರಜಾಪ್ರಭುತ್ವವಾದಿ ಆಂದೋಲನ ಹೋರಾಟಗಾರ ಸ್ಥಳೇಕರ್‌ರವರಿಂದ ಬಹಳಷ್ಟು ಕಲಿಯಬೇಕಾಗಿದೆ, ಅದೇ ರೀತಿ ವ್ಯಕ್ತಿವಾದಿ ಸ್ಥಳೇಕರ್‌ರವರ ಅನುಭವದಿಂದಲೂ ಕಲಿಯಲು ಮತ್ತು ಅದನ್ನು ಅನುಸರಿಸದಿರಲು ಕೂಡಾ ಬಹಳಷ್ಟು ಇದೆ ಎನ್ನುತ್ತಾರೆ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಹಿಂದೆ ತಮ್ಮ ಸಹಯೋಗಿಯಾಗಿದ್ದವರ ಬದುಕು ಮತ್ತು ಹೋರಾಟದ ಒಗಟನ್ನು ನೆನೆಪಿಸಿಕೊಂಡಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು.

ಕಾರ್ಮಿಕ ವರ್ಗಗ ಸಮರಶೀಲ ಸಂಗಾತಿ

ಆರ್.ಜಿ.ಸ್ಥಳೇಕರ್ ಇನ್ನಿಲ್ಲ

ವಿ.ಜೆ.ಕೆ. ನಾಯರ್

ಕಾಂ. ಆರ್.ಜಿ.ಸ್ಥಳೇಕರ್ ಜನವರಿ 4ರ ಮುಂಜಾವಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಕತ್ಗಲ್‌ನಲ್ಲಿರುವ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ. ಬಹಳ ಸಮಯದಿಂದ ಅವರು ಉಬ್ಬಸದಿಂದ ನರಳುತ್ತಿದ್ದರು. ಜತೆಗೆ ಉಳಿತಾಯವಿಲ್ಲದೆ ಮತ್ತು ಸಾಲಗಳೊಂದಿಗೆ ಬದುಕುವಾಗ ಎದುರಾಗುವ ವಿವಿಧ ಸಮಸ್ಯೆಗಳಿಂದಲೂ ನರಳುತ್ತಿದ್ದರು. ಸಮರಶೀಲ ಕಾರ್ಮಿಕ ಆಂದೋಲನಕ್ಕೆ ಮತ್ತು ಸ್ಥಳೀಯ ಸ್ವಯಮಾಡಳಿತದಲ್ಲಿ ಕಾರ್ಮಿಕರ ಪಾತ್ರಕ್ಕೆ ಸಂಬಂಧಪಟ್ಟಂತೆ ಅವರ ಕೊಡುಗೆಗಳು ಶಾಶ್ವತವಾಗಿ ಉಳಿಯುವಂತವು.

ರಮೇಶ ಗಣಪತರಾವ್ ಸ್ಥಳೇಕರ್ ಮುಂಬೈಗೆ ಅಲ್ಲಿರುವ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಮರ್ಶಿಯಲ್ ಕಲಾವಿದನಾಗಲಿಕ್ಕಾಗಿ ಶಿಕ್ಷಣ ಪಡೆಯಲು ಹೋಗಿದ್ದವರು, ಅಲ್ಲಿ ಪಡೆದ ಹುರುಪು ಮತ್ತು ಬೆಳೆಸಿಕೊಂಡ ಬದ್ಧತೆಯಿಂದಾಗಿ ತಮ್ಮನ್ನು ಒಬ್ಬ ಕ್ರಾಂತಿಕಾರಿಯೆಂದು ಪರಿಗಣಿಸಿದ್ದವರು. ಅರವತ್ತರ ದಶಕ ಬೊಲಿವಿಯಾದಲ್ಲಿ ಚೆ ಗೆವಾರಾ ತನ್ನ ಪ್ರಾಣವನ್ನೇ ಅರ್ಪಿಸಿದ ಕಾಲವಾಗಿದ್ದು ಇತಿಹಾಸದಲ್ಲಿ ಒಂದು ಮಹತ್ತಾದ ಅವಧಿ. ಸ್ಥಳೇಕರ್ ಈ ಸಮಯದಲ್ಲೇ ಕ್ರಾಂತಿಕಾರಿ ಕಾರ್ಮಿಕ ವರ್ಗದ ರಾಜಕೀಯದ ಆಚರಣೆಗೆ ತಮ್ಮನ್ನು ಅರ್ಪಿಸಿಕೊಂಡವರು.

ಅತ್ಯಂತ ಬಲಿಷ್ಠ ಮಿಲಿಟರಿಯಿಂದ ಸಜ್ಜಾಗಿದ್ದ ಅಮೆರಿಕಾ ಸಂಯುಕ್ತ ಸಂಸ್ಥಾನ ವಿಯೆಟ್ನಾಂ ಯುದ್ಧದಲ್ಲಿ ಮಣ್ಣು ಮುಕ್ಕಬೇಕಾಗಿ ಬಂದಿದ್ದ ದಿನಗಳವು. ಎಲ್ಲೆಲ್ಲೂ, ವಿಶೇಷವಾಗಿ ಅಮೆರಿಕ, ಫ್ರಾನ್ಸ್ ಮುಂತಾದೆಡೆ ಯುವಜನರು ಯುದ್ಧ-ವಿರೋಧಿ ರ‍್ಯಾಲಿಗಳಲ್ಲಿ ತೊಡಗಿದ್ದರು. ಲ್ಯಾಟಿನ್ ಅಮೆರಿಕ ಮತ್ತು ಕೆರೆಬಿಯನ್ ಪ್ರದೇಶಗಳಲ್ಲಿ ಯುವ ಕ್ರಾಂತಿಕಾರಿಗಳು ಮತ್ತು ಮುಂದೆ ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಕ್ರಿಯಾಶೀಲವಾದ ಪಕ್ಷಗಳು ಮಿಲಿಟರಿ ಆಡಳಿತಗಳ ವಿರುದ್ಧ ಶಸ್ತ್ರಗಳನ್ನು ಎತ್ತಿಕೊಂಡಿದ್ದರು. ಈ ಜಾಗತಿಕ ಐತಿಹಾಸಿಕ ಪ್ರಕ್ರಿಯೆ ಮುಂಬೈಯಲ್ಲೂ ಅಲೆಗಳನ್ನೆಬ್ಬಿಸಿತು. ಕಾಂ. ಸ್ಥಳೇಕರ್ ತಮ್ಮ ಬದ್ಧತೆಯನ್ನು ಪಡೆದದ್ದು ಈ ಅಲೆಯಲ್ಲಿ, ಒಂದು ಸಂಘಟಿತ ಕಮ್ಯುನಿಸ್ಟ್ ಪಕ್ಷದಲ್ಲಲ್ಲ.

ಸಮರಧೀರ ಮುಖಂಡರಾಗಿ

ಯುವ ಸ್ಥಳೇಕರ್ ಒಬ್ಬ ನೈಜ ಕ್ರಾಂತಿಕಾರಿಯ ಹುರುಪು ಮತ್ತು ಬದ್ಧತೆಯೊಡನೆ ಹುಟ್ಟೂರಿಗೆ ಮರಳಿದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಮಾಜಿಕ ಬದ್ಧತೆಯುಳ್ಳ ಇತರ ಯುವಜನರ ಜೊತೆಯೂ ಸಿಕ್ಕಿದ್ದು ಅವರಿಗೆ ಅನುಕೂಲವಾಯಿತು. ಅವರಲ್ಲಿ ಒಬ್ಬರು ಅವರ ಸಂಬಂಧಿಕರೇ ಆದ ಪಿಕಳೆ, ಇನ್ನೊಬ್ಬರು ಪೋಲೀಸ್ ಅತ್ಯಾಚಾರಗಳ ಸ್ವಾಭಾವಿಕ ಶತ್ರುವಿನಂತೆ ಅವಿಶ್ರಾಂತವಾಗಿ ದುಡಿಯುತ್ತಿದ್ದ ವಕೀಲ ಕಾಂ. ಧಾರೇಶ್ವರ್. ಅದಾಗಲೇ ಕಾರವಾರದಲ್ಲಿ ಅಲ್ಲಿಯವರೇ ಆದ ಮಾಲ್ಲೇಕರ್ ಮತ್ತು ಅವರ ಸಂಗಾತಿಗಳಂತಹ ಸಮರಶೀಲರು ಕೆಲಸ ಮಾಡುತ್ತಿದ್ದರು. ಅವರು ಕಾಳಿ ಜಲಾನಯನ ಪ್ರದೇಶದಲ್ಲಿ ಕಾಂ.ಎಸ್.ಎಲ್.ಉಪಾಧ್ಯಾಯ ಮತ್ತು ಕಾಂ.ಪರುಳೇಕರ್ ಮುಂತಾದವರು ಸ್ಥಾಪಿಸಿದ್ದ ರೈತ ಆಂದೋಲನದ ಭಾಗವಾಗಿದ್ದರು.

ಟಾಟಾಗಳ ಕಾರವಾರ ಇಲೆಕ್ಟ್ರಿಸಿಟಿ ಸಪ್ಲೈ ಕಂಪೆನಿಯಲ್ಲಿ ಒಂದು ಕಾರ್ಮಿಕ ಸಂಘವಿತ್ತು. ಅದಕ್ಕೀಗ ಕಾಂ.ಸ್ಥಳೇಕರ್ ರೂಪದಲ್ಲಿ ಹೊಸ ಮುಖಂಡರು ಸಿಕ್ಕಿದರು. ಉತ್ತರ ಕನ್ನಡದ ಅತ್ಯಂತ ಹೆಚ್ಚು ಕೈಗಾರೀಕರಣಗೊಂಡ ದಾಂಡೇಲಿ ಅವರ ಮುಂದಿನ ಗುರಿಯಾಯಿತು. ಸಾ ಮಿಲ್ಲುಗಳ ಆ ಪಟ್ಟಣದಲ್ಲಿ ಆಗಷ್ಟೇ ದಾಂಡೇಲಿ ಫೆರೊ ಅಲಾಯ್ಸ್, ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಮುಂತಾದ ಕಾರ್ಖಾನೆಗಳು ಬೆಳೆದು ಬರಲಾರಂಭಿಸಿದ್ದವು. ನಿಜ, ಆಗಲೇ ಬಹಳ ದಿನಗಳಿಂದ ಇಂಡಿಯನ್ ಪ್ಲೈವುಡ್ ಕಂಪನಿ ಕೆಲಸ ಮಾಡುತ್ತಿತ್ತು. ಆದರೆ ಅಲ್ಲಿದ್ದ ಪೀಠಸ್ಥ ಪರಿಸ್ಥಿತಿಯಿಂದಾಗಿ ಸ್ಥಳೇಕರ್‌ಗೆ ಕಾಳಿ ನದಿಯ ಆಚೆ ಪ್ರವೇಶ ಸಿಗಲಿಲ್ಲ.

ಕಾಂ. ಡಿ.ವಿ.ಸಿಂಗ್ ಆಗ ಅಲ್ಲಿ ಹೆಸರು ಮಾಡಿದ್ದರು. ಕಾಂ. ಡಿ.ಬಿ.ಪವಾರ್ ಕೂಡಾ ದಾಂಡೇಲಿಯಲ್ಲಿ ಹೆಸರು ಗಳಿಸಿದ್ದ ಮುಖಂಡರು. ಯಾರನ್ನೂ ಲೆಕ್ಕಿಸದ ಸ್ವಭಾವದ ಸ್ಥಳೇಕರ್ ಕಾರ್ಮಿಕರನ್ನು ಆಕರ್ಷಿಸಿದರು. ಕಾರ್ಮಿಕರು ತಮ್ಮ ಮೇಲೆ ದಮನ ನಡೆಸುತ್ತಿರುವವರ ಮೇಲೆ ದಾಳಿ ನಡೆಸಲು ನೇತೃತ್ವ ನೀಡಬಲ್ಲ ಮುಖಂಡತ್ವದ ನಿರೀಕ್ಷೆಯಲ್ಲಿದ್ದರು.

ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ನಲ್ಲಿ ಕಾಗದ್ ಮಿಲ್ಸ್ ಕಾಮಗಾರ್ ಯೂನಿಯನ್ ಎಂಬ ಇಂಟಕ್‌ಗೆ ಸೇರಿದ ಸಂಘವಿತ್ತು. ಮಿಲ್ಲಿನ ಆವರಣದಲ್ಲೇ ಅದಕ್ಕೆ ಕಚೇರಿ ಮತ್ತು ಇತರ ಸೌಲಭ್ಯಗಳಿದ್ದವು. ಇದಕ್ಕೆ ಪ್ರತಿಯಾಗಿ ಡಿ.ಬಿ.ಪವಾರ್ ನೇತೃತ್ವದಲ್ಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಎಂಪ್ಲಾಯೀಸ್ ಅಸೋಸಿಯೇಶನ್ ಎಂಬ ಸಂಘವಿತ್ತು. ಅದನ್ನು ಹೊರಗಿನ ಯೂನಿಯನ್ ಅಥವ ಲಾಲ್ ಬಾವ್ಟಾ ಯೂನಿಯನ್ ಎನ್ನುತ್ತಿದ್ದರು. ಅದು ಎಐಟಿಯುಸಿ ಗೆ ಸೇರಿತ್ತು. ಸ್ಥಳೇಕರ್ ಈ ಸಂಘದ ನೇತೃತ್ವ ವಹಿಸಿಕೊಂಡರು. ಇದು ಆಗಿದ್ದ ಮುಖಂಡತ್ವಕ್ಕೆ ಇಷ್ಟವಾಗಿರಲಿಲ್ಲ. ಆದರೆ ಇವರು ತಕ್ಷಣವೇ ಹೊಸ, ಸಮರಶೀಲ ಮುಖಂಡತ್ವವನ್ನು ಎದುರು ನೋಡುತ್ತಿದ್ದ ಕಾರ್ಮಿಕರನ್ನು ಆಕರ್ಷಿಸಿದರು.

ಅವಿಶ್ರಾಂತ ದುಡಿಮೆ

ಸ್ಥಳೇಕರ್ ದಾಂಡೇಲಿಯನ್ನು ಪ್ರವೇಶಿಸಿದ್ದು ಎಪ್ಪತ್ತರ ದಶಕದ ಆರಂಭದಲ್ಲಿ. ಅವರು ವಾಸವಿದ್ದದ್ದು ಮತ್ತು ಚಟುವಟಿಕೆ ನಡೆಸುತ್ತಿದ್ದದ್ದು ಹುಬ್ಬಳ್ಳಿಯಲ್ಲಿ. 1968ರಲ್ಲಿ ದಾವಣಗೆರೆ ಸಮ್ಮೇಳನದಲ್ಲಿ ಅವರು ಸಿಪಿಐ(ಎಂ)ನ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಈ ಸಮಿತಿ ಉತ್ತರ ಕನ್ನಡ, ಧಾರವಾಡ ಮತ್ತು ಬೆಳಗಾವಿ ಸೇರಿದಂತೆ ಇಡೀ



ಕರ್ನಾಟಕ ಪ್ರಾಂತ ರೈತ ಸಂಘ ಹೊನ್ನಾವರದಲ್ಲಿ ತನ್ನ 'ರಾಜ್ಯಮಟ್ಟದ ಸಮಾವೇಶ'ದಲ್ಲಿ ರೈತ - ಕಾರ್ಮಿಕರ ಪರ ಹಿರಿಯ ಹೋರಾಟಗಾರರನ್ನು ಅಭಿನಂದಿಸಿದ ಸಂದರ್ಭದಲ್ಲಿ

ಉತ್ತರ ಕರ್ನಾಟಕದ ಪ್ರದೇಶಗಳನ್ನು ಆವರಿಸಿತ್ತು, ಚಿತ್ರದುರ್ಗ ಜಿಲ್ಲೆಯನ್ನೂ ಪ್ರವೇಶಿಸಿತ್ತು.

ಸ್ಥಳೇಕರ್ ಅಖಿಲ ಭಾರತ ವಿಮಾನೌಕರರ ಸಂಘದ ಧಾರವಾಡ ವಿಭಾಗ ಘಟಕದೊಂದಿಗೆ ಸಂಪರ್ಕ ಸ್ಥಾಪಿಸಿಕೊಂಡಿದ್ದರು. ಕಾಂ. ಎಂ.ಕೆ.ದೇಶಪಾಂಡೆ ಮತ್ತಿತರ ಮುಖಂಡರು ಸ್ಥಳೇಕರ್ ಅವರೊಂದಿಗೆ ಸೇರಿಕೊಂಡು 1971ರಲ್ಲಿ ವೇತನ ಸ್ಥಂಭನದ ವಿರುದ್ಧ ಸಮಾವೇಶ ಏರ್ಪಡಿಸಿದರು. ಅದಾಗಲೇ ಹುಬ್ಬಳ್ಳಿ/ಧಾರವಾಡ ಅಂಚೆ-ತಂತಿ ನೌಕರರು ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರ ನಡುವೆ ಒಂದು ಬಲಿಷ್ಠ ಆಂದೋಲನವನ್ನು ಹೊಂದಿತ್ತು. ಕಾಂ. ಸದಾನಂದ ಟೆಲಿಫೋನ್ಸ್ ಇಲಾಖೆಯ ಪ್ರಮುಖ ಮುಖಂಡರಾಗಿದ್ದರು. ಅವರೊಂದಿಗೆ ಕಾಂ. ವೆಂಕಟೇಶ್(ಕೆಜಿಎಫ್ ಮೂಲದವರು) ಮತ್ತು ಕಾಂ. ಸಿ. ನಂಜುಂಡಪ್ಪ ಮುಂತಾದವರು ಈ ಚಳುವಳಿಯಲ್ಲಿ ಹೆಸರಾಂತ ಮುಖಂಡರಾಗಿದ್ದರು. ಮಾಧ್ಯಮಿಕ ಶಾಲಾಶಿಕ್ಷಕರ ಆಂದೋಲನ ಶಿಕ್ಷಕರ ಕ್ಷೇತ್ರದಿಂದ ಇಬ್ಬರು ಎಂಎಲ್‌ಸಿಗಳನ್ನು ಚುನಾಯಿಸಿ ಕಳಿಸುವಲ್ಲಿ ಯಶಸ್ವಿಯಾಗಿತ್ತು. ಹೊರಟ್ಟಿ ಮತ್ತು ಪೂಜಾರ್ 1983ರ ವರೆಗೆ ಈ ಆಂದೋಲನದ ಪ್ರತಿನಿಧಿಗಳಾಗಿದ್ದರು. 1983ರಲ್ಲಿ ಪಕ್ಷ ಅವರನ್ನು ರಾಮಕೃಷ್ಣ ಹೆಗಡೆಯವರ ಸರಕಾರವನ್ನು ಸ್ಥಿರಗೊಳಿಸಲು ಜನತಾ ಪಕ್ಷದೊಂದಿಗೆ ಸಹಯೋಗ ನಡೆಸುವಂತೆ ಹೇಳಿತು. ಶಿಕ್ಷಕರ ಆಂದೋಲನ ಹುಬ್ಬಳ್ಳಿಯ ಸೂಪರ್ ಬಝಾರ್‌ನಲ್ಲಿ ಒಂದು ಕಚೇರಿ ಹೊಂದಿತ್ತು. ಸ್ಥಳೇಕರ್ ಸೂಪರ್ ಬಜಾರಿನಲ್ಲಿ ರಚಿಸಿದ ಒಂದು ಕಚೇರಿಯಿಂದ ಸಮತಾ ಬುಕ್ ಹೌಸ್ ಎಂಬ ಒಂದು ಪುಸ್ತಕದ ಅಂಗಡಿಯನ್ನು ಆರಂಭಿಸಿದರು. ಈ ಬುಕ್ ಹೌಸ್, ಸ್ವತಂತ್ರವಾಗಿ ತರುತ್ತಿದ್ದ ವಾರಪತ್ರಿಕೆ, ಹಳಕಟ್ಟಿ, ಯಡೂರ ಮಹಾಬಲ ಮುಂತಾದ ಎಸ್‌ಎಫ್‌ಐ ನ ವಿದ್ಯಾರ್ಥಿ ಕಾರ್ಯಕರ್ತರು ಆ ದಿನಗಳಲ್ಲಿ ಸ್ಥಳೇಕರ್‌ರೊಂದಿಗೆ ನಿಕಟ ಸಹಯೋಗ ಹೊಂದಿದ್ದರು. ಸ್ಥಳೇಕರ್ ಇನ್ನೂ ಅವಿವಾಹಿತರಾಗಿದ್ದು ಹಗಲು-ರಾತ್ರಿಯೆನ್ನದೆ ಕೆಲಸ ಮಾಡುತ್ತಿದ್ದರು.

'ಗುರು' ಇಲ್ಲದೆ ವ್ಯಕ್ತಿವಾದಿ?

ಸ್ಥಳೇಕರ್ ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯರೂ ಆಗಿದ್ದರು. ಆದರೆ ಆಗ ಪಕ್ಷದ ರಾಜ್ಯ ಸಮಿತಿಯಲ್ಲಿ ಯೋಜನೆ ಮತ್ತು ಅದರ ನಿರ್ವಹಣೆಯ ಕೊರತೆಯಿದ್ದಂತಿತ್ತು. ಪಕ್ಷಕ್ಕೆ ತನ್ನದೇ ಆದ ಸಮಸ್ಯೆಗಳಿದ್ದವು. ಅವು 1973ರಲ್ಲಿ ಬಹಿರಂಗವಾಗಿ ವ್ಯಕ್ತಗೊಂಡವು. ಅದರಿಂದ ರಾಜ್ಯ ಸಮಿತಿಯನ್ನು ವಿಸರ್ಜಿಸುವಂತಾಯಿತು. ನಾಲ್ಕು ಪ್ರಾದೇಶಿಕ ಸಮಿತಿಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲಾರಂಭಿಸಿದವು. ಹೀಗೆ ಸ್ಥಳೇಕರ್, ಅವರೇ ಈ ಲೇಖಕನಿಗೆ ಹೇಳಿರುವಂತೆ, ಒಬ್ಬ 'ಗುರು' ಇಲ್ಲದೆ ತನಗೆ ತೋಚಿದ ಹಾಗೆ ಕಾರ್ಯ ನಿರ್ವಹಿಸಿದರು. 1971ರಲ್ಲೇ ಅವರು ಧಾರವಾಡದ ವೇತನ ಸ್ತಂಭನ ವಿರೋಧಿ ಸಮಾವೇಶದಲ್ಲಿ ಪಕ್ಷದ ಹೊರಗಿನ ಒಬ್ಬ ತೀವ್ರಗಾಮಿ ಮುಖಂಡರು ಭಾಗವಹಿಸುವಂತೆ ಮಾಡಿದ್ದರು.

ಕ್ರಮೇಣ ಪಕ್ಷದ ನಿರ್ವಹಣೆಯನ್ನು ಟೀಕಿಸುವ ಒಂದು ಗುಂಪು ಬೆಳೆಯಿತು. ಸ್ಥಳೇಕರ್ ಅದನ್ನು ನಿರುತ್ಸಾಹಗೊಳಿಸಲಿಲ್ಲ. ಯಡೂರ್ ಮಹಾಬಲ ಅವರಿಗೆ ಸಂಘಟಿತ ಎಡ ಆಂದೋಲನವನ್ನು ಟೀಕಿಸುವ ಕಿರು ಪುಸ್ತಕಗಳ ಒಂದು ಸರಣಿಯನ್ನು ಬರೆಯುವಂತೆ ಪ್ರೋತ್ಸಾಹಿಸಲಾಯಿತು. ಸ್ಥಳೇಕರ್ ಸಿಪಿಐ(ಎಂ)ನ ಜಲಂಧರ್ ಮಹಾಧಿವೇಶನಕ್ಕೆ ಒಬ್ಬ ಪ್ರತಿನಿಧಿಯಾಗಿದ್ದರು. ಅಲ್ಲಿ ಅವರು ಪಂಥವಾದಿ ಲೈನಿನ ಪರವಾಗಿ ಮತ ನೀಡಿದರು.

ಈ ಎಲ್ಲ ವಿಫಲತೆಗಳ ನಡುವೆಯೂ, ಅಂದರೆ ಒಂದು ಸಾಮೂಹಿಕ ಮುಖಂಡತ್ವದ ಮಹತ್ವವನ್ನು ಅರ್ಥ ಮಾಡಿಕೊಳ್ಳುವಲ್ಲಿ(ಇದಕ್ಕೆ ಅವರನ್ನು ಮಾತ್ರ ದೂಷಿಸಲಾಗದು) ವಿಫಲರಾದರೂ ಅವರು ಅತ್ಯಂತ

ಪುಟ 15

ಯಾವ ಪಕ್ಷವೂ ಬೀಗುವಂತೇನೂ ಇಲ್ಲ


ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣಾ ಫಲಿತಾಂಶಗಳು ಪ್ರಕಟವಾಗಿವೆ. ಈ ಫಲಿತಾಂಶದಿಂದ ಯಾವ ಪಕ್ಷಗಳು ಬೀಗುವಂತಿಲ್ಲ. 30 ಜಿಲ್ಲಾ ಪಂಚಾಯ್ತಿಗಳಲ್ಲಿ 12ರಲ್ಲಿ ಮಾತ್ರ ಬಿಜೆಪಿ ಮೇಲುಗೈ, ತಲಾ 4 ರಲ್ಲಿ ಕಾಂಗ್ರೆಸ್, ಜೆಡಿ(ಎಸ್) 10 ರಲ್ಲಿ ಯಾರಿಗೂ ಬಹುಮತವಿಲ್ಲದೇ ಅತಂತ್ರ ಸ್ಥಿತಿ. ಅಂದರೆ ರಾಜ್ಯದಲ್ಲಿ ಜನತೆಯು ಯಾವ ಪಕ್ಷಕ್ಕೂ ಭಾರೀ ಬೆಂಬಲ ನೀಡಿಲ್ಲ. ಬಹುತೇಕವಾಗಿ ಯಾರಲ್ಲೂ ತುಂಬು ವಿಶ್ವಾಸ ರಾಜ್ಯದ ಮತದಾರರಲ್ಲಿಲ್ಲ.

ಆದರೆ ಬಿಜೆಪಿ ತಾನು ಏನೋ ಮಹತ್ವದ ಸಾಧನೆ ಮಾಡಿಬಿಟ್ಟಂತೆ, ತನ್ನ ಎರಡೂ ವರ್ಷಗಳ (ದುರಾ) ಆಡಳಿತಕ್ಕೆ ಜನತೆ ಕೊಟ್ಟ ಶಹಬ್ಬಾಸ್‌ಗಿರಿ ಎಂದೂ ಮುಖ್ಯವಾಗಿ ಈ ದುರಾಡಳಿತದಲ್ಲಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಮಂತ್ರಿಗಳಾದಿಯಾಗಿ ನಡೆಸಿರುವ ಭಾರೀ ಭ್ರಷ್ಟಾಚಾರ, ಅಕ್ರಮ ಹಗರಣಗಳಿಗೆ ಜನತೆ ನೀಡಿದ ಮನ್ನಣೆ ಎಂಬುವವರೆಗೂ ನಾಚಿಕೆ ಬಿಟ್ಟು ಪ್ರಚಾರಿಸಿಕೊಳ್ಳುತ್ತಿದ್ದಾರೆ. ಸ್ಥಳೀಯ ಸಂಸ್ಥೆಗಳ ಈ ಚುನಾವಣೆಗಳಲ್ಲಿ ಸ್ಥಳೀಯ ನಾಯಕತ್ವ, ಆಯ್ಕೆ ಸ್ಥಳೀಯ ಅಭ್ಯರ್ಥಿಗಳು ಇದರೊಂದಿಗೆ ಪಕ್ಷಗಳ ಪ್ರಾಧಾನ್ಯತೆ ಪಡೆಯುತ್ತವೆ. ಸಾಮಾನ್ಯವಾಗಿ ಅಧಿಕಾರರೂಢ ಪಕ್ಷಗಳತ್ತಲೇ ಮತದಾರರು ಒಲಿಯುವ ಸಾಧ್ಯತೆಗಳೇ ಹೆಚ್ಚು. ಈ ಚುನಾವಣೆಯಲ್ಲಿ ಹಗರಣ, ಅಕ್ರಮಗಳೇ ಪ್ರಧಾನ ವಿಷಯಗಳಾಗಿರಲಿಲ್ಲ.

ಪಂಚಾಯ್ತಿ ಚುನಾವಣೆಗಳಲ್ಲಿ ಪೂರ್ಣ ಮೈಲುಗೈ ಸಾಧಿಸುವುದಾಗಿ ಹೇಳುತ್ತಿದ್ದ ಕೋಮುವಾದಿ ಬಿಜೆಪಿಯು ಹೇಳಿಕೊಂಡಷ್ಟು ಹಂತದ ಗೆಲುವು ಪಡೆಯಲಾಗಿಲ್ಲ ಮತ್ತು ಅಷ್ಟು ಸುಲಭದ ನಡೆಯೂ ಅದಕ್ಕಿಲ್ಲ. ತೀವ್ರವಾದ ಪ್ರತಿರೋಧವಿದೆ ಎಂಬುದನ್ನು ಈ ಚುನಾವಣೆಗಳು ತೋರಿಸಿವೆ. ಆದಾಗ್ಯೂ ಅದು 12 ಜಿಲ್ಲಾ ಪಂಚಾಯತ್‌ಗಳಲ್ಲಿ ನಿಚ್ಚಳ ಬಹುಮತ ಪಡೆದಿರುವುದು, ಹಲವಾರು ಹೊಸ ಪ್ರದೇಶಗಳಲ್ಲಿ ವಿಸ್ತರಣೆಯಾಗಿರುವುದು ಮತ್ತು ಲಿಂಗಾಯತ ಜಾತಿಯ ಜನರೇ ಅಧಿಕವಿರುವ ಉತ್ತರ ಕರ್ನಾಟಕದಲ್ಲಿ ಇಷ್ಟೆಲ್ಲಾ ನಡುವೆ ತನ್ನ ಪ್ರಾಬಲ್ಯ ಉಳಿಸಿಕೊಂಡಿರುವುದು ಗಮನಾರ್ಹ. ಹೀಗೆ ಅದು ಕೆಳಹಂತದಲ್ಲಿ ಪಕ್ಷಕ್ಕೆ ಒಂದು ನೆಲೆ ಹಾಗೂ ಜಾಲವನ್ನು ನಿರ್ಮಿಸಿಕೊಳ್ಳುವ ಯತ್ನದಲ್ಲಿ ಯಶಸ್ವಿಯಾಗಿದೆ. ಆಡಳಿತರೂಢ ಪಕ್ಷವಾಗಿರುವುದು. ಚುನಾವಣಾ ಪೂರ್ವ ಹಾಗೂ ಈ ಸಂದರ್ಭದಲ್ಲಿ ಜನರಿಗೆ ಒಡ್ಡಿದ ಹಣ, ಹೆಂಡ, ವಸ್ತುಗಳ ಆಮಿಷಗಳು, ಜಾತಿಯ ಬಳಕೆ, ಆಡಳಿತ ಯಂತ್ರದ ಮುಕ್ತ ದುರ್ಬಳಕೆ ಚುನಾವಣಾ ಆಯೋಗದ ಪೂರ್ಣ ಶಾಮೀಲುತನ ಮುಂತಾದವುಗಳು ಅದರ ಬಲವನ್ನು ಉಳಿಸಿಕೊಳ್ಳಲು ಕಾರಣವಾಗಿವೆ. ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರ, ವಿರೋಧ ಪಕ್ಷವಾಗಿ ವಿಫಲವಾಗಿ ಬಲ ಕುಸಿಯುತ್ತಾ ದುರ್ಬಲವಾಗುತ್ತಿದೆ. ಇದರ ಲಾಭ ಬಿಜೆಪಿಗಾಗಿದೆ. ಬಂಗಾರಪ್ಪ ಜನತಾ ಪರಿವಾರ ಒಂದಾಗುವ ಹೆಸರಿನಲ್ಲಿ ಜಾತ್ಯಾತೀತ ಜನತಾದಳ ಹಲವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು, ಪಕ್ಷವಾಗಿ ಹಾಗೂ ಚುನಾವಣಾ ಫಲಿತಾಂಶದಲ್ಲಿಯೂ ಸ್ಥಾನ ಗಳಿಸುವಲ್ಲಿ ಚೇತರಿಸಿಕೊಂಡಿದೆ.


ಜೆಡಿ(ಎಸ್)ನ್ನು ಮೂಲೆಗುಂಪು ಮಾಡುವ ಬಿಜೆಪಿ, ಕಾಂಗ್ರೆಸ್ ಯತ್ನಗಳು ಇಲ್ಲಿ ವಿಫಲವಾಗಿವೆ. ಇದು ರಾಜ್ಯದ ರಾಜಕಾರಣದಲ್ಲಿ ಮೂರನೆಯ ಶಕ್ತಿಗೆ ಅವಕಾಶವನ್ನು ಕಾಯ್ದಿಟ್ಟಿದೆ. ಚುನಾವಣಾ ಫಲಿತಾಂಶಗಳ ಬಗ್ಗೆ ಪ್ರತ್ಯೇಕ ಲೇಖನವಿದೆ.

ಬಿಜೆಪಿಯ ಈ ಫಲಿತಾಂಶದ ಹಿಂದೆ ಆರ್‌ಎಸ್‌ಎಸ್ ನ ಯೋಜನೆ ಜಾರಿಯ ಪ್ರಯತ್ನಗಳು ಇರುವುದನ್ನು ಗಮನಿಸಬೇಕು. ಇದಿಲ್ಲದಿದ್ದರೆ ಬಿಜೆಪಿಗೆ ಇಷ್ಟು ಗೆಲುವು ಸಾಧ್ಯವಿರಲಿಲ್ಲ. ಇದಕ್ಕಾಗಿ ಅಪಾರ ಹಣ, ಸಂಪನ್ಮೂಲ ಬಳಸಲಾಗಿದೆ. ಇದರೊಂದಿಗೆ ಹಿಂದೂ ಸಮಾಜೋತ್ಸವಗಳು, ಕಲಬುರ್ಗಿ ಕಂಪು, ಬಾಬಾಬುಡನ್‌ಗಿರಿಯಲ್ಲಿ ದತ್ತ ಜಯಂತಿ ದಾವಣಗೆರೆಯಲ್ಲಿ ಮುಸ್ಲಿಂ ಹಾಗೂ ಕ್ರೈಸ್ತರ ಮೇಲಿನ ಹಲ್ಲೆಗಳು ಚುನಾವಣೆಯ ತಂತ್ರಗಳಾಗಿಯೂ ಸಹ ನಡೆದಿವೆ.



ಅತಂತ್ರವಿರುವ ಜಿಲ್ಲೆಗಳಲ್ಲಿ ಕಾಂಗ್ರೆಸ್ ಮತ್ತು ಜೆಡಿ(ಎಸ್)ಗಳು ಬಿಜೆಪಿಯನ್ನು ದೂರವಿಡಲು ಪರಸ್ಪರ ಬೆಂಬಲಿಸಿಕೊಂಡರೆ ಅದನ್ನು ಅಧಿಕಾರದಿಂದ ದೂರವಿಡಬಹುದು. ಆದರೆ ಇದಕ್ಕೂ ಮೊದಲೇ ಎಂದಿನಂತೆ ಬಿಜೆಪಿಯು ಆಪರೇಷನ್ ಕಮಲವೆಂಬ ಅನೈತಿಕ ಪಕ್ಷಾಂತರದ ಕ್ರಮಕ್ಕೆ ಇಳಿದಿದೆ. ಜನತೆಯ ತೀರ್ಪನ್ನು ಧಿಕ್ಕರಿಸುವ ಪ್ರಜಾಪ್ರಭುತ್ವ ದುರ್ಬಲಗೊಳಿಸುವ ಹೀನ ಪ್ರಯತ್ನಕ್ಕೆ ಮುಂದಾಗಿದೆ. ಅದು ಪಾಠ ಕಲಿಯಲು ಸಾಧ್ಯವೇ ಇಲ್ಲ.

ಹೀಗಿದ್ದರೂ ಬಿಜೆಪಿಯೊಳಗಿನ ಗುಂಪುಗಾರಿಕೆ ಮರೆಯಾಗಿಲ್ಲ. ಅದು ಯಾವಾಗಲೂ ಮರು ಸ್ಫೋಟಗೊಳ್ಳಬಹುದು.



ಯಡ್ಡಿಯ ಪದಚ್ಯುತಿಯನ್ನು ವಿರೋಧ ಪಕ್ಷಗಳಲ್ಲದೇ ಬಿಜೆಪಿಯೊಳಗೇ ಇರುವ ಗುಂಪು ಯತ್ನಿಸುತ್ತಿರುವುದು ಗುಟ್ಟೇನಲ್ಲ. ಇಂತಹ ಸ್ಥಿತಿಯಲ್ಲಿ ಜನತೆಯ ಪ್ರಶ್ನೆಗಳ ಇತ್ಯರ್ಥ ಅಥವಾ ಮೂಲೆಗುಂಪು. ಈಗ ಮತ್ತೆ ಜನತೆಯು ಪ್ರಬಲ ಹೋರಾಟಗಳನ್ನು ನಡೆಸಬೇಕಾದ ಜವಾಬ್ದಾರಿ.

ಲೋಕಾಯುಕ್ತರ ಗುಡುಗು : ಹಗರಣ ತನಿಖೆ ಮಲಗಿದ ಅಧ್ಯಾಯವಲ್ಲ

ಲೋಕಾಯುಕ್ತರು ಮತ್ತೆ ಗುಡುಗಿದ್ದಾರೆ. ಪಂಚಾಯತ್ ಫಲಿತಾಂಶ ತಮ್ಮ ಪಾತಕಗಳಿಗೆ ದೊರೆತ ಅಂಗೀಕಾರವೆಂದು ಬಿಜೆಪಿ ನಾಯಕರು ಹೇಳಿಕೊಂಡು ತಿರುಗುತ್ತಿರುವಾಗಲೇ ಮುಖ್ಯಮಂತ್ರಿ ಯಾದಿಯಾಗಿ ನಡೆಸಿರುವ ಅಕ್ರಮ ಮತ್ತು ಮುಚ್ಚಿಡುತ್ತಿರುವ ಹಗರಣಗಳ ಪತ್ರಗಳ ಬಗ್ಗೆ ಬಹಿರಂಗವಾಗಿ ಮಾತನಾಡಿದ್ದಾರೆ. "ಅಕ್ರಮ ಗಣಿಗಾರಿಕೆ ಕುರಿತು ರಾಜ್ಯಪಾಲರಿಗೆ ಮುಖ್ಯಮಂತ್ರಿಗಳು ನೀಡಿರುವ ವರದಿಗಳು ಸತ್ಯದಿಂದ ಕೂಡಿಲ್ಲ. ಅವು ಸುಳ್ಳುಗಳು ಎಂದೂ 'ಅಕ್ರಮ ಗಣಿಗಾರಿಕೆ, ಮರಳು ದಂಧೆ ನಡೆಯುತ್ತಲೇ ಇದೆ. ಮರಳು ದಂಧೆಯಲ್ಲಿ ಅತ್ಯಂತ ಪ್ರಭಾವಿಗಳೊಬ್ಬರು ತೊಡಗಿದ್ದಾರೆ. ಸಂದರ್ಭ ಬಂದಾಗ ಅವರ ಹೆಸರನ್ನು ಬಹಿರಂಗಗೊಳಿಸಲಾಗುವುದು ಎಂದಿದ್ದಾರೆ. ರೆಡ್ಡಿ ಸಹೋದರರು ಸರ್ಕಾರಕ್ಕೆ 86 ಕೋಟಿ ರೂಪಾಯಿಗಳ ತೆರಿಗೆ ವಂಚನೆಯನ್ನು ಪ್ರಸ್ತಾಪಿಸಿದ್ದಾರೆ.

ಒಂದೆಡೆ ವಿಧಾನಸಭಾ ಅಧಿವೇಶನ ಕಲಾಪಗಳಿಗೆ ಪ್ರತಿಪಕ್ಷಗಳ ಕಡುವಿರೋಧ, ಇನ್ನೊಂದೆಡೆ ಅಕ್ರಮ, ಹಗರಣಗಳ ಮುಗಿದ ಅಧ್ಯಾಯವೇನಲ್ಲ ಎಂಬ ಲೋಕಾಯುಕ್ತರ ಘೋಷಣೆ. ಅಂತೂ ಮರೆಯಲಾರದ ಸಂಗತಿಯನ್ನು ಲೋಕಾಯುಕ್ತರು ನೆನಪಿಸಿದ್ದಾರೆ. ಇವು ಜನತೆಯ ಹೋರಾಟಕ್ಕೆ ಹುರುಪು ಕೊಡುವ ಸಂಗತಿಗಳು.

ಅಧಿಕಾರದಲ್ಲಿ ಮುಂದುವರಿಯುವ ಹಕ್ಕೆಲ್ಲಿ?

ಸದನ ಮತ್ತೆ ಕದನವಾಗುವ ಎಲ್ಲಾ ಲಕ್ಷಣಗಳೂ ಕಾಣತೊಡಗಿವೆ. ಕಲಾಪಗಳನ್ನು ನಿರಂತರವಾಗಿ ಬಹಿಷ್ಕರಿಸಲಾಗುವುದು ಎಂಬ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಹೇಳಿಕೆ ಸನ್ನಿವೇಶದ ಕಾವನ್ನು ಹೆಚ್ಚಿಸಿದೆ. ಬಹುಮತವಿಲ್ಲದ ಅಕ್ರಮ, ಹಗರಣಗಳಲ್ಲಿ ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಿರುವ ಸರ್ಕಾರ ಅಧಿಕಾರದಲ್ಲಿ ಮುಂದುವರಿಯುವ ನೈತಿಕತೆಯನ್ನೇ ಕಳೆದುಕೊಂಡಿದೆ.

ಇನ್ನಾದರೂ ಮುಖ್ಯಮಂತ್ರಿ ಯಡಿಯೂರಪ್ಪನವರ ಇಡೀ ಸರ್ಕಾರವೇ ರಾಜೀನಾಮೆ ನೀಡಿ ಹೊರ ನಡೆಯಬೇಕು. ಈ ಆಗ್ರಹವನ್ನು ಅದು ಮನ್ನಿಸುತ್ತಲೇ ಇಲ್ಲ. ಭಂಡತನದಲ್ಲೇ ಉಳಿದುಕೊಂಡಿದೆ.

ಇಂತಹ ಸ್ಥಿತಿಯನ್ನು ದುರುಪಯೋಗ ಮಾಡಲು ಏಳು ಶಾಸನಗಳ ತಿದ್ದುಪಡಿಗೆ ಬಿಜೆಪಿ ಸಜ್ಜಾಗಿದೆ. ಚರ್ಚೆ ಇಲ್ಲದೇ ಅಂಗೀಕರಿಸುವುದು ಅದರ ಜಾಯಮಾನ. ಇದನ್ನು ತಡೆಯಬೇಕು.

ಅಂದಹಾಗೇ ಈ ಎಲ್ಲಾ ಗಂಭೀರ ವಿಷಯಗಳನ್ನು ಕೇವಲ ಟಿ.ವಿ. ಪತ್ರಿಕೆಗಳು ಮುಂದೆ ಬಿಚ್ಚಿಟ್ಟರೆ ಸಾಲದು. ಅದು ಜನರ ನಡುವೆ ಹೋಗಬೇಕು, ಚರ್ಚಿತವಾಗಿ ಬದುಕಿನ ಪ್ರಶ್ನೆಗಳಿಗೂ, ಭ್ರಷ್ಟತೆಗೂ ಇರುವ ಸಂಬಂಧದ ಮನನ ಮಾಡಿಸಬೇಕು. ಇದು ಇದುವರೆಗೂ ಕಾಂಗ್ರೆಸ್, ಜೆಡಿ(ಎಸ್)ಗಳಿಗೆ ಬೇಕಾಗಿಲ್ಲ. ಇದನ್ನು ಎಡ ಹಾಗೂ ಪ್ರಜಾಸತ್ತಾತ್ಮಕ, ಪ್ರಗತಿಪರ ಶಕ್ತಿಗಳು ಕೈಗೆತ್ತಿಕೊಳ್ಳಬೇಕು.

ಮುಖ್ಯಮಂತ್ರಿಗಳು ಹೇಳಿದ್ದು

ಗಣಿಯ ಧಣಿಗಳ ಕೈಯ ನಾ ಬಿಡೆನು ನೋಡಿ
ಅಧಿಕಾರ ಉಳಿಸಿಹರು ಏನೆಲ್ಲ ಮಾಡಿ
ಹೈಕಮಾಂಡಿಗೂ ಇವರಲ್ಲಿ ಭಕ್ತಿ
ಮೂಡಿಹುದು ಅರಿವಾಗಿ ಆ ಹಣದ ಶಕ್ತಿ.

ವಿಡಂಬಾರಿ

ಭ್ರಷ್ಟಾಚಾರದ ವಿರುದ್ಧ ಡಿವೈಎಫ್ಐ ಬೈಕ್ ರ್‍ಯಾಲಿ

ಡಿಸೆಂಬರ್ 31, ಹೊಸ ವರ್ಷವನ್ನು ಸ್ವಾಗತಿಸುವ ಹೊತ್ತು, ಯುವಜನರು ಸಂಭ್ರಮಾಚರಣೆಯಿಂದ ಹೊಸ ವರ್ಷವನ್ನು ಬರಮಾಡಿಕೊಳ್ಳುವ ದಿನ.... ಡಿವೈಎಫ್ಐ ಈ ದಿನವನ್ನು ಭಿನ್ನ ಹಾಗೂ ವಿಶಿಷ್ಟವಾಗಿ ಆಚರಿಸಿ ಬೆಂಗಳೂರು ಜನತೆಯ ಗಮನ ಸೆಳೆಯಿತು. ಕೇಂದ್ರ-ರಾಜ್ಯ ಸರ್ಕಾರಗಳ ಮೇರೆ ಮೀರಿದ ಭ್ರಷ್ಟಾಚಾರವು 2010ನ್ನು ಕಳಂಕಗೊಳಿಸಿದ ಸಂದರ್ಭದಲ್ಲಿ "ಭ್ರಷ್ಟಾಚಾರ ವಿರೋಧಿಸಿ ಹೊಸ ವರ್ಷ ಸ್ವಾಗತಿಸಿ" ಎಂದು ಯುವಜನರಿಗೆ ಕರೆ ನೀಡಿ ಭ್ರಷ್ಟಾಚಾರದ ವಿರುದ್ಧ ಜನಜಾಗೃತಿ ಬೈಕ್‌ರ್‍ಯಾಲಿ ನಡೆಸಲಾಯಿತು. ಡಿಸೆಂಬರ್ 31 ರಂದು ಬೆಂಗಳೂರು ನಗರದಲ್ಲಿ ಇಂಥ ಒಂದು ವಿಶಿಷ್ಠ ಕಾರ್ಯಕ್ರಮವನ್ನು ಡಿವೈಎಫ್ಐ ಬೆಂಗಳೂರು ಜಿಲ್ಲಾ ಸಮಿತಿ ಆಯೋಜಿಸಿತ್ತು.

ರಾಜ್ಯದ ಬಿಜೆಪಿ ನೇತೃತ್ವದ ಸರ್ಕಾರದ ಭೂ ಹಗರಣ, ಗಣಿ ಸಂಪತ್ತಿನ ಲೂಟಿ, ಕೆಐಎಡಿಬಿಗೆ ವಂಚನೆ, ವರ್ಗಾವಣೆ ದಂಧೆ, ವೈದ್ಯಕೀಯ ಕಾಲೇಜು ನೇಮಕಾತಿಯಲ್ಲಿ ಅಕ್ರಮ, ಲೈಂಗಿಕ ಹಗರಣ, ರೇಗಾದಲ್ಲಿ ಕೆಲಸ ನೀಡದೇ ಕೋಟ್ಯಾಂತರ ರೂ.ಗುಳುಂ ಈ ಪಟ್ಟಿ ಬೆಳೆಯುತ್ತಲೇ ಇದೆ. ಅತ್ತ ಕೇಂದ್ರದ 2 ಜಿ ಸ್ಪೆಕ್ಟ್ರಂ ಹಗರಣ, ಕಾಮನ್‌ವೆಲ್ತ್ ಕ್ರೀಡಾಕೂಟ ಆಯೋಜನೆಯಲ್ಲಿ ಭ್ರಷ್ಟಾಚಾರ, ಆದರ್ಶ ಸೊಸೈಟಿ ಹಗರಣ, ಐಪಿಎಲ್ ಹಗರಣ ಸೇರಿದಂತೆ ಹಲವು ಹಗರಣಗಳು ಒಂದೊಂದಾಗಿ ಹೊರಬರುತ್ತಿವೆ.

ಇಂಥ ಹತ್ತಾರು ಭ್ರಷ್ಟ ಹಗರಣಗಳಿಗೆ ಸಾಕ್ಷಿಯಾದ 2010 ತನ್ನ ಅವಧಿ ಮುಗಿಸುವ ಕಾಲಮಾನ... ಭ್ರಷ್ಟಾಚಾರದ ರಹಿತ ಆಡಳಿತದ ಆಶಯದೊಂದಿಗೆ 2011ಕ್ಕೆ ಸ್ವಾಗತಿಸುವ ಅರ್ಥಪೂರ್ಣ ಕಾರ್ಯಕ್ರಮ ವನ್ನು ಹಿರಿಯ ಸ್ವಾತಂತ್ರ್ಯ ಘೋರಾಟಗಾರರಾದ ಹೆಚ್.ಎಸ್. ದೊರೆಸ್ವಾಮಿ ಉದ್ಘಾಟಿಸಿ ಮಾತನಾಡಿ ಭ್ರಷ್ಟಾಚಾರ ನಿರ್ಮೂಲನೆಗೆ ಯುವಜನರು ಮುಂದಾಗಬೇಕೆಂದು ಕರೆ ನೀಡಿದರು.



ಜ್ಯೋತಿ ಬೆಳಗುತ್ತಿರುವ ಗಣ್ಯರು : ಬಲದಿಂದ ಎಚ್.ಎಸ್. ದೊರೆಸ್ವಾಮಿ, ವಿ.ಮನೋಹರ್, ಲಿಂಗರಾಜು, ಬಿ.ರಾಜಶೇಖರಮೂರ್ತಿ

ಇದೇ ಸಂದರ್ಭದಲ್ಲಿ ಭ್ರಷ್ಟಾಚಾರದ ಕುರಿತು ಡಿವೈಎಫ್ಐನಿಂದ ಪ್ರಕಟಿಸಲಾದ ಕಿರುಹೊತ್ತಿಗೆ ಬಿಡುಗಡೆಗೊಳಿಸಿ ಮಾತನಾಡಿದ ಸಂಗೀತ ನಿರ್ದೇಶಕ ವಿ.ಮನೋಹರ್ ಮಿತಿ ಮೀರಿದ ಭ್ರಷ್ಟಾಚಾರದ ವಿರುದ್ಧ ಯುವಜನರು ಸಿಡಿದೇಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಹೆಚ್.ಎನ್.ಗೋಪಾಲ ಗೌಡ, ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಬೈಕ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಸರಿಸುಮಾರು 100 ಬೈಕ್‌ಗಳೊಂದಿಗೆ ಹೊರಟ ರ್‍ಯಾಲಿ ನಗರದ ಪ್ರಮುಖ ರಸ್ತೆಗಳಲ್ಲಿ ಹಾದು ಗಾಂಧಿ ಪತ್ರಿಮೆ ಬಳಿ ಸಮಾರೋಪಗೊಂಡಿತು. ಸಮಾರೋಪದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್ ಮಾತನಾಡಿದರು.

ಕಾರ್ಯಕ್ರಮಕ್ಕೆ SFI, AIDWA, CITU, AIIEA, ಸಮುದಾಯ BEFI, AILU, KPRS ಮುಂತಾದ



ಚರ್ಮದ್ ಬೆಳ್ಟ್ ಓಯ್ತು, ರಬ್ಬರ್ ಬೆಳ್ಟ್ ಬಂತು

ಯಣ್ಣ, ಈ ಆರೆಸ್ಸೆಸ್ ನವ್ರು ಚರ್ಮದ್ ಬೆಳ್ಟ್ ಆಕದ ಬುಟ್ಟವ್ರಂತೆ ನಿಜ್ವೆ?

ಮದ್ಲು ಆರೆಸ್ಸೆಸ್‌ನವ್ರು ಅಂದ್ರೆ ಯಾರು ಅಂತ ಏಳಣ್ಣ

ಏ.. ಅದೆ ಕಾಕಿ ಚಡ್ಡಿ ಆಕ್ಯಂಡು, ಉಲ್ ಬಡ್ಯ ಕೋಲ್ ತರದ್ ದ್ವಣ್ಣೆ ಇಡ್ಕಂಡು ಬಂದು ರಾಮ್ ಮಂದ್ರ ಕಟ್ತಿವಿ ಅಂತ ದುಡ್ ಈಸ್ಕಂಡು ಕರ್ಚ್ ಮಾಡ್ಕಳದು, ಹಿಂದುಗಳ್ಯಲ್ಲ ಒಂದು ಉಳ್ದವ್ರೆಲ್ಲ ಬ್ಯಾರೆ ಅಂತ ಏಳ್ಕಂಡು ತಿರ್ಗದು ಮಾಡ್ತರಲ ಅವ್ರು.

ಅವ್ರು ಚಡ್ಡಿಗು ಬೆಳ್ಟ್ ಆಕ್ತರ? ಯಾಕೆ ಚಡ್ಡಿ ಜಾರ್ತದೆ ಅಂತನ?

ಆ ಬೆಳ್ಟ್ ಆಕಿದ್ರೂ ಒಂದೊಂದ್ ಸತಿ ಜಾರ್ಕತ್ತದೆ, ಇನ್ನ ಬ್ಯಳ್ಟ್ ಆಕದೇ ಓದ್ರೆ ಅಷ್ಟೆಯ!

ಅಯ್ತು, ಚರ್ಮದ್ ಬೆಳ್ಟೇ ಚನ್ನಾಗಿರ್ತದೆ, ಇಷ್ಟ್ ದಿನ ಚರ್ಮದ್ದೇ ಆಕ್ಯಂಡು ಈಗ ಯಾಕೆ ಅದ ಬದಲಾಯಿಸ್ತರಂತೆ? ದುಡ್ ಕುಣಿತಾ ಇರ್ಬೇಕು.

ಅದಲ್ಲ, ಅದು ದನಿನ್ ಚರ್ಮದ್ದು ಅಂತವ

ಮದ್ಲು ಅದೇ ಇತ್ತಲ್ಲಣ್ಣ, ನೀನು ಏಳಿದ್ದೇ ಏಳ್ತೀಯ!

ಇತ್ತಿಚ್ಗೆ ಯಡ್ಯೂರಪ್ಪ ಗೋಹತ್ಯೆ ನಿಷೇಧ ಮಾಡ್ತೀನಿ ಅಂತ ಒಡಾಡ್ತಾ ಅವ್ನಲ್ಲ, ಅದ ಆರೆಸ್ಸೆಸ್ ನವ್ರೆ ಅವನಿಗೆ ಏಳ್ಕೊಟ್ರಂತೆ. ಇದ ಕೇಳಿಸ್ಕಂಡೋರ್‍ಯಾರೋ ಅಲ್ಲ ಕಣ್ರಯ್ಯ, ದನವ ಸಾಯಿಸ್ಬಾರ್ದು ಅಂತೀರಿ, ಆದ್ರೆ ದನಿನ್ ಚರ್ಮದಲ್ಲಿ ಮಾಡಿರೋ ಬ್ಯಳ್ಟ್ ಆಕ್ತಿರಿ, ಇದೇನ್ ತಮಾಷೆ ನಿಮ್ದು ಅಂದ್ರಂತೆ. ಇವ್ರು ಯಾಕೋ ಕ್ಯಲ್ಸ ಕೆಟ್ಟೋಗಂಗದೆ ಅಂದ್ ಬುಟ್ಟು ನಾವು ಇನ್ನ ಚರ್ಮದ್ ಆಕ್ಬಾರ್ದು, ರಬ್ಬರ್ ಬ್ಯಳ್ಟ್ ಅಕ್ಯತ್ತೀವಿ ಅಂತ ತೀರ್ಮಾನ ಮಾಡಿದ್ರಂತೆ.

ಆಯ್ತದಪ್ಪ, ಅವ್ರು ಯಾರ್‍ಯಾರ ಸಿಕ್ಕಿದ್ರೆ ಚಡ್ಡಿ ಮ್ಯಾಲೆ ಆಕದ್ರಿಂದ ಆಕ್‌ದಿದ್ರೂ ಐಡ್ಯ ಕೊಡು

ಅವ್ರು ನಾವ್ಯಲ್ಲ ಏಳಿದ್ ಕೇಳದಿಲ್ಲ, ನಾಗಪುರ್ದಲ್ಲಿ ಅವ್ರ ಗುರಗಳವ್ರೆ, ಅವ್ರು ಏಳಿದ್ರೆ ಕೇಳ್ತರೆ ಅಷ್ಟೆಯ.

ಈ. ಬಸವರಾಜು

ಅವ್ರೆ ಇದ್ನೂ ಏಳ್ಯವ್ರೋ?

ಹೌದು. ಅಮ್ಯಾಲೆ ಪೇಪ್ರಿನವ್ರು ಸ್ವಾಮಿ ಚಡ್ಡಿ ಬುಟ್ಟು ಪ್ಯಾಂಟ್ ಆಕಂಗ್ ಮಾಡಬವುದಲ್ಲ? ಅಂದ್ರಂತೆ. ಅದ್ಕೆ ಆ ತಾತಯ್ಯ ಇಲ್ಲ, ಚಡ್ಡಿ ನಮ್ಗೆ ಬಾವುಟ ಇದ್ದಂಗೆ, ಅದಿಲ್ಲ ಅಂದ್ರೆ ನಮ್ಮನ್ನ ಯಾರೂ ಗುರ್ತು ಇಡ್ಯದಿಲ್ಲ. ಅದ್ಕೆ ನಾವು ಚಡ್ಡಿ ಮಾತ್ರ ಬುಡದಿಲ್ಲ ಅಂದ್ನಂತೆ.

ಒಂದ್ ಸಣ್ ಉಡುಗ್ನೂ ಚಡ್ಡಿ ಆಕಂಡು ವರ್ ಗಡೆ ಓಗದಿಲ್ಲ ಅಂತದೆ, ಅಂತದ್ರಲ್ಲಿ ಇವ್ರು ಚಡ್ಡಿ ಆಕ್ಯಂಡು ರಾಜಾರಸ್ವಾಗಿ ತಿರುಗ್ತರೆ ಅಂದ್ರೆ ನಗ ಬತ್ತದಪ್ಪ. ಓಗ್ಲಿ ದ್ವಣ್ಣೆ ಏನ್ ಮಾಡ್ತರಂತೆ?

ಅದ್ನೂ ಬುಡದಿಲ್ವಂತೆ, ಅದು ಅವ್ರಿಗೆ ಆಯುಧಪೂಜೆ ದಿನ ಪೂಜೆ ಮಾಡಕೆ ಬೇಕಂತೆ

ಯಲ್ರೂ ಆಯ್ದ ಪೂಜೆ ಮಾಡಿದ್ರೆ ಇವ್ರು ದ್ವಣ್ಣೆಗೆ ಪೂಜೆ ಮಾಡ್ಯರೆ?

ಏ.. ಅದೇ ಅವ್ರಿಗೆ ಆಯುದವಂತೆ!

ಇವ್ರೆಲ್ಲ ಓಬೀರಾಯನ್ ಕಾಲ್ದಲಿರಂಗೆ ಕಾಣ್ತರಪ್ಪ

ಅವ್ರು ಅಂಗೆಯ. ಹಿಂದೆ ನಮ್ದು ಅಂಗಿತ್ತು, ಇಂಗಿತ್ತು ಅಂತ ಏಳ್ಕಳದೇ ಅವ್ರಿಗೆ ಒಂದ್ ಕ್ಯಲ್ಸ. ವಸ್ದು ಸರಿ ಇಲ್ಲ ಅಂತರೆ.

ಆಯ್ತು, ಇಷ್ಟೆಲ್ಲ ಆಕಿದ್ ಮ್ಯಾಲೆ ಅವ್ರು ಬೂಟಾಕದಿಲ್ವೆ?

ಆಕ್ತರೆ

ಮತ್ತೆ ಅದೂ ಚರ್ಮದ್ದಲ್ವೆ? ಅದ್ನೂ ಬಿಸಾಕ್ತರೆ ಅನ್ನು?

ಸದ್ದಿಕಾಕ್ಯಂಡವ್ರೆ. ಯಾರ್‍ಯಾರ ಕೇಳಿದ್ರೆ ಅವರ ತಾತಯ್ಯನ್ನ ಕೇಳ್ತರೆ. ಆಯ್ತು ಅದ್ನೂ ಬಿಸಾಕಿ ಅಂದ್ರೆ ಅಂಗೇ ಮಾಡ್ತರೇನೋ.

ಯಾಕೆ ಅವ್ರಿಗೆ ಸ್ವಂತ ಬುದ್ದಿ ಇಲ್ವೆ? ಸಣ್ಣಪುಟ್ಟದ್‌ಕ್ಕೆಲ್ಲ ಅದ್ಯಾರ್‍ನೋ ಕೇಳ್ತರಂತಲ?

ಅವ್ರಿಗೆ ಸ್ವಂತ ಬುದ್ದಿ ಇಲ್ಲ ಅನ್ನದ್ಕೆ ಇದೇ ಉದಾರ್ಣೆ.

ಅವ್ರು ಸಕ್ರೆ ತಿನ್ನಕುಲ್ವೆ?

ತಿಂತರೆ, ಯಾಕೆ?

ಆದ್ಕೆ ದನಿನ್ ಮೂಳೆ ಪುಡಿ ಬ್ಯರುಸ್ತರಂತೆ, ಅದ್ಯಂಗೆ ತಿಂದರು?

ಯಣ್ಣ, ನಿನ್ನಂತನಿದ್ರೆ ಅವ್ರು ಇಲ್ಲ ಚಡ್ಡಿ - ದ್ವಣ್ಣೆ ಬುಡ್ಬೇಕು ಇಲ್ಲ ಊಟ ಮಾಡದ್ ಬುಡ್ಬೇಕು ಅಂಗಾಯ್ತದೆ.

ದಾವಣಗೆರೆಯಲ್ಲಿ ಮತ್ತೆ ಕೋಮುಗಲಭೆ ಸ್ಫೋಟಿಸಿದೆ. ಮನುಷ್ಯ-ಮನುಷ್ಯರ ನಡುವೆ ಸಂಶಯ, ಅಪನಂಬಿಕೆ ಬಿತ್ತುವ ಕೋಮುವಾದಿ ಸಂಚುಗಳ ಪರಿಣಾಮಗಳು ಇಂತಹ ಅನಾಗರೀಕ ಕೋಮು ಘರ್ಷಣೆಗಳಲ್ಲಿ ವ್ಯಕ್ತವಾಗುತ್ತಿದೆ.ಕ್ರಿಶ್ಚಿಯನ್ ಪಾದ್ರಿಯೊಬ್ಬರ ಮೇಲೆ ಸಂಘ ಪರಿವಾರ ನಡೆಸಿರುವ ತೀವ್ರ ಹಲ್ಲೆ, ಆ ನಂತರದ ಒಂದು ಗಂಭೀರ ಬೆಳವಣಿಗೆಯಾಗಿದೆ.

ದಾವಣಗೆರೆ ಕೋಮುಗಲಭೆ

ಒಂದು ಪ್ರತ್ಯಕ್ಷ ವರದಿ

ಕೆ.ಎಲ್.ಭಟ್
ದಾವಣಗೆರೆ

8 ಗಂಟೆಗೆ ದಾವಣಗೆರೆ ವಿನೋಬನಗರ ಬಡಾವಣೆಯ 2ನೇ ಮುಖ್ಯರಸ್ತೆಯ 10ನೇ ಕ್ರಾಸ್ ಬಳಿಯ ಮಸೀದಿ ಎದುರು ಮದುವೆಯ ಮೆರವಣಿಗೆ ನಿಂತು ಧ್ವನಿವರ್ಧಕದ ಹಾಡು, ಕುಣಿತದ ಕಾರಣದಿಂದ ಎರಡು ಕೋಮಿನ ಮಧ್ಯೆ ಮಾತಿನ ಚಕಮಕಿ ತಳ್ಳಾಟದಿಂದ ಆರಂಭವಾದ ಘರ್ಷಣೆಯು 24, ಶುಕ್ರವಾರ ವಿಕೋಪಕ್ಕೆ ಹೋಗಿ, ನಗರವನ್ನು ತಲ್ಲಣಗೊಳಿಸಿತು.

★

2. ನಗರದ ಹಳೆಯ ಊರಿನಿಂದ ಮದುವೆ ಮೆರವಣಿಗೆ ವಿನೋಬ ನಗರದ ಮೂಲಕ ನಿಜಲಿಂಗಪ್ಪ ಬಡಾವಣೆಯ ಸಮುದಾಯಭವನಕ್ಕೆ ಹೋಗುವಾಗ ಮಸೀದಿ ಎದುರು ನಿಂತು ಹಾಡು, ಕುಣಿತ ನಡೆಸುವುದು ಕಂಡ ಅಲ್ಪಸಂಖ್ಯಾತ ಯುವಕರಲ್ಲಿ ಕೆಲವರು (ಆಗ ತಾನೇ ಪ್ರಾರ್ಥನೆ ಮುಗಿಸಿ ಬಂದವರು) ಮಸೀದಿ ಎದುರಿನಿಂದ ಮುಂದೆ ಹೋಗಲು ಟ್ರಾಕ್ಟರ್ ಡ್ರೈವರ್‌ಗೆ ತಿಳಿಸಿದಾಗ, ಡೀಸೆಲ್ ಖಾಲಿಯಾಗಿದೆ ಎಂದು ಮಾತಿಗೆ ಮಾತು ಆರಂಭವಾಗಿ ಜಗಳಕ್ಕೆ ನಾಂದಿಯಾಯಿತು. ಮೆರವಣಿಗೆ ನಡೆಸುತ್ತಿದ್ದ ಮದುವೆ ಕಡೆಯವರು ಸ್ವಲ್ಪ ಸಮಯದಲ್ಲಿ ಮತ್ತಷ್ಟು ಜನರನ್ನು ಮಸೀದಿ ಎದುರು ಜಮಾಯಿಸಿದರು. ಅಷ್ಟು ಹೊತ್ತಿಗಾಗಲೇ ಪೊಲೀಸರು ಎಸ್.ಪಿ. ಇತ್ಯಾದಿ ಸ್ಥಳಕ್ಕೆ ಆಗಮಿಸಿ ಲಾಠಿ ಚಾರ್ಜ್ ಮಾಡಿ ಉದ್ರಿಕ್ತ ಜನರನ್ನು ಚದುರಿಸಿದರು ಹಾಗೂ



ಉದ್ರೇಕಗೊಳಿಸಲ್ಪಟ್ಟ ಯುವಜನರ ದಂಡು

ಅಲ್ಪಸಂಖ್ಯಾತ ಸಮುದಾಯದ 6 ಯುವಕರನ್ನು ಬಂಧಿಸಿದರು. ರಾತ್ರಿ 11 ರ ಹೊತ್ತಿಗೆ ಪರಿಸ್ಥಿತಿ ಶಾಂತಿಯಾಯಿತು. 144 ಕಲಂ ಜಾರಿಗೊಳಿಸಲಾಯ್ತು.

★

3. 23 ಡಿಸೆಂಬರ್ 2010, ಮರುದಿನ ಹಿಂದೂ ಜಾಗರಣಾ ವೇದಿಕೆ, ಸಂಘ ಪರಿವಾರದವರು ದಾವಣಗೆರೆಯ ಜಯದೇವ ವೃತ್ತದಿಂದ ಗಾಂಧಿ ವೃತ್ತಕ್ಕೆ, ನಂತರ ಡಿ.ಸಿ.ಕಛೇರಿಗೆ ದೊಡ್ಡ ಮೆರವಣಿಗೆ ಮೂಲಕ ಮುಸ್ಲಿಂ ವಿರೋಧಿ ಘೋಷಣೆ, ಭಾಷಣಗಳ ಮೂಲಕ ಪರಿಸ್ಥಿತಿಯನ್ನು ಉಲ್ಬಣಗೊಳಿಸಲು ಮತ್ತು ಕೆದಕಲು ಪ್ರಯತ್ನಪಟ್ಟರು. "ಯಾವ ಮಸೀದಿಗಳಲ್ಲಿಯೂ ರಾತ್ರಿಯಿಂದ ಬೆಳಗಿನವರೆಗೆ ಮೈಕ್ ಬಳಸಬಾರದು ಹಿಂದುಸ್ತಾನದಲ್ಲಿ ಹಿಂದೂಗಳಿಗೆ ಜೀವನ ಮಾಡುವುದು ಕಷ್ಟ. ಕಿಡಿಗೇಡಿತನ ನಡೆಯದಂತೆ ಎಲ್ಲಾ ಮಸೀದಿಗಳಿಂದ ಆಡಳಿತದಿಂದ ಮುಚ್ಚಳಿಕೆ ಬರೆಸಿಕೊಡಬೇಕು, ಗಲಭೆ ನಡೆಸಿ, ಅನೇಕ ಮಹಿಳಾ, ಮಕ್ಕಳ ಮೇಲೆ ಹಲ್ಲೆ ನಡೆಸಲಾಗಿದೆ. ಕುಮ್ಮಕ್ಕು ನೀಡಿದ 60 ರಿಂದ 70 ಜನರನ್ನು ಬಂಧಿಸಬೇಕು" ಎಂಬ ಬೇಡಿಕೆ, ಸಂಘ ಪರಿವಾರದ ಮುಖಂಡರದ್ದು. ಮೆರವಣಿಗೆಯಲ್ಲಿ ಸುಮಾರು 500 ರಿಂದ 800 ಜನ ಇದ್ದ ವರದಿ. ಡಿ.ಸಿ. ಎಸ್.ಪಿ.ಗಳು ಮೆರವಣಿಗೆ ನಡೆಸಿದವರೊಂದಿಗೆ ಮಾತನಾಡಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿ, ಶಾಂತಿ, ಸೌಹಾರ್ದತೆಗೆ ಮನವಿ ಮಾಡಿದ್ದಾರೆ.

★

4. ಅದೇ ದಿನ ಮುಸ್ಲಿಂ ಸಮುದಾಯದವರು ಡಿವೈಎಸ್‌ಪಿ ಕಛೇರಿ ಎದುರು ಧರಣಿ ನಡೆಸಿ "ನಿನ್ನೆ ದಿನ ಗಲಭೆ ಬಗ್ಗೆ ಬರೇ ಮುಸ್ಲಿಂ ಸಮುದಾಯದ 6 ಯುವಕರನ್ನು ಬಂಧಿಸಿ ಪಕ್ಷಪಾತ ಮಾಡಿದ್ದಾರೆ. ನಿಜವಾಗಿ ಗಲಭೆಗೆ ಪ್ರಚೋದಿಸಿದ ಮತ್ತು ಗಲಾಟೆ ಮಾಡಿದ ಇನ್ನೊಂದು ಕೋಮಿನವರನ್ನು ಬಂಧಿಸಿಲ್ಲ. ತಾರತಮ್ಯ ಮಾಡಲಾಗಿದೆ. ದೂರು ನೀಡಿದ್ದರೂ, ತಮ್ಮ ದೂರನ್ನು ಸ್ವೀಕರಿಸಿಲ್ಲ. ಬಂಧಿಸಿದ 6 ಜನರನ್ನು ಬಿಡುಗಡೆ ಮಾಡಿ ತಮ್ಮ ದೂರನ್ನು ಸ್ವೀಕರಿಸಬೇಕು" ಎಂಬ ಬೇಡಿಕೆಯಿಟ್ಟರು. ಎರಡೂ ಕಡೆಯ ಮುಖಂಡರ ಶಾಂತಿ ಸಭೆ ಕರೆಯುವುದಾಗಿ ಎಸ್.ಪಿ. ಮತ್ತು ಡಿ.ಸಿ. ಭರವಸೆಯಿತ್ತ ನಂತರ ಧರಣಿಯನ್ನು ನಿಲ್ಲಿಸಲಾಯ್ತು.

ಡಿಸೆಂಬರ್ 21 ಶುಕ್ರವಾರ ಮಧ್ಯಾಹ್ನ ಸುಮಾರು 1.30 ಕ್ಕೆ ಪುನಃ ವಿನೋಬ ನಗರದ ಮಸೀದಿ ರಸ್ತೆಯಲ್ಲಿ ಹಿಂದೂ ಮುಸ್ಲಿಂ ಕೋಮಿನ ಕೆಲ ಯುವಕರ ಮಧ್ಯೆ, 22 ರ ಘಟನೆ ಬಗ್ಗೆ ಮಾತಿನ ಚಕಮಕಿಯಾಗಿ ಪರಿಸ್ಥಿತಿ ಬಿಗಡಾಯಿಸಿತು. ಎರಡೂ ಕೋಮಿನ ಸಾವಿರಾರು ಜನ ಸುತ್ತಮುತ್ತ ಜಮಾಯಿಸಿದರು. ಸುಮಾರು 35 ದ್ವಿಚಕ್ರ, ತ್ರಿಚಕ್ರ, ಕಾರುಗಳ ಮೇಲೆ ಧಾಳಿ ಮಾಡಲಾಯ್ತು. 25 ರಿಂದ 30 ಮನೆಗಳ ಮೇಲೆ ಕಲ್ಲು ತೂರಿ ಹಾನಿ ಮಾಡಲಾಗಿದೆ. ಇದರಲ್ಲಿ ಬಹುದೊಡ್ಡ ಹಾನಿಗೆ ಒಳಗಾಗಿದ್ದು ಅಲ್ಪಸಂಖ್ಯಾತರವು. ನಗರದ ವಿವಿಧ ಭಾಗಗಳಿಂದ ಸಂಘ ಪರಿವಾರದ ಮುಖಂಡರು ಆ ಸ್ಥಳಕ್ಕೆ ಬಂದು, ಪ್ರಚೋದನೆ ಮಾಡಿ, ಗುಂಪು ಸೇರಿಸಿದ ವರದಿಯಿದೆ. ಅಲ್ಪಸಂಖ್ಯಾತರೂ ಗುಂಪು ಸೇರಿದ್ದಾರೆ. ಪೊಲೀಸರು ಲಾಠಿ ಪ್ರಹಾರ ಮಾಡಿ 2 ರಿಂದ 3 ಗಂಟೆಗಳ ನಂತರ ಪರಿಸ್ಥಿತಿಯನ್ನು ನಿಯಂತ್ರಣಗೊಳಿಸಿದ್ದಾರೆ. ಸುಳ್ಳುಸುದ್ದಿ, ಅಂತೆಕಂತೆಗಳು ಹಬ್ಬಿದ್ದರೂ, ಅಶಾಂತಿ ಮುಂದುವರೆಯದೇ 144 ಕಲಂ 3 ದಿನಗಳ ಕಾಲ ಜ್ಯಾರಿಗೊಳಿಸಿ ತಮಿಳುನಾಡು, ಮತ್ತಿತ್ತರ ಕಡೆಯಿಂದ ಪೊಲೀಸರನ್ನು ತರಿಸಿ ಶಾಂತಿ ಕಾಪಾಡಲಾಗಿದೆ. ಸುಮಾರು 36 ಜನರನ್ನು ಮೊನ್ನೆಯವರೆಗೆ ಬಂಧಿಸಲಾಗಿತ್ತು. ಈ ಮಧ್ಯೆ ಗಲಾಟೆ ನಡೆಯುತ್ತಿದ್ದಾಗ 3 ಜನ ಮಾಧ್ಯಮದವರ ಮೇಲೆ ಅವರು ಫೋಟೋ ತೆಗೆಯುವಾಗ, ವರದಿ ಮಾಡುವಾಗ ಹಲ್ಲೆ ನಡೆಸಲಾಗಿದೆ. ಮಾಧ್ಯಮದವರು 25ರಂದು ಶನಿವಾರ ಪ್ರತಿಭಟನಾ ಮೆರವಣಿಗೆ ನಡೆಸಿ, ಹಲ್ಲೆ ನಡೆಸಿದವರ ಬಂಧನಕ್ಕೆ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ. ಒಟ್ಟು 5 ಮೊಕದ್ದಮೆಗಳು ದಾಖಲಾದ ವರದಿಯಿದೆ. ವಿನೋಬನಗರ ಸುತ್ತುಮುತ್ತ 3 ದಿನ ಅಂಗಡಿ ಮುಂಗಟ್ಟು ಮುಚ್ಚಲಾಗಿದ್ದು ಕರ್ಫ್ಯೂ ವಾತಾವರಣವಿತ್ತು. ಮಂಗಳವಾರ 28 ರಿಂದ ಪರಿಸ್ಥಿತಿ ತಿಳಿಯಾದ ನಂತರ ಕಲಂ 144 ನ್ನು ತೆಗೆಯಲಾಯಿತು.



ಬಂಧನದಲ್ಲಿ ಪೊಲೀಸರ ಪಕ್ಷಪಾತ ವಿರೋಧಿಸಿ ಅಲ್ಪಸಂಖ್ಯಾತರ ಪ್ರತಿಭಟನೆ

18.12.2010 ಶನಿವಾರ ದಾವಣಗೆರೆಯಲ್ಲಿ "ಹಿಂದೂ ಸಮಾಜೋತ್ಸವ" ವನ್ನು ದೊಡ್ಡದಾಗಿ ಮಾಡಲಾಗಿತ್ತು. ನಗರವಿಡೀ ಕಟೌಟ್, ಬಂಟಿಂಗ್ಸ್, ಬ್ಯಾನರ್ಸ್‌ಗಳಿಂದ ಕೇಸರಿಗೊಳಿಸಲಾಗಿತ್ತು. ಘಟನೆ ನಡೆದ ವಿನೋಬನಗರದ 2ನೇ ಮುಖ್ಯರಸ್ತೆಯನ್ನು ಕೇಸರಿಗೊಳಿಸಲಾಗಿತ್ತು. ಕಲ್ಲಡ್ಕ ಡಾ.ಪ್ರಭಾಕರ್ ಭಟ್, ವಿಶ್ವ ಹಿಂದೂ ಪರಿಷತ್ ತೊಗಾಡಿಯಾ ಸೇರಿ ಸಂಘ ಪರಿವಾರದವರು ಹಾಗೂ ಜಿಲ್ಲೆಯ 5 ರಿಂದ 5 ಬಿಜೆಪಿ ಶಾಸಕರು, ಲೋಕಸಭಾ ಸದಸ್ಯರು ಕೆಲವು ಸ್ವಾಮಿಗಳು (ಚಿತ್ರದುರ್ಗ ಸಿರಿಗೆರೆ ಮಠದವರು ಇರಲಿಲ್ಲ) ಅಂದು ಸಂಜೆಯ ಸಭೆಯಲ್ಲಿ ಕೇಸರಿಪಡೆ ಭಾಷಣ ನಡೆಸಿದ್ದರು. ಅದಕ್ಕೂ ಮುಂಚೆ ವಿನೋಬನಗರದ 1ನೇ ಮುಖ್ಯರಸ್ತೆ, ಅಂದರೆ ಕೋಮು ಘರ್ಷಣೆ ನಡೆದ 2ನೇ ಮುಖ್ಯರಸ್ತೆಯಿಂದ 200 ಅಡಿ ದೂರ ಮತ್ತು ನಗರದ ಇತರ 3 ಮೂಲೆಗಳಿಂದ "ಹಿಂದೂ ಸಮಾಜೋತ್ಸವ"ದ 4 ಮೆರವಣಿಗೆಗಳು ಸಭೆ ನಡೆದ ಹೈಸ್ಕೂಲು ಮೈದಾನಕ್ಕೆ ಬಂದಿದ್ದವು. ಸಾವಿರಾರು ಜನ ಸಭೆಯಲ್ಲಿ ಭಾಗವಹಿಸಿದ್ದರು.

1992 ರಲ್ಲಿ ದೊಡ್ಡ ಕೋಮುಗಲಭೆ ದಾವಣಗೆರೆಯಲ್ಲಿ ನಡೆದದ್ದು 1 ತಿಂಗಳ ಕಾಲ ಕರ್ಫ್ಯೂ 144, ಕಲಂ ಜ್ಯಾರಿಯಿದ್ದು, ಆಗ 16 ಜನ ಪ್ರಾಣ ಕಳಕೊಂಡಿದ್ದರು. ಆ ಘಟನೆ ನಡೆದ 1 ರಿಂದ 2 ವರ್ಷಗಳ ಕಾಲ ಸಣ್ಣಪುಟ್ಟ ಘಟನೆ ನಡೆದಿದ್ದರೂ ನಂತರ ಬಹುತೇಕ ಶಾಂತಿಯಿತ್ತು. 2008 ರಲ್ಲಿ ಬಿಜೆಪಿ ಅಧಿಕಾರಕ್ಕೆ ರಾಜ್ಯದಲ್ಲಿ ಬಂದ ನಂತರ ಕೋಮು ಸಂಘರ್ಷ ನಡೆಯುವ ವಾತಾವರಣ 2 ರಿಂದ 3 ಬಾರಿ ನಡೆದಿತ್ತು. ಮುಖ್ಯವಾಗಿ ದಸರಾ ಮೆರವಣಿಗೆ ಸಂದರ್ಭದಲ್ಲಿ. 2008 ರ ಸೆಪ್ಟೆಂಬರ್‌ನಲ್ಲಿ ಪ್ರಥಮ ಬಾರಿಗೆ ದಾವಣಗೆರೆ ತಾಲ್ಲೂಕಿನ ಬಾಡಾ ಗ್ರಾಮದಲ್ಲಿ ಮತಾಂತರದ ಹೆಸರಿನಲ್ಲಿ ಚರ್ಚ್ ಮೇಲೆ, ಅದಾಗಿ 4 ರಿಂದ 6 ದಿನಗಳಲ್ಲಿ ದಾವಣಗೆರೆ ನಗರದ 2 ರಿಂದ 3 ಚರ್ಚ್‌ಗಳ ಮೇಲೆ ಧಾಳಿಯನ್ನು ಸಂಘ ಪರಿವಾರ ನಡೆಸಿತ್ತು. ಕೋಮುದ್ವೇಷದಿಂದ ಹಿಂದೂಗಳ, ಮುಖ್ಯವಾಗಿ ದಲಿತರ, ಹಿಂದುಳಿದವರ ಮತಬ್ಯಾಂಕನ್ನು ಬಿಜೆಪಿ ಗಳಿಸಿದೆ, ಕ್ರೋಢೀಕರಿಸಿದೆ.

ದಾವಣಗೆರೆಯ "ಮ್ಯಾಂಚೆಸ್ಟರ್" ಕುಸಿತ, ಸಿ.ಪಿ.ಐ.ಗೆ ಹಿನ್ನಡೆ, ಕಾಂಗ್ರೆಸ್ಸಿನ ಮೆದು ಕೋಮುವಾದ ಜಾತ್ಯಾತೀತ ಶಕ್ತಿಗಳ ಪ್ರಭಾವ ಕುಸಿತ, ದೇಶದ ರಾಜಕಾರಣದಲ್ಲಿ ಕೋಮುವಾದಿಗಳ ಮೇಲೆ ಪ್ರಭಾವ ಬೀರಿದಂತೆ ದಾವಣಗೆರೆಯಲ್ಲೂ ಅದು ಕಂಡಿದೆ. ಮುಖ್ಯವಾಗಿ ಲಿಂಗಾಯತ ಜನಾಂಗವೂ ಬಸವ ತತ್ವವನ್ನು ಪೂಜೆ, ಭಾಷಣಕ್ಕೆ ಸೀಮಿತಗೊಳಿಸಿ ಕೋಮುವಾದೀ ಬಿಜೆಪಿ ಪರ ಹೆಚ್ಚು ಒಲವು ತೋರಿಸುತ್ತಿದೆ. ದಲಿತರನ್ನು ಹಿಂದುಳಿದವರನ್ನು ಸಂಘ ಪರಿವಾರ ತನ್ನ ಅಜೆಂಡಾಕ್ಕೆ ಬಳಸುವಲ್ಲಿ ಸಫಲವಾಗಿದೆ. ಅಲ್ಪಸಂಖ್ಯಾತ ಮುಸ್ಲಿಂ, ಕ್ರಿಶ್ಚಿಯನ್ ವಿರೋಧಿ ಪ್ರಚಾರ ನಡೆಸುವಲ್ಲಿ ರಾಜ್ಯಕೇಂದ್ರವಾದ ದಾವಣಗೆರೆ ಜಿಲ್ಲೆಯಲ್ಲಿ ಸಂಘ ಪರಿವಾರ ಯಶಸ್ವಿಯಾದಂತೆ ಇದೆ. ಬಹುಸಂಖ್ಯಾತ ಹಿಂದೂಗಳ ಲಿಂಗಾಯತರ ಓಟು

ಪುಟ 11 ಕ್ಕೆ

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಚುನಾವಣೆ

ಕೋಮುವಾದಿ ಬಿಜೆಪಿಯ ಪ್ರಾಬಲ್ಯ ಅತಿ ವಿಶ್ವಾಸದಲ್ಲಿ ಎಡವಿದ ಕಾಂಗ್ರೆಸ್

ಕೆಲವೆಡೆ ಗಮನ ಸೆಳೆದ ಸಿಪಿಐ(ಎಂ) ಸ್ಪರ್ಧೆ ಸವಾಲುಗಳು - ಸಾಧನೆಗಳು

ದಕ್ಷಿಣ ಕನ್ನಡ ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳು ಮುಗಿದಿವೆ. ನಿರೀಕ್ಷೆಯಂತೆಯೇ ಬಿಜೆಪಿ ಮೇಲುಗೈ ಸಾಧಿಸಿದೆ. ಜಿಲ್ಲಾ ಪಂಚಾಯತ್‌ನಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಭರ್ಜರಿ ಜಯ ದಾಖಲಿಸಿದೆ. 35 ಸದಸ್ಯ ಬಲದ ಜಿ.ಪಂ.ನಲ್ಲಿ 24 ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರೆ, ಕಾಂಗ್ರೆಸ್ 11 ಸ್ಥಾನಗಳಲ್ಲಿ ಗೆದ್ದು ಮುಖಭಂಗ ಅನುಭವಿಸಿದೆ.

ಜೆಡಿಎಸ್ ಶೂನ್ಯ ಸಂಪಾದನೆ ಮಾಡಿದ್ದು, ಪುತ್ತೂರಿನಲ್ಲಿ ಜಿಲ್ಲೆಯ ಏಕೈಕ ತಾ.ಪಂ. ಕ್ಷೇತ್ರದಲ್ಲಿ ಗೆಲುವು ಸಾಧಿಸಿದೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಸ್ಪರ್ಧೆ ನಡೆಸಿಲ್ಲ ಎಂಬುದು ಗಮನಾರ್ಹ.

ಜಿಲ್ಲೆಯ ಐದು ತಾಲೂಕು ಪಂಚಾಯತ್‌ಗಳು ಮತ್ತು ಜಿಲ್ಲಾ ಪಂಚಾಯತ್ ಕಮಲ ಪಕ್ಷದ ಬುಟ್ಟಿಗೆ ಬಿದ್ದಿದ್ದು ಈ ಬಾರಿಯ ವಿಶೇಷ.

ಬಿಜೆಪಿಯ ಐಕ್ಯ ಹೋರಾಟ

ದಕ್ಷಿಣ ಕನ್ನಡ ಅಂದರೆ ರಾಜ್ಯ ಬಿಜೆಪಿಯ ಶಕ್ತಿಕೇಂದ್ರ ಎಂದೇ ಗುರುತಿಸಲಾಗುತ್ತಿದೆ. ಬಿಜೆಪಿಗೆ ಆರಂಭದ ದಿನಗಳಲ್ಲಿ ಶಾಸಕರನ್ನು ವಿಧಾನಸಭೆಗೆ ಕಳುಹಿಸಿದ ಖ್ಯಾತಿ(?) ಕೂಡ ಈ ಜಿಲ್ಲೆಯದ್ದೇ. ಕೋಮು ವಿಷಬೀಜ ಬಿತ್ತಿ, ಮನುಷ್ಯರ ನಡುವೆ ಕಂದಕ ನಿರ್ಮಿಸಿದ, ಸಮಾಜೋತ್ಸವ, ಧಾರ್ಮಿಕತೆ ಮೂಲಕ ಮತಾಂಧತೆ ಮೂಡಿಸಿ ಸಂಘ ಪರಿವಾರ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿರುವ ಕಾರ್ಯಕ್ಷೇತ್ರ ದಕ್ಷಿಣ ಕನ್ನಡ.



ಸಿಮ್ಮಿಸಿ

ಯಡಿಯೂರಪ್ಪ ಮತ್ತು ಆತನ ಚೆಡ್ಡಿ ಪಡೆ ಭೂ ಹಗರಣದ ಆರೋಪಕ್ಕೆ ಸಿಲುಕಿದಾಗ, ಪಕ್ಷ ಮತ್ತು ಸರ್ಕಾರ ಮುಜುಗರಕ್ಕೆ ಈಡಾದ ಬಳಿಕ ನಡೆದ ಚುನಾವಣೆ ಇದು. ಈ ಚುನಾವಣೆಯಲ್ಲಿ ಯಾವುದೇ ಕಾರಣಕ್ಕೂ ಪಕ್ಷದ ಮರ್ಯಾದೆ ಉಳಿಸಬೇಕು ಎಂದು ಹಠಕ್ಕೆ ಬಿದ್ದವರಂತೆ ಸಂಘದ ಕಾರ್ಯಕರ್ತರು ಪ್ರಚಾರ ನಡೆಸಿದರು. ಎಲ್ಲ ನೈತಿಕತೆಯನ್ನೂ ಗಾಳಿಗೆ ತೂರಿ, ವ್ಯಾಪಕ ಹಣ ಹಂಚಿ ಅಧಿಕಾರ ದುರುಪಯೋಗಪಡಿಸಿಕೊಂಡು ನಡೆಸಿದ ಪ್ರಚಾರ ಪಕ್ಷಕ್ಕೆ ಫಲ ನೀಡಿದ್ದೇನೋ ಹೌದು. ಚುನಾವಣಾ ಸಮಯಕ್ಕೆ ಸಮಾಜೋತ್ಸವ, ಸಿಎಂ ಆಪ್ತ ಸಲಹೆಗಾರ ರವೀಂದ್ರ ಅವರಿಂದ ಹಿಡಿದು ಅಧಿಕಾರಿಗಳ ದುರುಪಯೋಗ ನಡೆಯಿತು. ಜೆಡಿಎಸ್, ಕಾಂಗ್ರೆಸ್ ನಾಯಕರನ್ನು ಸೆಳೆದು ಟಿಕೆಟ್ ನೀಡಲಾಯಿತು. ಎಲ್ಲ ರಣತಂತ್ರಗಳನ್ನೂ ಹೆಣೆಯಲಾಯಿತು.

ಬಿಜೆಪಿ ಮಟ್ಟಿಗೆ ಇಂಪ್ರೆಸ್ಸಿವ್ ಎನ್ನಬಹುದಾದ ಫಲಿತಾಂಶ ಸಿಕ್ಕಿದರೂ ಸಾಕಷ್ಟು ಹಿನ್ನಡೆಗಳಾಗಿವೆ. ಪಕ್ಷದ ಭದ್ರಕೋಟೆ ಎನಿಸಿದ ಗೋಳ್ತಮಜಲು, ಗುತ್ತಿಗಾರು, ಕಡಬ ಮುಂತಾದ ಕ್ಷೇತ್ರಗಳಲ್ಲಿ ಪಕ್ಷ ಹೀನಾಯ ಸೋಲು ಅನುಭವಿಸಿದೆ. ಬಿಜೆಪಿ ಜಿಲ್ಲಾಧ್ಯಕ್ಷ ಪದ್ಮನಾಭ ಕೊಟ್ಟಾರಿ ಮತ್ತು ಆರ್‌ಎಸ್‌ಎಸ್ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟರ ಕ್ಷೇತ್ರ ಗೋಳ್ತಮಜಲಿನಲ್ಲಿ ಸೋಲು. ಜಿ.ಪಂ. ಮಾಜಿ ಅಧ್ಯಕ್ಷ ವೆಂಕಟ ದಂಬೆಕೋಡಿ ಸ್ಪರ್ಧಿಸಿದ್ದ ಗುತ್ತಿಗಾರಿನಲ್ಲಿ ಪರಾಭವ ಬಿಜೆಪಿಯ ಗೆಲುವಿಗೆ ಕಾರ್ಮೋಡ ಕವಿಯುವಂತೆ ಮಾಡಿದೆ. ಪುತ್ತೂರು ಮತ್ತು ಬೆಳ್ತಂಗಡಿ ಹೊರತುಪಡಿಸಿದರೆ ಎಲ್ಲ ತಾಲೂಕು ಪಂಚಾಯತ್‌ಗಳಲ್ಲಂತೂ ಕಾಂಗ್ರೆಸ್‌ನಿಂದ ನಿಕಟ ಸ್ಪರ್ಧೆ ಎದುರಿಸಿದ್ದರೂ ಕೂದಳೆಲೆ ಅಂತರದಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ.

ಕಾಂಗ್ರೆಸ್‌ನ ನೀರಸ ಪ್ರದರ್ಶನ

ವಿಧಾನಸಭೆ ಚುನಾವಣೆಯಲ್ಲಿ ಚಿಗುರಿದ್ದ ಕಾಂಗ್ರೆಸ್ ತನ್ನ ಆಂತರಿಕ ಕಚ್ಚಾಟದಿಂದ ಮಂಗಳೂರು ಲೋಕಸಭೆ ಕ್ಷೇತ್ರವನ್ನು ಗೆಲ್ಲುವ ಸುವರ್ಣ ಅವಕಾಶವನ್ನು ಕೈಚೆಲ್ಲಿತು. ಮತ್ತೆ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಉತ್ತಮ ಪ್ರದರ್ಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ಈ ಬಾರಿಯ ಚುನಾವಣೆಯನ್ನು ಆತ್ಮವಿಶ್ವಾಸದಿಂದಲೇ ಎದುರಿಸಿತು. ಅತಿಯಾದ ಆತ್ಮವಿಶ್ವಾಸ ಕೂಡ ಕಾಂಗ್ರೆಸ್‌ಗೆ ಮುಳುವಾಯಿತು. ಕೆಲವೊಂದು ಕ್ಷೇತ್ರಗಳಲ್ಲಿ ಬಂಡಾಯದ ಬಿಸಿಯನ್ನೂ ಎದುರಿಸಿತು. ಕಾಂಗ್ರೆಸ್‌ನ ಒಳಜಗಳ, ಕಚ್ಚಾಟ ಮತ್ತು ಕಾಲೆಳೆಯುವ ಚಟುವಟಿಕೆ ಲಾಭವಾಗಿದ್ದು ಎದುರಾಳಿ ಬಿಜೆಪಿಗೆ. ವ್ಯಕ್ತಿ ಪ್ರತಿಷ್ಠೆಯ ಹೋರಾಟಕ್ಕೆ ವೇದಿಕೆಯಾದ ಗೋಳ್ತಮಜಲಿನಲ್ಲಿ ಗೆದ್ದದ್ದೇ ಜಿಲ್ಲಾ ಕಾಂಗ್ರೆಸ್‌ಗೆ ಒಂದು ಹೆಮ್ಮೆಯ ವಿಚಾರ. ಕಾಂಗ್ರೆಸ್ ಪ್ರಾಬಲ್ಯದ ಮೂಲ್ಕಿ- ಮೂಡಬಿದಿರೆ, ಉಳ್ಳಾಲ, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ನೀರಸ ಪ್ರದರ್ಶನ ಪಕ್ಷದ ಮುಜುಗರ ಅನುಭವಿಸಿತು. ಜಿಲ್ಲೆಯ ಒಟ್ಟಾರೆ ಫಲಿತಾಂಶ ಮುಖಭಂಗಕ್ಕೂ ಒಳಗಾಯಿತು. ಬಿಜೆಪಿಯ ಸಂಘಟಿತ ಶಕ್ತಿ ಹಾಗೂ ಕಾಂಗ್ರೆಸ್‌ನ ಹುಳುಕುಗಳು ಫಲಿತಾಂಶದಲ್ಲಿ ಪ್ರತಿಫಲನಗೊಂಡಿತು. ತನ್ನದೇ ನಾಯಕರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲಾಗದ ಕಾಂಗ್ರೆಸ್ ಬಿಜೆಪಿಯ ಬಿ ಟೀಂನಂತೆ ಕಾರ್ಯನಿರ್ವಹಿಸುತ್ತಿರುವುದು ಸರ್ವವೇದ್ಯ.

ಲೆಕ್ಕಕ್ಕಿಲ್ಲದ ಜೆಡಿಎಸ್

ಬೆಳ್ತಂಗಡಿಯ ವಸಂತ ಬಂಗೇರಾ ಕಾಂಗ್ರೆಸ್ ಸೇರಿದಾಗಲೇ ಜಿಲ್ಲೆಯಲ್ಲಿ ಜೆಡಿಎಸ್‌ನ ಜಂಗಾಬಲ ಕುಸಿದುಹೋಗಿತ್ತು. ಇನ್ನು ಜಿ.ಪಂ. ಸದಸ್ಯ ಸುಚರಿತ ಶೆಟ್ಟಿ ಸಚಿವ ಕೃಷ್ಣ ಪಾಲೇಮಾರ್ ವಿಶ್ವಾಸಕ್ಕೆ ತಲೆಬಾಗಿ ಬಿಜೆಪಿ ಪಾಳಯಕ್ಕೆ ಜಿಗಿದಾಗ ಮತ್ತೊಂದು ಹಿನ್ನಡೆ ಉಂಟಾಗಿತ್ತು. ಜಿಲ್ಲಾಧ್ಯಕ್ಷ ಬಲರಾಜ ರೈ ಪಕ್ಷ ತೊರೆದ ಬಳಿಕ ಹಲವು ತಿಂಗಳು ಜಿಲ್ಲಾಧ್ಯಕ್ಷ ಸ್ಥಾನವೇ ಇಲ್ಲವಾಗಿತ್ತು. ಕೊನೆಗೂ ಚುನಾವಣೆ ಬಂದಾಗ ಅಭ್ಯರ್ಥಿಗಳನ್ನು ನಿಲ್ಲಿಸಬೇಕಲ್ಲ ಎಂಬ ಕಾರಣಕ್ಕೆ ಚಟುವಟಿಕೆ ನಡೆಯಿತು. ಹಾಗೋ- ಹೀಗೋ ಏಗಿಕೊಂಡು 20 ಉಮೇದುವಾರರನ್ನು ನಿಲ್ಲಿಸಿದಾಗ ಪಕ್ಷಕ್ಕೆ ಸುಸ್ತೋ ಸುಸ್ತು. ಕುಮಾರಸ್ವಾಮಿ ಭೇಟಿ ನೀಡಿದರೂ ಫಲಿತಾಂಶದಲ್ಲಿ ಪ್ರತಿಫಲಿಸಲಿಲ್ಲ. ಪುತ್ತೂರಿನ ಕುಟ್ರುಪಾಡಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇಲ್ಲದ ಕಾರಣ ಜೆಡಿಎಸ್ ಗೆದ್ದುಕೊಂಡಿತು. ನಿರೀಕ್ಷೆ ಹುಟ್ಟಿಸಿದ್ದ ಕೊಣಾಜೆ ಹಾಗೂ ಕಣಿಯೂರು ಸೇರಿದಂತೆ ಕಳೆದ ಬಾರಿ ಗೆದ್ದಿದ್ದ ಐದು ಜಿ.ಪಂ. ಕ್ಷೇತ್ರಗಳಲ್ಲೂ ತೃತೀಯ ಹಾಗೂ ಆ ನಂತರದ ಸ್ಥಾನ ಪಡೆಯಿತು.

ಚಿಗುರುತ್ತಿರುವ ಎಸ್‌ಡಿಪಿಐ

ಮುಸ್ಲಿಂ ಮೂಲಭೂತವಾದಿ ಪಕ್ಷವಾಗಿರುವ ಎಸ್‌ಡಿಪಿಐ ಈ ಚುನಾವಣೆಯಲ್ಲಿ ಚಿಗುರುವ ಲಕ್ಷಣ ತೋರಿಸಿದೆ. ಎಸ್‌ಡಿಪಿಐ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ರಾಜಕೀಯ ಸಂಸ್ಥೆ. ಜಿಲ್ಲೆಯ ಜಾತ್ಯತೀತ ಶಕ್ತಿಗಳಿಗೆ ಇದೊಂದು ದೊಡ್ಡ ಅಪಾಯದ ಕರೆಗಂಟೆ ಎಂದೇ ಹೇಳಬಹುದು. ಸುಮಾರು ಆರೇಳು ಜಿ.ಪಂ. ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ಎಸ್‌ಡಿಪಿಐ ಮಹತ್ವದ ಕಾಣಿಕೆ ನೀಡಿದೆ. ಗಮನಾರ್ಹ ಮತಗಳನ್ನು ಪಡೆಯದಿದ್ದರೂ ಕಾಂಗ್ರೆಸ್‌ಗೆ ಬೀಳಬಹುದಾಗಿದ್ದ ಮತಗಳನ್ನು ಈ ಪಕ್ಷ ಪಡೆದುಕೊಂಡಿದೆ. ಈ ಮೂಲಕ ಜಾತ್ಯತೀತ ಮತಗಳನ್ನು ವಿಭಜಿಸುವ ಪಕ್ಷದ ಉದ್ದೇಶ ಒಂದು ಹಂತದ ಮಟ್ಟಿಗೆ ಯಶಕಂಡಿದೆ. ಹಲವು ಕಡೆಗಳಲ್ಲಿ ಎಸ್‌ಡಿಪಿಐ ಅಭ್ಯರ್ಥಿಗಳನ್ನು ಕಣಕ್ಕಿಳಿಸುವಂತೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರೇ ಮನವೊಲಿಸಿದ್ದಾರೆ. ಹಣಕಾಸಿನ ನೆರವನ್ನೂ ನೀಡಿದ್ದಾರೆ. ಇದು ಈ ಎರಡು ಪಕ್ಷಗಳ ನಡುವಿನ ಆಂತರಿಕ ಸಂಬಂಧದ ಕೈಗನ್ನಡಿಯಾಗಿದೆ.

ಗಮನ ಸೆಳೆದ ಸಿಪಿಎಂ ಸ್ಪರ್ಧೆ

ಈ ಬಾರಿಯ ಚುನಾವಣೆ ಎಡಪಕ್ಷಗಳ ಪಾಲಿಗೆ ಅದರಲ್ಲೂ ಮುಖ್ಯವಾಗಿ ಸಿಪಿಐ(ಎಂ) ಪಾಲಿಗೆ ಮಹತ್ವದ್ದಾಗಿದೆ. ಗ್ರಾಮೀಣ ಪ್ರದೇಶದಲ್ಲಿ ನಿರಂತರ ಹೋರಾಟಗಳು, ಜನ ಸಂಘಟನೆಗಳನ್ನು ಮಾಡಿಕೊಂಡು ಬಂದ ಸಿಪಿಐ(ಎಂ)ಗೆ ತನ್ನ ಸತ್ವ ಪರೀಕ್ಷೆಯ ಕಾಲವಿದು. ದಕ್ಷಿಣ ಕನ್ನಡದಲ್ಲಿ ಪಕ್ಷದ ಪ್ರಭಾವ ಇರುವ ಉಳ್ಳಾಲ ಹಾಗೂ ಬೆಳ್ತಂಗಡಿಯ ಆಯ್ದ ಕೆಲವು ಕ್ಷೇತ್ರಗಳಲ್ಲಿ ಪಕ್ಷ ಚುನಾವಣೆ ಎದುರಿಸುವ ನಿರ್ಧಾರ ಮಾಡಿತ್ತು.

ಮೂಡಬಿದಿರೆಯ ಹೊಸಬೆಟ್ಟು, ಗುರುಪುರದ ಕುಪ್ಪೆಪದವಿನಲ್ಲೂ ಪಕ್ಷ ಸ್ಪರ್ಧೆ ನಡೆಸಿದೆ. ಒಂದೆರಡು ಕ್ಷೇತ್ರಗಳನ್ನು ಹೊರತುಪಡಿಸಿದರೆ ಎಲ್ಲ ಕಡೆಗಳಲ್ಲೂ ಮತದಾರರಿಂದ ಉತ್ತಮ ಪ್ರತಿಸ್ಪಂದನೆ ದೊರೆತಿದೆ. ಬೆಳ್ತಂಗಡಿಯ ಪಾಲಿಗಂತೂ ಉತ್ಸಾಹವನ್ನು ಹೆಚ್ಚಿಸಿದೆ.

ಧರ್ಮಸ್ಥಳದಲ್ಲಿ ಸ್ಪರ್ಧೆಗೆ ಇಳಿದಿದ್ದ ನರ್ಸಿಂಗ್ ವಿದ್ಯಾರ್ಥಿನಿ ರಂಜಿನಿಗೆ 2360 ಮತಗಳು ಸಿಕ್ಕಿವೆ. ಬೆಳ್ತಂಗಡಿಯ ಈ ಕ್ಷೇತ್ರಗಳಲ್ಲಿ ಪಕ್ಷ ಇದೇ ಮೊದಲ ಬಾರಿಗೆ ಸ್ಪರ್ಧೆ ನಡೆಸಿದೆ ಎಂಬುದು ಗಮನಾರ್ಹ ಅಂಶ. ಮೂಡಬಿದಿರೆಯ ಹೊಸಬೆಟ್ಟು ತಾ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಬೆಂಬಲದೊಂದಿಗೆ ಸ್ಪರ್ಧೆ ನಡೆಸಿದ್ದ ಸಿಪಿಐ(ಎಂ)ಗೆ ಉತ್ತಮ ಮತಗಳು ಸಿಕ್ಕಿವೆ.

ಉಳ್ಳಾಲದ ಹರೇಕಳ, ಮುನ್ನೂರು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಾಗದಿದ್ದರೂ ಉತ್ತಮ ಮತಗಳನ್ನು ಪಡೆದುಕೊಂಡಿದೆ. ಇನ್ನು ಸೋಮೇಶ್ವರ ಮತ್ತು ಕೋಟೆಕಾರು ಕ್ಷೇತ್ರಗಳಲ್ಲಿ ಪಕ್ಷದ ಪ್ರದರ್ಶನ ಏನೂ ಸಾಲದಂತಿದೆ. ಕಳೆದ ಸಲ ಎರಡು ತಾಲೂಕು ಪಂಚಾಯತ್ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಸಿಪಿಐ(ಎಂ) ಯಾವುದೇ ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗಿಲ್ಲ. ಎರಡು ಅವಧಿಯ ಹಿಂದೆ ಕೋಟೆಕಾರು ಜಿಲ್ಲಾಪಂಚಾಯತ್‌ನ್ನು ಸಿಪಿಐ(ಎಂ) ಪ್ರತಿನಿಧಿಸಿತ್ತು. ಈಗ ಮೂರನೇ ಸ್ಥಾನಕ್ಕೆ ಸೀಮಿತವಾಗಿದೆ. ಈ ಪ್ರದೇಶಗಳಲ್ಲಿ ಪಕ್ಷದ ಸಂಘಟನೆಗಳು ಸಾಕಷ್ಟು ಬಲಗೊಳ್ಳಬೇಕಾದ ಅಗತ್ಯವಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಳ್ಳಾಲ ಪ್ರದೇಶ ಪಕ್ಷದ ಶಕ್ತಿಕೇಂದ್ರ. ದಶಕಗಳಿಂದ ಪಕ್ಷದ ಜನಪರ ಹೋರಾಟಗಳಿಗೆ ನೇತೃತ್ವ ನೀಡಿದ್ದ ಈ ಪ್ರದೇಶದಲ್ಲಿ ಪಕ್ಷ ತೀವ್ರ ಹಿನ್ನಡೆ ಕಂಡಿರುವ ಬಗ್ಗೆ ಗಂಭೀರ ವಿಮರ್ಶೆ ನಡೆಸಬೇಕಾಗಿದೆ. ಪಕ್ಷದ ಪ್ರಭಾವ ವ್ಯಾಪಕವಾಗಿರುವ ಸೋಮೇಶ್ವರ, ಕೋಟೆಕಾರು, ಉಳ್ಳಾಲ ಪ್ರದೇಶಗಳಲ್ಲಿ ಸಂಘಟನೆಗಳನ್ನು ಗಟ್ಟಿಗೊಳಿಸಿ ಜನಚಳವಳಿಯನ್ನು ಮುನ್ನಡೆಸಬೇಕಾದ ಅನಿವಾರ್ಯತೆಯನ್ನು ಈ ಬಾರಿಯ ಚುನಾವಣೆ ತೋರಿಸಿದೆ.

ಮೂಡಬಿದಿರೆ, ಗುರುಪುರ, ಪುತ್ತೂರು ಮತ್ತು ಬೆಳ್ತಂಗಡಿಯ ಪಕ್ಷದ ಸಮಿತಿಗಳಿಗೆ ಈ ಬಾರಿಯ ಚುನಾವಣಾ ಪ್ರದರ್ಶನ ಉತ್ಸಾಹವನ್ನು ನೀಡಿದೆ. ಇತ್ತೀಚೆಗಷ್ಟೇ ಬೆಳೆದುಬರುತ್ತಿರುವ ಚಳವಳಿಯನ್ನು ಕ್ರೋಢೀಕರಿಸಿಕೊಳ್ಳಲು ಇದು ಸಹಕಾರಿಯಾಗಿದೆ. ಜನಪರ ಹೋರಾಟಗಳನ್ನು ಮತ್ತಷ್ಟು ಹರಿತಗೊಳಿಸಲು, ಜನರೆಡೆಗೆ ಸಾಗಲು ಈ ಚುನಾವಣೆ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ದಾರಿದೀಪವಾಗಿದೆ.

ಕಾಂಗ್ರೆಸ್‌ನ ಹಿನ್ನಡೆ, ಜೆಡಿಎಸ್‌ನ ಶೂನ್ಯತೆಯನ್ನು ತುಂಬುವ ಮೂಲಕ ಜಾತ್ಯತೀತ ಜನಪರ ಪರ್ಯಾಯವನ್ನು ಬಲಪಡಿಸಬೇಕಾದ ಮಹತ್ತರ ಜವಾಬ್ದಾರಿ ಈಗ ಸಿಪಿಐಎಂ ಮೇಲಿದೆ. ಇದರ ಜೊತೆಗೆ ಬಿಜೆಪಿ-ಎಸ್‌ಡಿಪಿಐನ ಕೋಮುವಾದಿ ತಂತ್ರಗಳಿಗೆ ದಿಟ್ಟ ಉತ್ತರ ನೀಡಬೇಕಾದ ಅನಿವಾರ್ಯತೆಯನ್ನು ಪಕ್ಷ ದಿಟ್ಟವಾಗಿ ಎದುರಿಸಬೇಕಾಗಿದೆ. ೦

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಿಡಿ ಸಂಪಾದಕೀಯ

‘ತೃಣಮೂಲ-ಮಾವೋವಾದಿ ಕೂಟ’ ಅಡಗಿಸಿಡುವಂತದ್ದು ಇನ್ನೇನೂ ಉಳಿದಿಲ್ಲ!

ಈ ಪತ್ರಿಕೆಯಲ್ಲಿ ನಾವು ಈ ಹಿಂದೆ ಹಲವು ಬಾರಿ ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಮಾವೋವಾದಿಗಳ ನಡುವಿನ ದುಷ್ಟಕೂಟದ ಬಗ್ಗೆ ಬರೆದಿದ್ದೇವೆ. ಆದರೂ ಇದಕ್ಕೆ ಇನ್ನೂ ಏನಾದರೂ ದೃಢೀಕರಣ ಬೇಕಾದರೆ ಈಗ ಅದೂ ಬಂದಿದೆ- ಘಂಟಾಘೋಷವಾಗಿ. ಇದು ಬಂದಿರುವುದು ಮಾಧ್ಯಮಗಳಲ್ಲಿ ಕಾಣಿಸಿಕೊಂಡಿರುವ ತೃಣಮೂಲ ಮತ್ತು ಮಾವೋವಾದಿ ಮುಖಂಡರ ಘೋಷಣೆಗಳಿಂದ. ಇವು ಅವರು ಸ್ವಯಮಿಚ್ಛೆಯಿಂದ ಮಾಡಿರುವ ಘೋಷಣೆಗಳು.

ಜಾಧವಪುರ ಲೋಕಸಭಾ ಕ್ಷೇತ್ರದಿಂದ ಆರಿಸಿ ಹೋಗಿರುವ ತೃಣಮೂಲ ಕಾಂಗ್ರೆಸ್ ಸದಸ್ಯ ಶ್ರೀಯುತ ಕಬೀರ್ ಸುಮನ್ ತನ್ನ ಆತ್ಮಕಥನವನ್ನು ಪ್ರಕಟಿಸಿದ್ದಾರೆ. ಅದರ ಹೆಸರು ‘ನಿಶಾನೆರ್ ನಾಮ್ ತಮೋಶಿ ಮಲಿಕ್’(ಬಾವುಟದ ಹೆಸರು ತಮೋಶಿ ಮಲಿಕ್). ಈ ಪುಸ್ತಕ ಸಿಪಿಐ(ಮಾವೋವಾದಿ)ಯ ಪೊಲಿಟ್‌ಬ್ಯುರೊ ಸದಸ್ಯ ಕಿಶನ್‌ಜಿಗೆ ಸಮರ್ಪಿತವಾಗಿದೆ ಎಂಬುದು ಗಮನಾರ್ಹ. ಈ ಪುಸ್ತಕದಲ್ಲಿ ಸುಮನ್‌ರವರು ಕೊಲ್ಕತಾದ ತೃಣಮೂಲ ಕಾಂಗ್ರೆಸ್ ಮುಖ್ಯ ಕಚೇರಿಯಲ್ಲಿ ನಡೆದ ಒಂದು ಸಭೆಯ ಪ್ರತ್ಯಕ್ಷದರ್ಶಿ ವಿವರ ಕೊಟ್ಟಿದ್ದಾರೆ. ಈ ಸಭೆಯಲ್ಲಿ ಭಾಗವಹಿಸಿದ್ದ ಇಬ್ಬರು ವ್ಯಕ್ತಿಗಳು ಈಗ ಕಾನೂನು ಬಾಹಿರ ಚಟುವಟಿಕೆ ತಡೆ ಕಾನೂನಿ(ಯುಎಪಿಎ)ನ ಕೆಲವು ಅಂಶಗಳ ಅಡಿಯಲ್ಲಿ ಮಾವೋವಾದಿಗಳೊಂದಿಗೆ ಸಂಪರ್ಕ ಹೊಂದಿದ್ದ ಆಪಾದನೆಯ ಮೇಲೆ ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆ. ಈ ಸಭೆಯಲ್ಲಿ ಮಮತಾ ಬ್ಯಾನರ್ಜಿ ಮತ್ತು ಸೌಗತ್ ರಾಯ್ ಕೂಡ ಭಾಗವಹಿಸಿದ್ದರೆಂದು ಸುಮನ್ ಮಹಾಶಯ ಹೇಳುತ್ತಾರೆ. ಇವರಿಬ್ಬರೂ ಈಗ ಯುಪಿಎ ಮಂತ್ರಿ ಮಂಡಲದ ಮಂತ್ರಿಗಳು. ಈ ಸಭೆ ನಂದಿಗ್ರಾಮದಲ್ಲಿ ಮಧ್ಯಪ್ರವೇಶಿಸುವ ಸಾಧ್ಯತೆಗಳನ್ನು ಚರ್ಚಿಸಿತು. ಈ ಮಧ್ಯಪ್ರವೇಶದಲ್ಲಿ ಮಾವೋವಾದಿಗಳು ಕೂಡ ಇದ್ದರು ಎಂದು ಬೇರೆ ಹೇಳಬೇಕಾಗಿಲ್ಲ.

ಈ ಹಿಂದೆ ಮಾವೋವಾದಿಗಳು ನಂದಿಗ್ರಾಮದಲ್ಲಿ ತೃಣಮೂಲ ಕಾಂಗ್ರೆಸಿನೊಂದಿಗೆ ತಾವೂ ತೊಡಗಿಸಿಕೊಂಡಿದ್ದ ಬಗ್ಗೆ ವಿವರಗಳನ್ನು ಕೊಟ್ಟಿದ್ದರು. ತೃಣಮೂಲ ಕಾಂಗ್ರೆಸ್ ಇದನ್ನೆಂದೂ ನಿರಾಕರಿಸಿರಲಿಲ್ಲ. ಜನವರಿ 8, 2009 ರಂದು ಮಾಧ್ಯಮಗಳಲ್ಲಿ ಈ ವರದಿ ಪ್ರಕಟವಾಗಿತ್ತು: “ಪಶ್ಚಿಮ ಬಂಗಾಲದಿಂದ ಸಿಪಿಐ(ಎಂ)ನ್ನು ಅಳಿಸಿ ಹಾಕಲು ನಾವು ತೃಣಮೂಲ ಕಾಂಗ್ರೆಸ್, ಕಾಂಗ್ರೆಸ್, ಬಿಜೆಪಿ ಮುಂತಾದ ಆಳುವ ವರ್ಗದ ಎಲ್ಲ ಪಕ್ಷಗಳ ಜತೆಗೂಡಿ ಕೆಲಸ ಮಾಡಬೇಕು. ಶಾಲ್ಬೋನಿ ಮತ್ತು ಲಾಲ್‌ಗಡ ಘಟನೆಗಳ ನಂತರ ‘ಕೆಲವು ಮಹತ್ವದ ಸಮಸ್ಯೆಗಳು ಮತ್ತು ಅವುಗಳ ಪರಿಹಾರಗಳು’ ಎಂಬ ಸಿಪಿಐ (ಮಾವೋವಾದಿ) ದಸ್ತಾವೇಜನ್ನು ಸದಸ್ಯರಿಗೆ ಸುತ್ತೋಲೆಯಾಗಿ ಹಂಚಲಾಗಿದೆ. ಎಲ್ಲ ಆಳುವ ಪಕ್ಷಗಳು ಬಯಸುವವರೆಗೆ ಅವರೊಂದಿಗೆ ನಾವು ಸಹಯೋಗ ನಡೆಸಬೇಕು. ನಾವು ಸಿಪಿಐ(ಎಂ)ನ್ನು ಒಂದು ಸೋಶಿಯಲ್ ಫ್ಯಾಸಿಸ್ಟ್ ಸಂಘಟನೆ ಎಂದು ಕರೆಯುತ್ತೇವೆ. ತೃಣಮೂಲ ಕಾಂಗ್ರೆಸ್ ಮತ್ತು ರೈಲ್ವೆ ಮಂತ್ರಿ ಮಮತಾ ಬ್ಯಾನರ್ಜಿಯವರೊಂದಿಗೆ

> **ಹೀಗೆಂದವರು ಸ್ವತಃ ಮಾವೋವಾದಿ ಮುಖಂಡರೇ. ಜತೆಗೆ ತೃಣಮೂಲಿ ಸಂಸದರ ಆತ್ಮಕಥನ ಇದನ್ನು ಘಂಟಾಘೋಷವಾಗಿ ಸಾರಿದೆ. ಈಗಿರುವ ಪ್ರಶ್ನೆ ಮಾವೋವಾದಿಗಳು ದೇಶದ ಭದ್ರತೆಗೆ ಅತಿ ದೊಡ್ಡ ಬೆದರಿಕೆ ಎನ್ನುವ ಪ್ರಧಾನಿಗಳ ಸಂಪುಟದಲ್ಲಿ ಮಾವೋವಾದಿಗಳೊಂದಿಗೆ ಶಾಮೀಲಾಗಿರುವ ಮಂತ್ರಿಗಳು ಇರಬಹುದೇ? ಕೇವಲ ಬಹುಮತ ಉಳಿಸಿಕೊಳ್ಳಲಿಕ್ಕಾಗಿ, ಚುನಾವಣಾ ಲಾಭಕ್ಕಾಗಿ ಇಂತಹ ಹೊಲಸು ರಾಜಕೀಯ ಸಮಯಸಾಧಕತನವನ್ನು ಸಹಿಸಿಕೊಳ್ಳಬೇಕೇ?**

ಸಂಬಂಧಗಳನ್ನು ಬಲಪಡಿಸಬೇಕು”.

ಸಂದೇಹವುಳಿದಿಲ್ಲ

ಇಂತಹ ವರದಿಗಳು ಆ ವರ್ಷವಿಡೀ ಮಾಧ್ಯಮಗಳ ವಿವಿಧ ವಿಭಾಗಗಳಲ್ಲಿ ಆಗಾಗ ಕಾಣಿಸಿಕೊಂಡವು. 2010ರಲ್ಲಿ ಇನ್ನಷ್ಟು ಸಂಗತಿಗಳು ಬಯಲಿಗೆ ಬಂದವು. ಬಂಗಾಲಿ ದೈನಿಕ ‘ಆಜ್ ಕಲ್’ ನವಂಬರ್ 10, 2010ರಂದು ‘ಟಿಎಂಸಿ ಮುಖಂಡನ ಕಾರಿನಿಂದ ಮಾವೋವಾದಿ ಮುಖಂಡನ ದಸ್ತಗಿರಿ’ ಎಂಬ ಶಿರೋನಾಮೆಯ ಅಡಿಯಲ್ಲಿ ಈ ಸುದ್ದಿಯನ್ನು ಪ್ರಕಟಿಸಿತು: ‘ಮಾವೋವಾದಿ ಮುಖಂಡ ಕಂಚನ್ ದೇಬ್ ಸಿಂಗ್‌ನ್ನು ಶಾಲ್ಬನಿಯಲ್ಲಿ ತೃಣಮೂಲ ಬ್ಲಾಕ್ ಅಧ್ಯಕ್ಷ ನೇಪಾಲ್ ಸಿಂಗ್ ಕಾರಿನಲ್ಲಿ ಬಂಧಿಸಲಾಗಿದೆ. ನೇಪಾಲ್ ಸಿಂಗ್ ಮತ್ತು ಕಂಚನ್‌ರನ್ನು ಪೋಲೀಸ್ ಸ್ಟೇಶನಿಗೆ ಒಯ್ಯಲಾಯಿತು. ಅಲ್ಲಿ ನೇಪಾಲ್‌ಸಿಂಗ್‌ರನ್ನು ವಿಳಂಬವಿಲ್ಲದೆ ಬಿಡುಗಡೆ ಮಾಡಲಾಯಿತು. 2008ರಲ್ಲಿ ಪಿಎಸ್‌ಬಿಜೆಸಿ ಶಸ್ತ್ರ ತರಬೇತಿಯಲ್ಲಿ ಕಂಚನ್ ಸಹಯೋಗವಿತ್ತು. ವಿವಿಧ ಭೂಸ್ಫೋಟಗಳ ಮತ್ತು ಪೋಲೀಸ್ ವ್ಯಾನ್ ಲೂಟಿಗಳ ಅಪಾದನೆ ಆತನ ಮೇಲಿದೆ’.

ಜನವರಿ 5, 2011ರಂದು ‘ಹಿಂದುಸ್ತಾನ್ ಟೈಮ್ಸ್’ನ ದಿಲ್ಲಿ ಆವೃತ್ತಿ ‘ಸಿಪಿಐ(ಮಾವೋವಾದಿ)ಯ ಪಶ್ಚಿಮ ಬಂಗಾಲ ರಾಜ್ಯ ಸಮಿತಿ ಸದಸ್ಯ ವಿಕ್ರಂ ಸಹಿ ಮಾಡಿದ್ದಾರೆ ಎನ್ನಲಾದ’ ಈ ಮಾಧ್ಯಮ ಹೇಳಿಕೆಯನ್ನು ವರದಿ ಮಾಡಿದೆ: ‘ನಾವು ಮಮತಾ ಬ್ಯಾನರ್ಜಿಯೊಂದಿಗೆ ನಮ್ಮ ಆಂದೋಲನೋನ್ಮುಖಿ ಮೈತ್ರಿ ಸಮೃದ್ಧವಾಗಬೇಕೆಂದು ಬಯಸುತ್ತೇವೆ..’ ಮುಂದುವರೆದು ‘ಮಾವೋವಾದಿಗಳು ಮತ್ತು ಟಿಎಂಸಿ ಎರಡೂ ರಾಜಕೀಯ ಒತ್ತಾಸೆಗಳಿಂದಾಗಿ ತಮ್ಮ ಮೈತ್ರಿಯ ಬಗ್ಗೆ ಮೌನವಾಗಿವೆ. ಆದರೆ, ಅವರು ಈಗ ಬಹಿರಂಗಕ್ಕೆ ಬರುತ್ತಿದ್ದಾರೆ, ಏಕೆಂದರೆ ಅಡಗಿಸಿ ಇಡಲು ಇನ್ನೇನೂ ಇಲ್ಲ. ಸಿಂಗೂರ್, ನಂದಿಗ್ರಾಮ್‌ನಲ್ಲಿ ಹೋರಾಟಗಳಲ್ಲಿ ನಾವು ಜತೆಗೇ ಹೋರಾಡಿದ್ದೇವೆ’.

ಈಗಂತೂ ಸ್ಪಷ್ಟ- ತೃಣಮೂಲ ಕಾಂಗ್ರೆಸ್ ಮಾವೋವಾದಿಗಳಿಗೆ ಪಶ್ಚಿಮ ಬಂಗಾಲದಲ್ಲಿ ತೂರಲು ರಾಜಕೀಯ ಹೊದಿಕೆಯನ್ನು ಮತ್ತು ಸಕಲ ನೆರವನ್ನೂ ಒದಗಿಸಿದೆ ಮತ್ತು ಒದಗಿಸುತ್ತಲೇ ಇದೆ. ಮುಂಬರುವ ಚುನಾವಣೆಗಳಲ್ಲಿ ಪ್ರಯೋಜನ ಗಿಟ್ಟಿಸಲು ಸಿಪಿಐ(ಎಂ) ಕಾರ್ಯಕರ್ತರು ಮತ್ತು ಜನಸಾಮಾನ್ಯರ ಮೇಲೆ ಭಯೋತ್ಪಾದಕ ದಾಳಿಗಳನ್ನು ನಡೆಸಲು ಇದನ್ನು ಬಳಸಿಕೊಳ್ಳುವುದಕ್ಕಾಗಿ ಇವೆಲ್ಲ ಎಂಬುದರಲ್ಲಿ ಯಾವುದೇ ಸಂದೇಹ ಉಳಿದಿಲ್ಲ.

ಯುಪಿಎ ವೈರುಧ್ಯ

ಈ ಹಿಂದೆ ನಾವು ಯುಪಿಎ ಒಳಗಣ ಒಂದು ಬಗೆಹರಿಸಲಾಗದ ವೈರುಧ್ಯದತ್ತ ಗಮನ ಸೆಳೆದಿದ್ದೆವು. ಒಂದು ಕಡೆ ಪ್ರಧಾನ ಮಂತ್ರಿಗಳು ಮಾವೋವಾದಿಗಳು ‘ಭಾರತದ ಆಂತರಿಕ ಭದ್ರತೆಗೆ ಅತ್ಯಂತ ಗಂಭೀರ ಬೆದರಿಕೆ ಒಡ್ಡಿದ್ದಾರೆ’ ಎನ್ನುತ್ತಾರೆ. ಇನ್ನೊಂದು ಕಡೆ, ಅದೇ ಪ್ರಧಾನ ಮಂತ್ರಿಯ ನೇತೃತ್ವದಲ್ಲಿರುವ ಕೇಂದ್ರ ಸಂಪುಟದಲ್ಲಿ ಅದೇ ಮಾವೋವಾದಿಗಳೊಂದಿಗೆ ಭಾರತದ ಆಂತರಿಕ ಭದ್ರತೆಯನ್ನು ಗಂಡಾಂತರಕ್ಕೊಳಪಡಿಸಿ ಚುನಾವಣಾ ಲಾಭ ಗಳಿಸಲಿಕ್ಕಾಗಿ ಶಾಮೀಲಾಗಿರುವ ತೃಣಮೂಲ ಕಾಂಗ್ರೆಸ್ ಸದಸ್ಯರಿದ್ದಾರೆ.

ಇದಕ್ಕೆ ಅವಕಾಶ ನೀಡಲು ಸಾಧ್ಯವೇ? ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಅಪಾಯ ತರುವ ಇಂತಹ ಹೊಲಸು ರಾಜಕೀಯ ಸಮಯಸಾಧಕತನಕ್ಕೆ (ಸರಕಾರದ ಬಹುಮತವನ್ನು ಉಳಿಸಿಕೊಳ್ಳಲಿಕ್ಕಾಗಿ) ಅನುಮತಿ ಸಾಧ್ಯವೇ? ಕೇವಲ ಚುನಾವಣಾ ಲಾಭಕ್ಕಾಗಿ ಪ್ರಜಾಪ್ರಭುತ್ವ, ಶಾಂತಿ ಮತ್ತು ನಮ್ಮ ಜನತೆಗೆ ಉತ್ತಮ ಬದುಕಿನ ಪರಿಸ್ಥಿತಿಗಳ ನಿರ್ಮಾಣಕ್ಕಾಗಿ ಅತ್ಯಗತ್ಯವಾದ ಅಭಿವೃದ್ಧಿಯನ್ನು ಧ್ವಂಸ ಮಾಡುವ ಇಂತಹ ದುಷ್ಟ, ಸಿನಿಕ ರಾಜಕೀಯವನ್ನು ಸಹಿಸಿಕೊಳ್ಳಲು ಸಾಧ್ಯವೇ?

ಇಂತಹ ರಾಜಕೀಯವನ್ನು ಬಂಗಾಲ ಮತ್ತು ಅಲ್ಲಿಯ ಜನತೆಗಾಗಿ ಮಾತ್ರವಲ್ಲ, ಸಮಸ್ತ ಭಾರತ ಮತ್ತು ಅದರ ಜನತೆಗಾಗಿ ಕೂಡ ಸೋಲಿಸಬೇಕಾಗಿದೆ. ಒಂದು ಉತ್ತಮ ಭಾರತವನ್ನು ಕಟ್ಟುವ ಹೋರಾಟವನ್ನು ಮುಂದೊಯ್ಯಬೇಕಾದರೆ ಇದು ಅತ್ಯವಶ್ಯ. ○

ಚಿದಂಬರಂಗೆ ಪ್ರಶ್ನೆ : ತೃಣಮೂಲ-ಮಾವೋವೋದಿ ಶಾಮೀಲಿನ ನಿಸ್ಸಂದಿಗ್ಧ ಸಾಕ್ಷಿ ನಿಮ್ಮ ಮುಂದಿದೆ, ಈಗೇನು ಮಾಡುತ್ತೀರಿ?

ತೃಣಮೂಲ-ಕಾಂಗ್ರೆಸ್ ಮತ್ತು ಮಾವೋವಾದಿಗಳ ನಡುವಿನ ಶಾಮೀಲಿನ ಬಗ್ಗೆ ಈ ವಾರ ಬಯಲಾದ ಎರಡು ಬಲವಾದ ಪುರಾವೆಗಳ ಹಿನ್ನೆಲೆಯಲ್ಲಿ ಎಡಪಕ್ಷಗಳು ಹಾಗೂ ತೆಲುಗು ದೇಶಂ ಮತ್ತು ಜನತಾದಳ(ಎಸ್)ನ ಮುಖಂಡರು ಜನವರಿ 6ರಂದು ಕೇಂದ್ರ ಗೃಹಮಂತ್ರಿಗಳನ್ನು ಭೇಟಿ ಮಾಡಿ ಒಂದು ಮನವಿ ಪತ್ರವನ್ನು ಸಲ್ಲಿಸಿದ್ದಾರೆ.

ಇತ್ತೀಚೆಗೆ ಗೃಹಮಂತ್ರಿಗಳು ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳಿಗೆ ಬರೆದ ‘ಗುಪ್ತ’ ಪತ್ರದ ಪ್ರಕರಣದ(ಈ ವಾರದ ‘ಯುಪಿಎ-2 ದರ್ಬಾರಿನಲ್ಲಿ’ ಅಂಕಣ ನೋಡಿ) ಹಿನ್ನೆಲೆಯಲ್ಲಿ ಈ ಮನವಿ ಪತ್ರ ಮಹತ್ವ ಪಡೆದಿದೆ. ಈ ಪತ್ರದ ಹಿನ್ನೆಲೆಯಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಮಾವೋವಾದಿಗಳ ನಡುವಿನ ಶಾಮೀಲಿನತ್ತ ಗಮನ ಸೆಳೆಯಬೇಕಾಗಿ ಬಂದಿದೆ ಎಂದಿರುವ ಮನವಿ ಪತ್ರ ಮಾವೋವಾದಿ ಹಿಂಸಾಚಾರವನ್ನು ಎದುರಿಸುವ ಹೊಣೆಗಾರಿಕೆ ಕೇವಲ ಸಂಬಂಧಪಟ್ಟ ರಾಜ್ಯ ಸರಕಾರಗಳದ್ದು ಮಾತ್ರವಲ್ಲ, ಕೇಂದ್ರ ಸರಕಾರಕ್ಕೂ ಆ ಹೊಣೆಯಿದೆ ಎಂದು ನೆನಪಿಸಿದೆ. ತೃಣಮೂಲ ಕಾಂಗ್ರೆಸ್ ಮತ್ತು ಮಾವೋವಾದಿಗಳ ಶಾಮೀಲಿನ ಇತ್ತೀಚಿನ ಪುರಾವೆಗಳನ್ನು ಮಾತ್ರವಲ್ಲ, ಕಳೆದ ಮೂರು ವರ್ಷಗಳಲ್ಲಿ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನೂ ಈ ಮನವಿ ಪತ್ರಕ್ಕೆ ಲಗತ್ತಿಸಲಾಗಿದೆ.

ಈ ದುಷ್ಟಕೂಟವನ್ನು ಯುಪಿಎ ಸರಕಾರ ಹೇಗೆ ಎದುರಿಸಬೇಕೆಂದಿದೆ ಎಂದು ಗೃಹಮಂತ್ರಿಗಳನ್ನು ಭೇಟಿಯಾದ ಈ ಮುಖಂಡರು ಕೇಳಿದ್ದಾರೆ. ತೃಣಮೂಲ ಕಾಂಗ್ರಸಿನೊಂದಿಗೆ ಮೈತ್ರಿಯನ್ನು ಮುಂದುವರೆಸುವ ಬಗ್ಗೆಯೂ ಯುಪಿಎ ನಿರ್ಧರಿಸಬೇಕಾಗಿದೆ ಎಂದು ಅವರು ಹೇಳಿದರು. ತಮ್ಮ ಪತ್ರದಲ್ಲಿ ಸಿಪಿಐ(ಎಂ) ಕಾರ್ಯಕರ್ತರನ್ನು ‘ಹರ್ಮದ್’ ಗಳೆಂದು ತುಚ್ಛವಾಗಿ ಕರೆದಿರುವುದು ಕೇಂದ್ರ ಗೃಹಮಂತ್ರಿಗಳ ಸ್ಥಾನದ ಘನತೆಗೆ ತಕ್ಕುದಲ್ಲ ಎಂದೂ ಮನವಿ ಪತ್ರದಲ್ಲಿ ಹೇಳಲಾಗಿದೆ.

ಸಿಪಿಐ(ಎಂ)ನ ಸೀತಾರಾಂ ಯೆಚುರಿ, ಬಸುದೇವ ಆಚಾರ್ಯ, ಶ್ಯಾಮಲ್ ಚಕ್ರವರ್ತಿ. ಸಿಪಿಐನ ಪ್ರಭೋದ್ ಪಾಂಡಾ, ಆರ್‌ಎಸ್‌ಪಿಯ ಮನೋಹರ ಟಿರ್ಕೆ, ಫಾರ್ವರ್ಡ್ ಬ್ಲಾಕಿನ ನರಹರಿ ಮಹತೊ, ತೆಲುಗು ದೇಶಂನ ನಾಮ ನಾಗೇಶ್ವರ ರಾವ್ ಹಾಗೂ ಜೆಡಿ(ಎಸ್)ನ ದಾನಿಷ್ ಅಲಿ ಈ ಮನವಿ ಪತ್ರಕ್ಕೆ ಸಹಿ ಹಾಕಿದ್ದಾರೆ.

ಇದು ಗಂಭೀರ ವಿಷಯ, ಇದನ್ನು ತಾನು ಗಂಭೀರವಾಗಿ, ನಿಷ್ಪಕ್ಷಪಾತವಾಗಿ ಪರಿಶೀಲಿಸುವದಾಗಿ ಗೃಹಮಂತ್ರಿಗಳು ಆಶ್ವಾಸನೆ ನೀಡಿದರು ಎಂದು ವರದಿಯಾಗಿದೆ. ○

ಪಂಚಾಯ್ತಿ ಚುನಾವಣೆ ಫಲಿತಾಂಶ

ಮತದಾರರಿಗೆ ಹಲವು ಆಮಿಷ, ಕೋಮುವಾದಿ ವಿಭಜನಕಾರಿ ತಂತ್ರ, ಜಾತಿ, ಹಣ, ಅಧಿಕಾರದ ದುರ್ಬಳಕೆಯ ಮೂಲಕ ಬಿಜೆಪಿಯು 12 ಜಿಲ್ಲಾ ಪಂಚಾಯ್ತಿಗಳಲ್ಲಿ ಬಹುಮತ ಪಡೆದಿದ್ದರೂ ಅದು ಬೀಗುತ್ತಿರುವಂತೆ ಅದು ಬಿಜೆಪಿ ಸರ್ಕಾರದ ನೀತಿಗಳಿಗೆ ಭಾರಿ ಜನಬೆಂಬಲವೇನೂ ಅಲ್ಲ. ಜನತೆ ಪರ್ಯಾಯದ ಹುಡುಕಾಟದಲ್ಲಿದ್ದಾರೆ.

ಪರ್ಯಾಯ ಹುಡುಕಾಟದತ್ತ...

ನಿತ್ಯಾನಂದಸ್ವಾಮಿ

2011ರ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶದ ಅಂಕಿ-ಅಂಶಗಳ ಮೇಲೆ ಕಣ್ಣು ಹಾಯಿಸಿದಾಗ ಬಿಜೆಪಿಗೆ ಹೆಚ್ಚು ಲಾಭ ಆಗಿರುವುದು ಎದ್ದು ಕಾಣುತ್ತದೆ. ರಾಜ್ಯದ ಒಟ್ಟು 1013 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಲ್ಲಿ 441 ಕ್ಷೇತ್ರಗಳನ್ನು ಗೆದ್ದು ಅದು ಒಟ್ಟು 12 ಜಿಲ್ಲಾ ಪಂಚಾಯಿತಿಗಳಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವಂತಾಗಿದೆ. ಅದೇ ರೀತಿಯಲ್ಲಿ ಒಟ್ಟು 3659 ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪೈಕಿ 1499 ಕ್ಷೇತ್ರಗಳಲ್ಲಿ ಜಯಗಳಿಸಿ ಒಟಟು 68 ತಾಲ್ಲೂಕು ಪಂಚಾಯಿತಿಗಳಲ್ಲಿ ಅದು ಸ್ವಂತ ಶಕ್ತಿಯ ಮೇಲೆ ಅಧಿಕಾರವಹಿಸಿಕೊಳ್ಳುವಂತಾಗಿದೆ. 2005ರ ಚುನಾವಣಾ ಫಲಿತಾಂಶಕ್ಕೆ ಹೋಲಿಸಿದರೆ, ಆಗ ಮೂರನೇ ಸ್ಥಾನದಲ್ಲಿದ್ದ ಬಿಜೆಪಿ ಈಗ ಒಂದನೇ ಸ್ಥಾನಕ್ಕೆ ಏರಿದೆ.


ಆದರೆ, ಈ ಫಲಿತಾಂಶದ ಆಧಾರದಲ್ಲಿ ಬಿಜೆಪಿಗೆ ಗ್ರಾಮೀಣ ಮತದಾರರ ಬಾರೀ ಬೆಂಬಲ ವ್ಯಕ್ತವಾಗಿದೆ ಎಂದು ವಿಶ್ಲೇಷಿಸುವುದು ವಸ್ತು ನಿಷ್ಠ ವಿಶ್ಲೇಷಣೆ ಆಗಲಾರದು. 2005ರಲ್ಲಿ ಬಿಜೆಪಿ ಅಧಿಕಾರದಲ್ಲಿ ಇರಲಿಲ್ಲ. ಈ ಸಲದ ಚುನಾವಣೆಯ ಸಮಯದಲ್ಲಿ ಅದು ಆಡಳಿತಾರೂಢ ಪಕ್ಷ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮತದಾರರು ಅಧಿಕಾರದಲ್ಲಿರುವ ಪಕ್ಷದ ಪರವಾಗಿ ಒಲವು ತೋರಿಸುವುದು ಸಹಜ ಸಾಮಾನ್ಯವಾಗಿದೆ. ಬಿಜೆಪಿ ತಾನು ಅಧಿಕಾರದಲ್ಲಿರುವುದರ ಲಾಭ ಪಡೆದಿದೆ. ಆಡಳಿತ ಯಂತ್ರವನ್ನು ಬಳಸಿಕೊಂಡಿದೆ. ರಾಜ್ಯ ಚುನಾವಣಾ ಆಯೋಗವು ಸಹ ಆಡಳಿತಾರೂಢ ಬಿಜೆಪಿಗೆ ಮಣೆ ಹಾಕಿದೆ.

ಬಿಜೆಪಿಗೆ ಈ ಚುನಾವಣೆ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಯಡಿಯೂರಪ್ಪ ಅವರಿಗಂತೂ ಇದು ತಮ್ಮ ಮುಖ್ಯಮಂತ್ರಿ ಸ್ಥಾನದ ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತದ ಹಗರಣಗಳು ದಾಖಲೆ ಸಹಿತ ಪ್ರಕಟಗೊಂಡಾಗಲೂ ತನ್ನ ವಿರುದ್ಧ ಕ್ರಮ ಜರುಗಿಸದೆ ರಕ್ಷಣೆ ನೀಡಿದ ಪಕ್ಷದ ಹೈಕಮಾಂಡನ್ನು ಸಮಾಧಾನಪಡಿಸಲು ಯಡಿಯೂರಪ್ಪ ಅವರು ಹೆಚ್ಚು ಜಿಲ್ಲಾ/ತಾಲ್ಲೂಕು ಪಂಚಾಯಿತಿಗಳನ್ನು ಗೆಲ್ಲಲೇ ಬೇಕಾಗಿತ್ತು. ಅದಕ್ಕಾಗಿ ಯಡಿಯೂರಪ್ಪ ಅವರು ಏನೂ ಬೇಕಾದರೂ ಮಾಡಲು ಸಿದ್ಧರಾಗಿದ್ದರು. ಸೀರೆ ಹಂಚುವ ಕಾರ್ಯಕ್ರಮದ ಮೂಲಕ ಮಹಿಳಾ ಮತದಾರರಿಗೆ ಬಲೆ ಬೀಸಲಾಯಿತು. ಗಣಿಗಳ್ಳರು ಮತ್ತು ಭೂ ಗಳ್ಳರಿಂದ ಸಂಗ್ರಹಿಸಲಾಗಿದ್ದ ಲೆಕ್ಕವೇ ಇಲ್ಲದ ಹಣವನ್ನು ನೀರಿನಂತೆ ಹರಿಸಲಾಯಿತು. ಹಣದ ಜೊತೆಯಲ್ಲಿ ಹೆಂಡದ ಹೊಳೆಯೂ ಹರಿಯಿತು. ಬಿಜೆಪಿಯವರ ಈ ಹಣ ಮತ್ತು ಹೆಂಡದ ಪ್ರವಾಹದ ಎದುರು ಸ್ಪರ್ಧಿಸಿ ಕಾಂಗ್ರೆಸ್ಸಿಗರು ಸಹ ಸುಸ್ತಾದರು.

ಮತದಾರರಿಗೆ ಆಸೆ ಆಮಿಷಗಳನ್ನು ಒಡ್ಡಿದ್ದು ಮಾತ್ರವಲ್ಲ, ಬ್ಲಾಕ್‌ಮೇಲ್ ಸಹ ಮಾಡಲಾಯಿತು. ಬಿಜೆಪಿಯನ್ನು ಗೆಲ್ಲಿಸದ ಕ್ಷೇತ್ರಗಳಿಗೆ ತಾನು ಕಾಲಿಡುವುದಿಲ್ಲ ಎಂದು ಬಹಿರಂಗವಾಗಿ ಹೇಳುವ ಮೂಲಕ ಯಡಿಯೂರಪ್ಪ ಮತದಾರರಿಗೆ ಬೆದರಿಕೆ ಹಾಕಲೂ ಹಿಂಜರಿಯಲಿಲ್ಲ.

ಆರ್.ಎಸ್.ಎಸ್. ಮತ್ತು ಇಡೀ ಸಂಘ ಪರಿವಾರ ಬಿಜೆಪಿಯ ಬೆನ್ನಿಗೆ ನಿಂತಿತು. ಸಂಘ ಪರಿವಾರದ ಕಾರ್ಯಕರ್ತರು ಬೀದಿಗಿಳಿದು ಬಿಜೆಪಿ ಅಭ್ಯರ್ಥಿಗಳ ಪರ ಕೆಲಸ ಮಾಡಿದರು. ಹಿಂದೂ ಸಮಾಜೋತ್ಸವಗಳನ್ನು ಹಮ್ಮಿಕ್ರೊಳ್ಳುವ ಮೂಲಕ ರಾಜ್ಯದ ವಿವಿಧೆಡೆ, ಮುಖ್ಯವಾಗಿ ಕರಾವಳಿ ಜಿಲ್ಲೆಗಳಲ್ಲಿ ಕೋಮು ಆಧಾರಿತ ಧೃವೀಕರಣದ ಲಾಭ ಪಡೆಯಲಾಯಿತು. ಗುಲ್ಬರ್ಗಾ ನಗರದಲ್ಲಿ 'ಕಲ್ಬುರ್ಗಿ ಕಂಪು' ಎಂಬ ಆರ್.ಎಸ್.ಎಸ್. ಕಾರ್ಯಕ್ರಮವನ್ನು 10 ದಿನಗಳ ಕಾಲ ನಡೆಸಲಾಯಿತು. ಮಠಾಧಿಪತಿಗಳ ಮೂಲಕ ಮತದಾರರಿಗೆ ವ್ಯವಸ್ಥಿತವಾಗಿ ಗಾಳ ಹಾಕಲಾಯಿತು. ಅದರಂತೆಯೇ 'ಲಿಂಗಾಯುತರ ಸರ್ಕಾರ' ವನ್ನು ಉಳಿಸಲು ಬಿಜೆಪಿಗೆ ಮತ ನೀಡಬೇಕು ಎಂಬ ಸಂದೇಶ ಈ ಸಲದ ಚುನಾವಣೆಯಲ್ಲಿಯೂ ಗುಪ್ತವಾಹಿನಿಯಾಗಿ ಹರಿಯಿತು. ಇದರಿಂದಾಗಿ ಮಧ್ಯ ಕರ್ನಾಟಕದ ಜಿಲ್ಲೆಗಳಲ್ಲಿ ಬಿಜೆಪಿಗೆ ಲಾಭವಾಗಿದೆ.

ಇವೆಲ್ಲದರ ನಡುವೆಯೂ ಬಿಜೆಪಿಗೆ ನಿರೀಕ್ಷಿತ ಬೆಂಬಲ ವ್ಯಕ್ತವಾಗಲೇ ಇಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್.ಈಶ್ವರಪ್ಪ ಸೇರಿದಂತೆ ಪಕ್ಷದ ಮುಖಂಡರು, ಸುಮಾರು 15 ದಿನಗಳ ಕಾಲ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಬ್ಬರದ ಪ್ರಚಾರ ನಡೆಸಿದರೂ ಕೇವಲ 12 ಜಿಲ್ಲಾ ಪಂಚಾಯಿತಿಗಳಲ್ಲಿ ಮಾತ್ರ ಬಿಜೆಪಿಗೆ ಸ್ಪಷ್ಟ ಬಹುಮತ ಪಡೆಯಲು ಸಾಧ್ಯವಾಗಿದೆ. ಶೇ.50ಕ್ಕೂ ಹೆಚ್ಚು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂದು ಕೊಚ್ಚಿಕೊಳ್ಳುತ್ತಿದ್ದ ಬಿಜೆಪಿ ನಾಯಕರಿಗೆ ಈ ಫಲಿತಾಂಶದಿಂದ ಆಘಾತವಾಗಿದ್ದರೂ ಅವರು ಅದನ್ನು ಮರೆಮಾಚುತ್ತಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಡೆದಿರುವ ಜಿಲ್ಲಾ ಪಂಚಾಯಿತಿ ಸ್ಥಾನಗಳನ್ನು ಕೂಡಿಸಿದರೆ ಬಿಜೆಪಿಗಿಂತ 92 ಸ್ಥಾನಗಳು ಹೆಚ್ಚಾಗುತ್ತವೆ. 19 ಸಂಸದರನ್ನು ಮತ್ತು 105 ಶಾಸಕರನ್ನು ಹೊಂದಿರುವ ಬಿಜೆಪಿಗೆ ಕೇವಲ 12 ಜಿಲ್ಲಾ ಪಂಚಾಯಿತಿಗಳಲ್ಲಿ ಮತ್ತು 68 ತಾಲ್ಲೂಕು ಪಂಚಾಯತಿಗಳಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲು



ಸಾಧ್ಯವಾಗಿರುವುದು ದೊಡ್ಡ ಸಾಧನೆಯೇ ಅಲ್ಲ. ಗ್ರಾಮೀಣ ಮತದಾರರ ಪ್ರಜ್ಞೆ ಎಷ್ಟೇ ಹಿಂದುಳಿದಿದೆ ಎಂದರೂ ಅವರು ಒಂದು ಭ್ರಷ್ಟ, ಸ್ವಜನಪಕ್ಷಪಾತಿ ಹಾಗೂ ಜನರ ಸಮಸ್ಯೆಗ್ಗಳಿಗೆ ಸ್ಪಂದಿಸಿದ ಸರ್ಕಾರವನ್ನು ದೊಡ್ಡದಾಗಿ ಬೆಂಬಲಿಸದಿರುವ ಪ್ರಬುದ್ಧತೆಯನ್ನು ಪ್ರದರ್ಶಿಸಿದ್ದಾರೆ.

176 ತಾಲ್ಲೂಕು ಪಂಚಾಯಿತಿಗಳ ಪೈಕಿ 108ರಲ್ಲಿ ಜನಾದೇಶ ಬಿಜೆಪಿ ವಿರುದ್ಧವಾಗಿದೆ. ಆಡಳಿತರೂಢ ಪಕ್ಷವಾಗಿದ್ದರೂ ಬಿಜೆಪಿಗೆ ಮಂಡ್ಯ ಮತ್ತು ರಾಮನಗರ ಜಿಲ್ಲಾ ಪಂಚಾಯಿತಿಗಳಲ್ಲಿ ಖಾತೆ ತೆರೆಯಲು ಸಾಧ್ಯವಾಗದಿರುವುದು ಗಮನಾರ್ಹವಾಗಿದೆ. ಕಳೆದ ಸಲ ಮೊತ್ತ ಮೊದಲ ಬಾರಿಗೆ ಜಿಲ್ಲಾ ಪಂಚಾಯಿತಿ ಅಧಿಕಾರ ಹಿಡಿದ ಬಳ್ಳಾರಿಯಲ್ಲಿ ಕನಿಷ್ಠ ಬಹುಮತವನ್ನು ಪಡೆಯಲು ಸಾಧ್ಯವಾಗದಿರುವುದು ಬಳ್ಳಾರಿ ಜಿಲ್ಲೆಯ ರೈತರಲ್ಲಿ ಮತ್ತು ಗ್ರಾಮೀಣ ಜನತೆಯಲ್ಲಿ ಬೆಳೆಯುತ್ತಿರುವ ಗಣಿಧಣಿಗಳ ವಿರೋಧಿ ಮನೋಭಾವಕ್ಕೆ ಸಾಕ್ಷಿಯಾಗಿದೆ. ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪ ಅವರ ತವರು ಜಿಲ್ಲೆ ಶಿವಮೊಗ್ಗದಲ್ಲಿ ಕೇವಲ ಕೂದಲೆಳೆಯ ಜಯವನ್ನು ಪಡೆಯುವಲ್ಲಿ ಅವರು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಇಬ್ಬರು ಮಂತ್ರಿಗಳು ಮತ್ತು 8 ಮಂದಿ ಶಾಸಕರು ಇರುವ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯಲ್ಲಿ ಬಿಜೆಪಿ ಅತಿ ಹೆಚ್ಚು ಸ್ಥಾನಗಳನ್ನು ಗೆದ್ದಿದ್ದರೂ ಅಧಿಕಾರ ಹಿಡಿಯಲು ವಿಫಲವಾಗಿದೆ. ಒಟ್ಟಾರೆ ಫಲಿತಾಂಶ ಸಂತೃಪ್ತಿ ತಂದಿದೆ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದರೂ ಬಹಿರಂಗದಲ್ಲಿ ಅವರು ವ್ಯಕ್ತಪಡಿಸುತ್ತಿರುವ ಸಂತೃಪ್ತಿ ಹುಸಿ ಸ್ವರೂಪದ್ದಾಗಿದೆ.

ಕಾಂಗ್ರೆಸ್‌ಗೆ ಹಿನ್ನಡೆ

ಕಾಂಗ್ರೆಸ್ ಪಕ್ಷಕ್ಕೆ ಮತ್ತೆ ಹೀನಾಯ ಹಿನ್ನಡೆಯಾಗಿದೆ. ಕೇವಲ ಯಾದಗಿರಿ, ಉತ್ತರಕನ್ನಡ, ಚಿಕ್ಕಬಳ್ಳಾಪುರ ಮತ್ತು ಚಾಮರಾಜನಗರ ಜಿಲ್ಲಾ ಪಂಚಾಯಿತಿಗಳಲ್ಲಿ ಮಾತ್ರ ಅದು ಅಧಿಕಾರದ ಚುಕ್ಕಾಣಿ ಹಿಡಿಯಲು ಯಶಸ್ವಿಯಾಗಿದೆ. ಒಟ್ಟು 1013 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಪೈಕಿ 353 ಕ್ಷೇತ್ರಗಳಲ್ಲಿ ಮಾತ್ರ ಅದು ಜಯಗಳಿಸಿದೆ. 2005ರ ಚುನಾವಣೆಯಲ್ಲಿ 493 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಲ್ಲಿ ಗೆದ್ದು 23 ಜಿಲ್ಲಾ ಪಂಚಾಯತ್‌ಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು.

ಕಾಂಗ್ರೆಸ್ ಹೊಸ ನಾಯಕತ್ವದಲ್ಲಿ ಚುನಾವಣೆಗೆ ಹೋಗಿದ್ದರೂ ಮತದಾರರ ಒಲವು ಗಳಿಸುವಲ್ಲಿ ಅದು ವಿಫಲವಾಗಿದೆ. ಕೆಪಿಸಿಸಿ ಅಧ್ಯಕ್ಷ ಡಾ: ಜಿ.ಪರಮೇಶ್ವರ ಅವರು ತವರು ಜಿಲ್ಲೆ ತುಮಕೂರಿನಲ್ಲೇ ಕಾಂಗ್ರೆಸ್ ತೀವ್ರ ಹಿನ್ನಡೆ ಅನುಭವಿಸಿದ್ದು, 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ವಿರೋಧಪಕ್ಷದ ನಾಯಕ ಸಿದ್ದರಾಮಯ್ಯನವರಿಗೆ ತನ್ನ ತವರು ಜಿಲ್ಲೆ ಮೈಸೂರಿನಲ್ಲಿ ಪಕ್ಷವನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತರಲು ಸಾಧ್ಯವಾಗಿಲ್ಲ. ಜಿಲ್ಲೆಯಲ್ಲಿ 7 ಮಂದಿ ಕಾಂಗ್ರೆಸ್ ಶಾಸಕರು ಮತ್ತು ಇಬ್ಬರು ಸಂಸದರು ಇದ್ದರೂ ಕಾಂಗ್ರೆಸ್ಸಿಗೆ ಇಲ್ಲಿ ಬಹುಮತ ದೊರೆತಿಲ್ಲ. ಆಂತರಿಕ ಕಿತ್ತಾಟದ ಫಲವಾಗಿ ಕೋಲಾರ ಜಿಲ್ಲೆಯಲ್ಲಿ ಕಾಂಗ್ರೆಸ್ ಅಧಿಕಾರ ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಇದೇ ರೀತಿಯ ಕಿತ್ತಾಟದಿಂದಾಗಿ ಬೀದರ್, ಗುಲ್ಬರ್ಗಾ ಜಿಲ್ಲೆಗಳಲ್ಲಿ ಧರ್ಮಸಿಂಗ್ ಮತ್ತು ಮಲ್ಲಿಕಾರ್ಜುನ ಖರ್ಗೆ ಮತ್ತು ಮುಖಭಂಗ ಅನುಭವಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಆರ್.ವಿ.ದೇಶಪಾಂಡೆ ತಮ್ಮ ಹಿಡಿತವನ್ನು ಉಳಿಸಿಕೊಂಡಂತೆ ಕಾಣುತ್ತದೆ. ಬಿಜೆಪಿಯಿಂದ ಅನರ್ಹಗೊಂಡ ಶಾಸಕರಿಂದ ಕೆಲವು ಕಡೆ ಕಾಂಗ್ರೆಸ್ಸಿಗೆ ಲಾಭವಾಗಿದೆ. ಒಟ್ಟಾರೆಯಾಗಿ ಕಾಂಗ್ರೆಸ್ ರಾಜ್ಯದ ಜನತೆಯ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವುದು. ಈ ಫಲಿತಾಂಶದಿಂದಲೂ ವ್ಯಕ್ತವಾಗುತ್ತದೆ. ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಜನವಿರೋಧಿ ನೀತಿಗಳು, ಬೆಲೆ ಏರಿಕೆ, ಭ್ರಷ್ಟಾಚಾರಗಳ ಬಗ್ಗೆ ಜನರ ಅಸಮಾಧಾನ ಈ ಚುನಾವಣೆಯಲ್ಲಿ ವ್ಯಕ್ತವಾಗಿದೆ.

ಜೆಡಿ(ಎಸ್) ಹುಟ್ಟುಹಾಕಿದ ನಿರೀಕ್ಷೆ:

ಬಿಜೆಪಿ ಸರ್ಕಾರದ ಹಗರಣಗಳ ವಿರುದ್ಧವಾಗಿ ಜೆಡಿ(ಎಸ್) ನಡೆಸಿದ ಹೋರಾಟದಿಂದ ಆ ಪಕ್ಷಕ್ಕೆ ಹೆಚ್ಚಿನ ಲಾಭ ಆಗದಿದ್ದರೂ ರಾಜ್ಯದಲ್ಲಿ ಅದು ಹೊಸ

	ಒಟ್ಟು	ಬಿಜೆಪಿ	ಕಾಂಗ್ರೆಸ್	ಜೆಡಿ(ಎಸ್)	ಸಿಪಿಎಂ	ಅತಂತ್ರ
ಜಿಲ್ಲಾ ಪಂಚಾಯಿತಿಗಳು	30	12	04	04	-	10
ತಾಲ್ಲೂಕು ಪಂಚಾಯಿತಿಗಳು	176	68	31	29	01	47

ಜನಶಕ್ತಿ
ಕನ್ನಡ ವಾರಪತ್ರಿಕೆ

ನಿರೀಕ್ಷೆಯನ್ನು ಹುಟ್ಟುಹಾಕಿದೆ. ಜೆಡಿ(ಎಸ್) ನ ಕೆಲವು ಅತಿ ಆತುರದ ಕ್ರಮಗಳನ್ನು ಜನ ಅರಗಿಸಿಕೊಳ್ಳಲಿಲ್ಲ. ಅದು ಒಂದು ಜಾತಿಗೆ ಸೇರಿದವರ ಪಕ್ಷ ಎಂಬ ಹಣೆಪಟ್ಟಿಯನ್ನು ಕಿತ್ತೆಸೆಯಲು ಅದಕ್ಕೆ ಸಾಧ್ಯವೂ ಆಗಲಿಲ್ಲ, ಅಂತಹ ಪ್ರಯತ್ನವನ್ನು ಅದು ಮಾಡಲಿಲ್ಲ. ಈಗ ಚುನಾವಣಾ ಫಲಿತಾಂಶವೂ ಅದನ್ನೇ ದೃಢಪಡಿಸಿದಂತಾಗಿದೆ. ಒಕ್ಕಲಿಗರ ಪ್ರಾಬಲ್ಯವಿರುವ 4 ಜಿಲ್ಲೆಗಳಲ್ಲಿ ಮಾತ್ರ ಜೆಡಿ(ಎಸ್) ಗೆದ್ದು ಬಂದಿದೆ. ಒಟ್ಟು 176 ತಾಲ್ಲೂಕು ಪಂಚಾಯಿತಿಗಳಲ್ಲಿ ಕೇವಲ 29 ಪಂಚಾಯಿತಿಗಳಲ್ಲಿ ಮಾತ್ರ ಅದಕ್ಕೆ ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾಗಿದೆ. ಆದರೆ ಯಡಿಯೂರಪ್ಪನವರ ಭ್ರಷ್ಟಾಚಾರ, ಸ್ವಜನ ಪಕ್ಷಪಾತದ ಹಗರಣಗಳನ್ನು ಬಯಲಿಗೆ ತರುವ ಮೂಲಕ ಆಡಳಿತಾರೂಢ ಬಿಜೆಪಿಯ ಗೆಲುವಿನ ಓಟವನ್ನು ತಡೆಯುವಲ್ಲಿ ಅದು ಯಶಸ್ವಿಯಾಗಿದೆ.

ಜೆಡಿ(ಎಸ್) ಪಕ್ಷವನ್ನು ನಾಶ ಮಾಡಿಯೇ ತೀರುತ್ತೇನೆ ಎಂಬ ಯಡಿಯೂರಪ್ಪನವರ ಪ್ರತಿಜ್ಞೆ ಸಫಲವಾಗಿಲ್ಲ. ಮಾತ್ರವಲ್ಲ ಜೆಡಿ(ಎಸ್) ಬಗ್ಗೆ ರಾಜ್ಯದ ಜನತೆಯಲ್ಲಿ ಆಸಕ್ತಿ ಚಿಗುರುವಂತಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ಸಿಗೆ ಮತ್ತು ಬಿಜೆಪಿಗೆ ಪರ್ಯಾಯವಾಗಿ ಬೆಳೆಯಲು ಜೆಡಿ(ಎಸ್) ಗೆ ಅವಕಾಶ ಇದೆ. ಅದು ಕಾಂಗ್ರೆಸ್ ಮತ್ತು ಬಿಜೆಪಿಯ ಧೋರಣೆಗಳಿಗೆ ಪರ್ಯಾಯವಾದ ಧೋರಣೆಗಳಿಗೆ ಬದ್ಧವಾಗಬೇಕಾಗುತ್ತದೆ. ಎಡ, ಪ್ರಗತಿಪರ ಶಕ್ತಿಗಳೊಂದಿಗೆ ಗುರುತಿಸಿಕೊಳ್ಳುತ್ತಾ, ಜನರ ಪ್ರಶ್ನೆಗಳಿಗಾಗಿ ನಿರಂತರವಾದ ಹೋರಾಟಗಳನ್ನು ನಡೆಸುತ್ತಾ ಹೋಗಲು ಜೆಡಿ(ಎಸ್) ಮುಂದಾದರೆ ಅದೊಂದು ಪರ್ಯಾಯವಾಗಿ ಮೂಡಿ ಬರಲು ಸಾಧ್ಯವಿದೆ.

ಖಾತೆ ತೆರೆದ ಸಿಪಿಐ(ಎಂ)

2011ರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿಯ ಕಸಬಾ ಮತ್ತು ಗೂಳೂರು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರುವುದು ರಾಜ್ಯದ ಗಮನ ಸೆಳೆದಿದೆ. ಅದರಂತೆಯೇ ಬಾಗೇಪಲ್ಲಿ ತಾಲ್ಲೂಕು ಪಂಚಾಯಿತಿಯ ಒಟ್ಟು 15 ಸ್ಥಾನಗಳ ಪೈಕಿ 8 ಸ್ಥಾನಗಳನ್ನು ಗೆದ್ದು ಮೊಟ್ಟಮೊದಲ ಬಾರಿಗೆ ತಾಲ್ಲೂಕು ಪಂಚಾಯಿತಿಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಪಕ್ಕದ ಗುಡಿಬಂಡೆ ತಾಲ್ಲೂಕು ಪಂಚಾಯಿತಿಯ 11 ಸ್ಥಾನಗಳ ಪೈಕಿ 5 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಜೆಡಿ(ಎಸ್) ಸಹಕರಿಸಿದರೆ ಇಲ್ಲಿಯೂ ಅದು ಅಧಿಕಾರವಹಿಸಿಕೊಳ್ಳುವ ಸಾಧ್ಯತೆ ಇದೆ.

ಇದೊಂದು ಗಮನಾರ್ಹವಾದ ಬೆಳವಣಿಗೆಯಾಗಿದೆ. ಇಲ್ಲಿ ಇತರ ರಾಜಕೀಯ ಪಕ್ಷಗಳು ಒಡ್ಡಿದ ಹಣ ಆಮಿಷಗಳನ್ನು ತಿರಸ್ಕರಿಸಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿರುವುದು ರಾಜ್ಯದ ಇತರ ಭಾಗಗಳಿಗೂ ಮಾದರಿಯಾಗಿದೆ. ಕಳೆದ ಕೆಲವು ದಶಕಗಳಿಂದ ಇಲ್ಲಿ ಪಕ್ಷವು ನಡೆಸುತ್ತಾ ಬಂದಿರುವ ಜನ ಚಳುವಳಿ, ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಒಂದೆ ಎರಡು ಬಾರಿ ಶಾಸಕರಾಗಿ ಆಯ್ಕೆಯಾದ ಸಿಪಿಐ(ಎಂ)ನ ಜಿ.ವಿ.ಶ್ರೀರಾಮರೆಡ್ಡಿ ಯವರು ಮಾಡಿದ ಅಭಿವೃದ್ಧಿ ಕಾರ್ಯಗಳು ಈ ಗೆಲುವಿಗೆ ಕಾರಣವಾಗಿವೆ. ಪರ್ಯಾಯಕ್ಕಾಗಿ ಹುಡುಕಾಟ ನಡೆಸುತ್ತಿರುವ ಕರ್ನಾಟಕದ ಜನತೆಗೆ ಬಾಗೇಪಲ್ಲಿಯ ಅನುಭವ ದಾರಿದೀಪವಾಗಬಹುದಾಗಿದೆ. ○

ಸಂಪಾದಕೀಯ

ರಾಜ್ಯಪಾಲರ ಭಾಷಣ ವಂಚಕ ಸರ್ಕಾರದ ಸುಳ್ಳುಗಳ ಗೊಂಚಲು

ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರ ಭಾಷಣವನ್ನು ತೀವ್ರ ಪ್ರತಿಭಟನೆಯ ಮೂಲಕ ವಿರೋಧಿಸಲಾಗಿದೆ. ಅಕ್ಷರಶಃ ಸರ್ಕಾರದ ಈ ಭಾಷಣವನ್ನು ವಿರೋಧ ಪಕ್ಷಗಳು ಓದಲು ಬಿಟ್ಟಿಲ್ಲ. ರಾಜ್ಯ ಸರ್ಕಾರದ ಹಗರಣ, ಭ್ರಷ್ಟಾಚಾರಗಳ ವಿರುದ್ಧ ಬಹಿರಂಗವಾಗಿಯೇ ಟೀಕಿಸುತ್ತಾ ಬಂದಿರುವ ರಾಜ್ಯಪಾಲರು ಅದೇ ಸರ್ಕಾರವನ್ನು ನನ್ನ ಸರ್ಕಾರ ಎಂದು ಹೇಳುವುದೂ, ಸಂವಿಧಾನಾತ್ಮಕ ಸಂಸ್ಥೆಯ ಪ್ರತಿನಿಧಿ ರಾಜ್ಯಪಾಲರು ಎಂಬ ಕಿಂಚಿತ್ತೂ ಗೌರವವಿಲ್ಲದೇ ಕೀಳು ಭಾಷೆಯಲ್ಲಿ ನಿಂದಿಸುತ್ತಿದ್ದ ಬಿಜೆಪಿಯೇ ತನ್ನ ಸರ್ಕಾರವನ್ನು ಗುಣಗಾನ ಮಾಡಿಸುವ ಸಂಗತಿಗಳು ಅತ್ಯಂತ ಪ್ರಹಸನದಂತೆ, ವಿಪರ್ಯಾಸವಾಗಿ ಕಾಣುತ್ತಿದೆ. ಸರ್ಕಾರದ ತಪ್ಪುಗಳನ್ನು ತೀವ್ರವಾಗಿ ಟೀಕಿಸುತ್ತ ಬಂದ ರಾಜ್ಯಪಾಲರು ಈಗಲೂ ಸರ್ಕಾರ ಬರೆದುಕೊಟ್ಟ ಭಾಷಣವನ್ನು ಅತ್ಯಂತ ಔಪಚಾರಿಕವಾಗಿ ಎರಡು ಸಾಲಿನಲ್ಲಿ ಓದಿ ಮಂಡಿಸಿ ಹೊರನಡೆದದ್ದು ದಾಖಲಾರ್ಹವೇ ಆಗಿದೆ.

ಬಜೆಟ್ ಪೂರ್ವದ ಈ ಹನ್ನೊಂದು ದಿನಗಳ ಕಲಾಪ ಹೇಗೆ ನಡೆಯಲಿದೆ ಎಂಬುದೇ ಕುತೂಹಲ. ಈ ಅಧಿವೇಶನದ ಕಲಾಪ ನಡೆಯಗೊಡುವುದಿಲ್ಲ ಎಂಬ ವಿರೋಧ ಪಕ್ಷಗಳ ನಿಲುವು ವಿರೋಧ ಪಕ್ಷಗಳು ಎತ್ತಿರುವ ಪ್ರಶ್ನೆಗಳಿಗೆ ನಿಖರ ಉತ್ತರ, ಕ್ರಮಗಳಿಲ್ಲದೇ ಎಲ್ಲವನ್ನೂ ಗುಡಿಸಿ ಹಾಕುವ ಸರ್ಕಾರದ ಭಂಡತನ ತೀವ್ರವಾದ ಸಂಘರ್ಷವನ್ನು ಹುಟ್ಟುಹಾಕುವುದರಲ್ಲಿ ಅನುಮಾನವಿಲ್ಲ. ಇದು ಒಂದು ರೀತಿಯಲ್ಲಿ ಅನಿವಾರ್ಯವಾದ ಸಂಘರ್ಷ.

ಮುಖ್ಯವಾಗಿ ಈಗ ರಾಜ್ಯಪಾಲರು ಸರ್ಕಾರದ ಪರವಾಗಿ ಮಂಡಿಸಿದ ಭಾಷಣ ಒಂದು ದಿಕ್ಕು-ದೆಸೆಯೇ ಇಲ್ಲದ ಎಲ್ಲಾ ಪಾತಕಗಳನ್ನೂ ಮುಚ್ಚಿಹಾಕಿಕೊಳ್ಳಬಯಸುವ ವಂಚನೆ-ಸುಳ್ಳುಗಳ ಕಂತೆಯಾಗಿದೆ. ರಾಜ್ಯದಲ್ಲಿ ಈಗ ಎದ್ದು ಬಂದಿರುವ ಗಂಭೀರವಾದ ಪ್ರಶ್ನೆಗಳಿಗೆ ಬೆನ್ನು ತೋರಿಸಿದೆ. ದಾಖಲೆಗಳ ಸಮೇತ ಬಯಲುಗೊಂಡ ಗಣಿ-ಭೂಹಗರಣಗಳು, ಡಿನೋಟಿಫಿಕೇಶನ್ ಅವ್ಯವಹಾರಗಳು, ಮುಖ್ಯಮಂತ್ರಿ-ಮಂತ್ರಿಗಳು, ಬಿಜೆಪಿ ನಾಯಕರುಗಳು ನಡೆಸಿದ ಅಕ್ರಮಗಳು, ಲೋಕಾಯುಕ್ತರ ಆರೋಪಗಳ ಕುರಿತು ಯಾವುದೇ ಪ್ರಸ್ತಾಪಗಳೂ ಇಲ್ಲ. ಕ್ರಮಗಳಂತೂ ದೂರವೇ ಉಳಿಯಿತು. ಇದರ ಅರ್ಥ ಈ ಹಗರಣಗಳು ನಡೆದೇ ಇಲ್ಲವೆಂದಲ್ಲ. ಆದರೆ ಇವುಗಳನ್ನು ಮುಚ್ಚಿಹಾಕಿಕೊಳ್ಳುವ ಸರ್ಕಾರಗಳ ಹುನ್ನಾರಗಳ ಭಂಡತನವೇ ಇಲ್ಲಿ ಪ್ರದರ್ಶನವಾಗಿದೆ. ಹಲವಾರು ಅಕ್ರಮ, ಅನೈತಿಕ ಕ್ರಮಗಳಿಂದ ಅಧಿಕಾರದಲ್ಲಿ ಉಳಿದುಕೊಂಡಿರುವ ಬಿಜೆಪಿಯು ಮುಂದುವರಿಯಲು ನೈತಿಕತೆಯೇ ಇಲ್ಲ. ಇಂತಹ ದಿವಾಳಿತನ ರಾಜ್ಯಪಾಲರ ಭಾಷಣದಲ್ಲಿ ಬಟ್ಟಬಯಲಾಗಿದೆ.

ಸರ್ಕಾರ ಅಭಿವೃದ್ಧಿ, ಕಾನೂನು ಸುವ್ಯವಸ್ಥೆ, ಸಾಮಾಜಿಕ ನ್ಯಾಯ, ಕಲ್ಯಾಣದಂತಹ ಕ್ರಮಗಳ ಬಗ್ಗೆಹೇಳಿಕೊಂಡಿರುವ ಸಾಧನೆಗಳ ಪ್ರತಿಯೊಂದು ಮಾತು ಬೊಗಳೆಯಾಗಿವೆ. ಅಭಿವೃದ್ಧಿಯ ಬಗ್ಗೆ ಬೊಬ್ಬಿರಿವ ಬಿಜೆಪಿ ಈಗಲಾದರೂ ಕೃಷಿ-ಕೈಗಾರಿಕೆಗಳಂತಹ ಮೂಲಭೂತ ಕ್ಷೇತ್ರಗಳಲ್ಲಿ ಅದು ಸಾಧಿಸಿದ ಪ್ರಗತಿಯನ್ನು ಕಾಣಲು ಸಾಧ್ಯವೇ ಇಲ್ಲ. ಈಗಲೂ ವಿದ್ಯುತ್ ಅಭಾವ ನೀಗಲಿಲ್ಲ. ಬದಲಾಗಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ, ವಿಶ್ವ ಬ್ಯಾಂಕ್ ಸಾಲ ಅಷ್ಟೇ ಸಾಕು ಎಂದು ಭಾವಿಸಿದೆ. ರಸ್ತೆ ನಿರ್ಮಾಣದಂತಹ ಹಳಸಲು ಭರವಸೆಗಳನ್ನೆ ಪುನರುಚ್ಚರಿಸಿದೆ. ಅಭಿವೃದ್ಧಿಯ ಅದರ 2020ರ ಕರ್ನಾಟಕಕ್ಕೆ ಒಂದು ನಿರ್ದಿಷ್ಟತೆಯೇ ಇಲ್ಲದೇ ಮೂಗಿಗೆ ಹಚ್ಚಿದ ತುಪ್ಪವಾಗಿದೆ. ಪ್ರಾದೇಶಿಕ ಅಸಮಾನತೆ ತೊಲಗಿಸಲೆಂದೇ ಮೀಸಲಿಟ್ಟ ಹಣದಲ್ಲಿ ಒಂಬತ್ತು ತಿಂಗಳು ಕಳೆದರೂ ಇನ್ನೂ ಖರ್ಚು ಮಾಡಿರುವುದು ಕೇವಲ ಶೇ. 22 ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಇದರ ಎದುರಿನಲ್ಲಿ ಉಳಿದಿರುವ ಮೂರು ತಿಂಗಳಲ್ಲೇ ಪೂರ್ಣ ಖರ್ಚು ಮಾಡುವ ಅದರ ಹೇಳಿಕೆ ಇನ್ನೆಷ್ಟು ಅಕ್ರಮಗಳಿಗೆ ಹಾದಿಯಾಗಬಲ್ಲದೋ? ಇದು ಸಹ ರೇಗಾದಂತೆ ಕೇವಲ ಹಣ ಖರ್ಚು ಮಾಡುವ ಯೋಜನೆಯಾದೀತೇ ಹೊರತೂ ಮೂಲದಲ್ಲಿ ಮಾನವ ಅಭಿವೃದ್ಧಿ ಸಾಧಿಸುವ ದಿಕ್ಕಿನಲ್ಲಿಲ್ಲ. ಉದ್ಯೋಗ ಸೃಷ್ಟಿಗೂ ಸರ್ಕಾರ ಬಂಡವಾಳ ಹೂಡಿಕೆ ಸಮಾವೇಶವನ್ನು ತೋರಿಸಿ 8 ಲಕ್ಷ ಉದ್ಯೋಗ ಸೃಷ್ಟಿಸುವುದಾಗಿ ಈಗಲೂ ಹೇಳಿಕೊಂಡಿದೆ. ಆ ಸಮಾವೇಶದಲ್ಲಿ ದೊರೆತ ಹೂಡಿಕೆಯ ಭರವಸೆಯೇ ಜಾರಿಯಾಗದಿರುವಾಗ ಎಷ್ಟು ಬಂಡವಾಳ ದಕ್ಕುವುದು ಎಂಬುದು ಪ್ರಶ್ನೆಯಾಗಿರುವಾಗ, ಉದ್ಯೋಗ ಸೃಷ್ಟಿಯ ಸಾಧ್ಯತೆಯ ಬಗ್ಗೆ ಹೇಳುವುದು ಹುಸಿ ಕನಸುಗಳೇ.

ಒಂದೆಡೆ ಸರ್ಕಾರ ತಂದ ಸಾಲವೇ 90 ಸಾವಿರ ಕೋಟಿ ಇರುವಾಗ ಅದನ್ನು ತೀರಿಸುವುದಾಗಲೀ, ಬಡ್ಡಿ ಕಟ್ಟುವುದಾಗಲೀ ಸಾಧ್ಯವಿಲ್ಲದೇ ಸಾಲದ ಕೂಪದಲ್ಲಿರುವಾಗಲೂ ಖಜಾನೆ ತುಂಬಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿರುವುದು ಹಾಸ್ಯಾಸ್ಪದವೇ ಸರಿ. ಅದೇ ರೀತಿ ಪ್ರಮುಖವಾಗಿ ಕಾರ್ಷಿಕ ಬಿಕ್ಕಟ್ಟಿನಿಂದ ಹೊರಬರುವ, ಕೃಷಿಕ ಸಮುದಾಯಗಳನ್ನು ರಕ್ಷಿಸುವ ಯಾವುದೇ ಪ್ರಸ್ತಾವಗಳೂ ಇಲ್ಲಿಲ್ಲ. ಸರ್ಕಾರವೇ ಹೇಳಿಕೊಂಡಂತೆ ರೈತರಿಗೆ ಸುಲಭವಾಗಿ ಶೇ. 3ರ ಬಡ್ಡಿದರದಲ್ಲಿ ಸಾಲ ಸಿಗುವಂತಿದ್ದರೆ ಬೆಳೆದ ಫಸಲಿಗೆ ಸೂಕ್ತ ಬೆಲೆ ಇದ್ದಿದ್ದರೆ ನಿತ್ಯವೂ ರೈತ ಆತ್ಮಹತ್ಯೆಗಳು ನಡೆಯುತ್ತಿದ್ದವೇ ಎಂದು ಈ ಮಣ್ಣಿನ ಮಕ್ಕಳು ಸರ್ಕಾರಕ್ಕೆ ಕೇಳಬೇಕು. ಉತ್ತಮ ಬೀಜ, ಗೊಬ್ಬರ ಪೂರೈಸಿದ ಸರ್ಕಾರದ ಹೇಳಿಕೆಯು ಕಳಪೆ ಬೀಜ-ಗೊಬ್ಬರದ ವಿರುದ್ಧ ರೈತರ ಪ್ರತಿಭಟನೆಯೇ ಬೊಗಳೆಯನ್ನು ಹೊರಹಾಕುತ್ತದೆ. ಕೃಷಿ ಅಭಿವೃದ್ಧಿ ಎಂದರೆ ಸಾವಯವ ಕೃಷಿ ಎಂದು ಒಂದಿಷ್ಟು ಹಣ ಸುರಿಯುವುದೂ, ಮನೆಗಳಲ್ಲಿ ಮುಖ್ಯಮಂತ್ರಿ ಮಲಗುವುದು, ವಿದೇಶಿ ಪ್ರವಾಸಗಳೆಂದೇ ಸರ್ಕಾರ ಭಾವಿಸಿದೆ. ಹಾಗೆಯೇ ಈ ಭಾಷಣದಲ್ಲಿ ಕೂಲಿಕಾರರು ಕಾರ್ಮಿಕರು, ಅಸಂಘಟಿತರ ಜ್ವಲಂತ ಪ್ರಶ್ನೆಗಳ ಬಗ್ಗೆ ಪ್ರಸ್ತಾಪವೇ ಇಲ್ಲದಿರುವುದು ಖಂಡನೀಯ. ಅಭಿವೃದ್ಧಿಗೆಂದು ಸರ್ಕಾರ ಅಂದಾದುಂದಿಯಾಗಿ ರೈತರ ಜಮೀನು ಸ್ವಾಧೀನ ಪಡಿಸಿಕೊಂಡು ಖಾಸಗಿಯವರಿಗೆ ದುಗ್ಗಾಣಿಗೆ ಮಾರುವ ಭೂ ದಂಧೆಯನ್ನು ನಿಲ್ಲಿಸುವ ಯಾವ ಮಾತುಗಳೂ ಇಲ್ಲಿಲ್ಲ.

ಇನ್ನು ಕೃಷ್ಣಾ ಐತೀರ್ಪಿನ ಹಿನ್ನೆಲೆಯಲ್ಲಿ 'ನೀರಾವರಿ ದಶಕ' ದ ಘೋಷಣೆಗೆ ಯಾವುದೇ ನಿರ್ದಿಷ್ಟ ತಳಹದಿ, ಅಗತ್ಯ ಹಣ, ಜಾರಿಯ ಯೋಜನೆಗಳು ಮಂಡನೆಯಾಗದೇ ಇರುವುದು ನೀರಾವರಿ ಅಭಿವೃದ್ಧಿಯ ಬಗ್ಗೆ ಸರ್ಕಾರಕ್ಕಿರುವ ರಾಜಕೀಯ ಇಚ್ಛಾಶಕ್ತಿಯ ಕೊರತೆ ಹಾಗೂ ಅನಭಿವೃದ್ಧಿಯ ಪಾಳೇಗಾರಿ ಮನೋಭಾವದ ಪ್ರತೀಕವಾಗಿದೆ ಮತ್ತು ಕಾಲಹರಣದ ವಸ್ತುವಾಗಲಿದೆ. ಇದಕ್ಕೆ ನಿರ್ದಿಷ್ಟ ಯೋಜನೆ, ಹಣ ಪ್ರಕಟಿಸಬೇಕಿತ್ತು.

ರಾಜ್ಯಪಾಲರ ಭಾಷಣದಲ್ಲಿ ವಸತಿ-ನಿವೇಶನ-ಮನೆಹಂಚಿಕೆಯ ಪ್ರಕಟಣೆ ಈಗಿನ ಬೇಡಿಕೆಗೆ ಸರಿ ಹೊಂದುವುದೇ ಇಲ್ಲ. ಇನ್ನು ರೇಷನ್ ಕಾರ್ಡ್ ಬಗ್ಗೆಯಾಗಲೀ, ಬೆಲೆ ಏರಿಕೆಯ ಬಾಧೆಯಿಂದ ನರಳುತ್ತಿರುವ ಜನರಿಗೆ ಪರಿಹಾರವಾಗಲೀ ಇಲ್ಲವೇ ಇಲ್ಲ. ನೆರೆ ಸಂತ್ರಸ್ತರಿಗೆ ನೆಲೆಯೊದಗಿಸುವ ಮಾತಿನ ಮಂಟಪ ಬಿಟ್ಟರೆ ಅವರ ಪುನರ್ ವಸತಿಗೆ ಕ್ರಮಗಳಿಲ್ಲ. ಹೀಗೆ ಸಮಸ್ಯೆಗಳಿಂದ ತತ್ತರಿಸುತ್ತಿರುವ, ಹತಾಶೆ ಅನುಭವಿಸುತ್ತಿರುವ

ಜನತೆಯನ್ನು ರಕ್ಷಿಸುವ ಯಾವುದೇ ಕ್ರಮಗಳಿಲ್ಲ. ಬದಲಾಗಿ ಕಾರ್ಪೋರೇಟ್ ಕಂಪನಿಗಳು, ಭೂ-ಗಣಿಗಳ್ಳರನ್ನು, ಭ್ರಷ್ಟ- ಲೂಟಿಕೋರ, ಅಕ್ರಮದಾರರನ್ನು ರಕ್ಷಿಸುವ ಅಜೆಂಡಾ ಜಾರಿಗಾಗಿಯೇ ಈ ಸರ್ಕಾರವಿದೆ ಎಂದು ಪುನರುಚ್ಚರಿಸಿದೆ.

ಹಾಗೆಯೇ ಕೋಮು ಸೌಹಾರ್ದತೆ, ಕಾನೂನು ಸುವ್ಯವಸ್ಥೆ ಕಾಪಾಡಿರುವುದು, ದಲಿತರು-ಮಹಿಳೆಯರ ಅಭಿವೃದ್ಧಿಗೆ ಬದ್ಧವಾಗಿರುವುದಾಗಿ ಹೇಳುತ್ತಿರುವುದು ಎಷ್ಟೊಂದು ವಂಚನೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ ದಲಿತರ ಅಭಿವೃದ್ಧಿಗೆಂದು ಮೀಸಲಿಟ್ಟ ಕೇಂದ್ರ-ರಾಜ್ಯ ಸರ್ಕಾರಗಳ ಸಾವಿರಾರು ಕೋಟಿ ರೂ.ಗಳನ್ನು ಇದೂವರೆಗೂ ಬಹುತೇಕ ಖರ್ಚುಮಾಡಿಲ್ಲ.


ಒಟ್ಟಾರೆ ರಾಜ್ಯಪಾಲರ ಭಾಷಣ ಜನತೆಯನ್ನು ವಂಚಿಸುವ ದಿಕ್ಕಿನಲ್ಲಿದೆ ಮತ್ತು ತನ್ನ ಎಲ್ಲ ಪಾತಕಗಳನ್ನು ಸಮರ್ಥಿಸಿಕೊಳ್ಳುವ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾಶಗೊಳಿಸುವ ದಿಕ್ಕಿನಲ್ಲಿದೆ. ಇಂತಹ ವಂಚಕತನದ ಭಾಷಣವೇ ಹೊಸ ವರುಷದ ಗೊತ್ತುಗುರಿ ಎಂದಿರುವಾಗ ಇದನ್ನು ವಿರೋಧಿಸಿ ಸರ್ಕಾರವನ್ನು ತೊಲಗಿಸುವುದು ಜನರ ರಾಜಕೀಯ ಪ್ರಥಮ ಆದ್ಯತೆಯ ಗುರಿಯಾಗಿಸಿಕೊಳ್ಳಬೇಕು. ○

ಆರ್ಥಿಕವಾಗಿ ಸಾಮಾಜಿಕವಾಗಿ ತೀರಾ ಹಿಂದುಳಿದಿರುವ ಮುಸ್ಲಿಂ ಸಮುದಾಯಕ್ಕೆ ಏನೇ ಸವಲತ್ತು ನೀಡಲು ಹೋದರೂ ಅಲ್ಪಸಂಖ್ಯಾತರ ತುಷ್ಟೀಕರಣ ಎಂದು ಬೊಬ್ಬೆ ಹಾಕಲು ಸಂಘ ಪರಿವಾರ ಕಾದುಕೂತಿದೆ. ಈ ಸವಾಲನ್ನು ರಾಜಕೀಯವಾಗಿ ಎದುರಿಸಲು ಕಾಂಗ್ರೆಸ್ ಸಿದ್ಧವಿಲ್ಲ. ಈ ಪರಿಸ್ಥಿತಿಯಲ್ಲಿ ಕಷ್ಟಕ್ಕೀಡಾಗಿರುವವರು ನೊಂದ ಮುಸ್ಲೀಮರು. ಈ ಸಮಸ್ಯೆಯ ವಿಷ ವರ್ತುಲವನ್ನು ಛಿದ್ರಗೊಳಿಸಲೇಬೇಕಿದೆ.

ಇನ್ನೂ ವಿಳಂಬ ಸಲ್ಲದು - ನ್ಯಾಯನೀಡಿ

ಮುಸ್ಲಿಂ ಹಕ್ಕುಗಳ ರಾಷ್ಟ್ರೀಯ ಸಮಾವೇಶ

ಮುಸ್ಲಿಂ ಹಕ್ಕುಗಳ ಬಗ್ಗೆ ಡಿಸೆಂಬರ್ 2010 ರಂದು ದೆಹಲಿಯ ಮಾವಲಂಕರ್ ಹಾಲ್‌ನಲ್ಲಿ ರಾಷ್ಟ್ರೀಯ ಸಮಾವೇಶ ಜರುಗಿತು. ಈ ಕಾರ್ಯಕ್ರಮವು ಡೆಮಾಕ್ರಟಿಕ್ ಫೋರಂ ಫಾರ್ ನ್ಯಾಷನಲ್ ಇಂಟಗ್ರೇಷನ್ (ಕೋಲ್ಕತ್ತಾ) ಮುಸ್ಲಿಂ ಇಂಟೆಲಿಜೆನ್ಷಿಯಾ (ದೆಹಲಿ) ಮತ್ತು ಅವಾಜ್ (ಹೈದರಾಬ್) ಇದರ ಸಹಯೋಗದಲ್ಲಿ ನಡೆಯಿತು. ಈ ಸಮಾವೇಶವನ್ನು ಎರಡು ಅಧಿವೇಶನಗಳಾಗಿ ವಿಂಗಡಿಸಲಾಗಿತ್ತು. ಮೊದಲನೇ ಅಧಿವೇಶನದಲ್ಲಿ ರಂಗನಾಥ್ ಮಿಶ್ರಾ ಆಯೋಗದ ವರದಿಗಳ ಅನುಷ್ಠಾನ ಮತ್ತು ಶಿಫಾರಸ್ಸುಗಳ ಬಗ್ಗೆ ಚರ್ಚಿಸಲಾಯಿತು. ಎರಡನೇ ಅಧಿವೇಶನದಲ್ಲಿ ಸಾಚಾರ್ ಸಮಿತಿ ವರದಿ ಸಲ್ಲಿಕೆಯ 4 ವರ್ಷದ ನಂತರದ ಸ್ಥಿತಿಗತಿಗಳನ್ನು ವಿಮರ್ಶಿಸಲಾಯಿತು. ಸಮಾವೇಶದಲ್ಲಿ ಪ್ರಸಿದ್ಧ ಮತ್ತು ಪರಿಣಿತ ಸಂಸದೀಯ ಪಟುಗಳು, ಸಾಮಾಜಿಕ ಕಾರ್ಯಕರ್ತರು 4 ಗಂಟೆಗಳ ಕಾಲ ವಿಚಾರ ಮಂಡಿಸಿದರು. ಕಾರ್ಯಕ್ರಮವು ಫೈಜ್ ಅಹ್ಮದ್ ಫೈಜಾರವರ ಕವಿತೆಯೊಂದಿಗೆ ಆರಂಭಗೊಂಡಿತು.



ರಂಗನಾಥ್ ಮಿಶ್ರಾ ಆಯೋಗದ ವರದಿಯ ಅನುಷ್ಠಾನ

ಈ ಅಧಿವೇಶನವು ಜೆ.ಎನ್.ಯು ಪ್ರಾಧ್ಯಾಪಕ ಡಾ. ಅನ್ವರ್ ಪಾಷರವರ ಅಧ್ಯಕ್ಷತೆಯಲ್ಲಿ ನಡೆಯಿತು. ರಂಗನಾಥ್ ಮಿಶ್ರಾ ವರದಿಯ ಐತಿಹಾಸಿಕ ಮಹತ್ವ ಮತ್ತು ಅದರ ಪ್ರಾಮುಖ್ಯತೆಯನ್ನು ಅವರು ಸಂಕ್ಷಿಪ್ತವಾಗಿ ತಿಳಿಸಿದರು.

ರಾಜ್ಯಸಭಾ ಸದಸ್ಯ ಮೈನುಲ್ ಹಸನ್‌ರವರು ಚರ್ಚೆಯನ್ನು ಆರಂಭಿಸಿ ಮುಸ್ಲಿಂ ಹಿಂದುಳಿಯುವಿಕೆಯ ಕಾರಣಗಳ ಬಗ್ಗೆ ನಿರ್ಣಾಯಾತ್ಮಕ ಹೆಜ್ಜೆಗಳನ್ನು ತೆಗೆದುಕೊಂಡು ಪ್ರಜಾಪ್ರಭುತ್ವವನ್ನು ಬಲಪಡಿಸಬೇಕಾಗಿದೆ. ಮುಸ್ಲೀಮರ ಅಭಿವೃದ್ಧಿಗೋಸ್ಕರ ಕೈಗೊಳ್ಳುವ ಯಾವುದೇ ಕ್ರಮವನ್ನು ಓಲೈಕೆಯೆಂಬ ದೃಷ್ಟಿಯಿಂದ ನೋಡುವುದು ಬದಲಾಗಬೇಕು. ಭಾಷಾ ದಾರ್ಮಿಕತೆಯ ರಾಷ್ಟ್ರೀಯ ಆಯೋಗದ ಅಧ್ಯಕ್ಷರಾಗಿ ನ್ಯಾ. ರಂಗನಾಥ್ ಮಿಶ್ರಾರವರು ದಿನಾಂಕ 10.05.2007 ರಂದು ವರದಿ ಮಂಡಿಸಿದರು. ಆದರೂ ಈ ವರದಿ ಆಧರಿಸಿ ಕಾರ್ಯೋನ್ಮುಖವಾಗಲಿಲ್ಲ. ಈ ವರದಿಯು ಹಲವಾರು ಮಹತ್ವದ ಶಿಫಾರಸ್ಸುಗಳೊಂದಿಗೆ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಮುಸ್ಲಿಮರಿಗೆ ಶಿಕ್ಷಣ ಮತ್ತು ಕೆಲಸದಲ್ಲಿ ಶೇ.10 ಮೀಸಲಾತಿ ನೀಡಬೇಕೆಂದು ಆಗ್ರಹಿಸಿದೆ. ಲಕ್ಷದ್ವೀಪ ಕೇಂದ್ರಾಡಳಿತ ಪ್ರದೇಶದಲ್ಲಿ ಹಾಗೂ ಜಮ್ಮು ಕಾಶ್ಮೀರ ಮೇಘಾಲಯ, ಮಿಝೋರಾಂ, ನಾಗಾಲ್ಯಾಂಡ್, ಪಂಜಾಬ್‌ದಲ್ಲಿ ವಾಸವಾಗಿರುವ ಎಲ್ಲ ಹಿಂದುಗಳಿಗೆ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಬೇಕೆಂದು ವ್ಯಾಖ್ಯಾನಿಸಿದೆ. ಆದರೂ ಆ ವರದಿಯ ಅನುಷ್ಠಾನದ ಮೇಲೆ ಕೇಂದ್ರ ಸರ್ಕಾರ ತಣ್ಣೀರೆರೆಚಿತು. ಆಂಧ್ರಪ್ರದೇಶ ಹಾಗೂ ಪ.ಬಂಗಾಳ ರಾಜ್ಯಗಳು ಹಿಂದುಳಿದ ಮುಸ್ಲಿಮರಿಗೆ ಮೀಸಲಾತಿ ನೀಡುವ ಬಗ್ಗೆ ಧನಾತ್ಮಕ ನಿರ್ಧಾರ ತೆಗೆದುಕೊಂಡವು ಎಂದರು.

ರಾಜ್ಯಸಭಾ ಉಪಾಧ್ಯಕ್ಷರಾದ ಕೆ.ರೆಹಮಾನ್ ಖಾನ್‌ರವರು ಎಲ್ಲಾ ಹಿಂದಿನ ಸರಕಾರದ ಆಯೋಗಗಳು ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಮತ್ತು ನಿರ್ಧಿಷ್ಟವಾಗಿ ವಿಶ್ಲೇಷಿಸಿಲ್ಲ. ಆದರೆ ಸಾಚಾರ್ ಕಮಿಟಿ ಮತ್ತು ರಂಗನಾಥ್ ಮಿಶ್ರಾ ಆಯೋಗದ ಈ ಕೆಲಸ ಮಾಡಿದೆ ಎಂದರು. 1993 ರಲ್ಲಿ ರೆಹಮಾನ್ ಖಾನ್‌ರವರು ಕರ್ನಾಟಕದ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರಾಗಿದ್ದಾಗ ಮುಸ್ಲಿಮರಿಗೆ ಶೇ.4 ಮೀಸಲಾತಿ ಕಲ್ಪಿಸಿರುವುದನ್ನು ನೆನಪಿಸಿದರು.

ಸಮಾಜದ ಎಲ್ಲಾ ಧಾರ್ಮಿಕ ಅಲ್ಪಸಂಖ್ಯಾತರ ತಾರತಮ್ಯಗಳನ್ನು ಸಾಮಾಜಿಕ ನ್ಯಾಯದ ಮೂಲಕ ಸರಿಪಡಿಸಬೇಕಾಗಿದೆ. ಮುಸ್ಲಿಮರ ಹಿಂದುಳಿಯುವಿಕೆಯ ಕಾರಣವನ್ನು ಮುಸ್ಲಿಂ ಸಮಾಜದ ಮೇಲೆ ಹೊರಿಸುವುದು ಸರಿಯಲ್ಲ. ಇದು 60 ವರ್ಷಗಳ ಕಾಲ ಆಳಿದ ಸರ್ಕಾರದ ನೀತಿಗಳ ಫಲ ಎಂದು ಮೌಲನ ಅನಿಸುರ್ ರಹಮಾನ್ ಖಸ್ಮಿ ಸದಸ್ಯರು ಮುಸ್ಲಿಂ ವೈಯಕ್ತಿಕ ಕಾನೂನು ಇವರು ಅಭಿಪ್ರಾಯಪಟ್ಟರು.

ರಾಜ್ಯಸಭಾ ಸದಸ್ಯರಾದ ಅಲಿ ಅನ್ವರ್ ಇನ್ಸಾರಿಯವರು ಈ ಎರಡು ಸಮಿತಿಗಳ ಬಗ್ಗೆ ಹೀಗೆ ಹೇಳುತ್ತಾರೆ. ಮುಸ್ಲೀಮರ ಅಭಿವೃದ್ಧಿ ಕುರಿತಂತೆ ಸಾಚಾರ್ ಕಮಿಟಿ ವರದಿಯು ಖಾಯಿಲೆಯ ಮೂಲವನ್ನು ಪತ್ತೆ ಹಚ್ಚಿದರೆ ರಂಗನಾಥ್ ಮಿಶ್ರಾ ಕಮಿಷನ್ ಖಾಯಿಲೆಗೆ ಔಷಧಿಯನ್ನು ನೀಡಿದೆ.

ರಾಷ್ಟ್ರೀಯ ಪರಿಶಿಷ್ಟ ವರ್ಗಗಳ ಹಿಂದಿನ ಕಾರ್ಯದರ್ಶಿಗಳಾದ ಪಿ.ಎಸ್.ಕೃಷ್ಣಮೆನನ್‌ರವರು ಎಸ್‌ಸಿ/ ಎಸ್.ಟಿ/ ಒ.ಬಿ.ಸಿ ಮೀಸಲಾತಿಯಲ್ಲಿ ಸಾಮಾಜಿಕ ನ್ಯಾಯವನ್ನು ಬಲಪಡಿಸಬೇಕಾಗಿದೆ ಮತ್ತು ಮುಸ್ಲಿಂ ಪಂಗಡಗಳಲ್ಲಿ ಬಹಳಷ್ಟು ಹಿಂದುಳಿದ ಪಂಗಡಗಳಿಗೆ ಮೀಸಲಾತಿ ದೊರಕಿಸಿಕೊಡಬೇಕೆಂದು ಅಭಿಪ್ರಾಯಪಟ್ಟರು.

ಈ ಅಧಿವೇಶನದ ಕೊನೆಯಲ್ಲಿ ಸಭಾ ಸದಸ್ಯರಿಗೆ ಚರ್ಚಿಸಲು ಅನುವು ಮಾಡಿಕೊಡಲಾಯಿತು. ಸಾಚಾರ್ ಸಮಿತಿಯ ವರದಿಯ ಅನುಷ್ಠಾನಕ್ಕೆ ವಾರ್ಷಿಕ ಆಯವ್ಯಯ ಶೇ.15 ವಿನಿಯೋಗಿಸಲು ಉಪಯೋಜನೆ ಮಾಡಬೇಕೆಂದು ಪಶ್ಚಿಮ ಬಂಗಾಳ 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಬೇಡಿಕೆ ಇಟ್ಟಿತ್ತು. ಪಶ್ಚಿಮ ಬಂಗಾಳದಲ್ಲಿ ಹಿಂದುಳಿದ ಮುಸ್ಲಿಮರಿಗೆ ಕೆಲಸಗಳಲ್ಲಿ ಶೇ.10 ಮೀಸಲಾತಿ ಕಲ್ಪಿಸಿದೆ. ಅದರಂತೆ 53 ಮುಸ್ಲಿಂ ಪಂಗಡಗಳಿಗೆ ಒ.ಬಿ.ಸಿ. ಯೆಂದು ಪರಿಗಣಿಸಲಾಗಿದೆ.

ಇದರಂತೆಯೇ ಸರಕಾರವು ಮುಸ್ಲಿಮರಿಗೆ ಉನ್ನತ ಶಿಕ್ಷಣ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮೀಸಲಾಗಿ ಕಲ್ಪಿಸಿದೆ ಎಂದು ಪಶ್ಚಿಮ ಬಂಗಾಳದ ಅಲ್ಪಸಂಖ್ಯಾತ ಮತ್ತು ಮದರಸ ಶಿಕ್ಷಣ ಸಚಿವ ಅಬ್ದುಲ್ ಸತ್ತಾರ್ ಅಭಿಪ್ರಾಯಪಟ್ಟರು.

ಸಾಚಾರ್ ಸಮಿತಿ ವರದಿಯ ನಾಲ್ಕು ವರ್ಷಗಳು

ಈ ಅಧಿವೇಶನ ಸಿಯಾಸತ್ ಹೈದ್ರಾಬಾದ್ ಇದರ ಸಂಪಾದಕರಾದ ಜಹೀರುದ್ದೀನ್ ಖಾನ್‌ರವರು ಅಧ್ಯಕ್ಷತೆಯಲ್ಲಿ ನಡೆಯಿತು.

ಮಹಮ್ಮದ್ ಸಲೀಂ (ಅಧ್ಯಕ್ಷರು ಡಬ್ಲ್ಯು.ಬಿ ಎಂ.ಡಿ.ಇ.ಸಿ) ರವರು ಚರ್ಚೆಯನ್ನು ಆರಂಭಿಸಿ ಸಾಚಾರ್ ಸಮಿತಿ ವರದಿಯು ಮುಸ್ಲೀಮರಲ್ಲಿ ವ್ಯವಸ್ಥಿತ ಬದಲಾವಣೆಗೆ ಕಾರಣವಾಗಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ 2006 ರಲ್ಲಿ ಸಂಸತ್ತಿನ ಮುಂದೆ ಇದನ್ನು ಮಂಡಿಸಿದರೂ ರಚನಾತ್ಮಕವಾಗಿ ಈ ವರದಿಯ ಅನುಷ್ಠಾನವಾಗಲಿಲ್ಲ. ವಾರ್ಷಿಕ ಆಯವ್ಯಯದ ಶೇ.0.32 ರಷ್ಟು ಅಲ್ಪಸಂಖ್ಯಾತರ ಕಲ್ಯಾಣಕ್ಕೆ ವಿನಿಯೋಗಿಸಬೇಕೆಂದು ವರದಿ ಹೇಳಿದರೂ ನಿಜವಾದ ಫಲಾನುಭವಿಗಳಿಗೆ ದೊರಕದು ಎಂಬ ಗೊಂದಲದಲ್ಲಿ ಯಾವುದೇ ರೀತಿಯ ಅನುಷ್ಠಾನ ಸಾಧ್ಯವಾಗಿಲ್ಲ ಎಂದರು. ಯೋಜನಾ ಆಯೋಗದ ಸದಸ್ಯರಾದ ಸಯ್ಯದ್ ಸೈಯುದ್ದೀನ್ ಹಮೀದ್‌ರವರು ಸಾಚಾರ್ ಸಮಿತಿ ವರದಿ ನೈಜವಾಗಿ ಮುಸ್ಲಿಮರ ಪರಿಸ್ಥಿತಿಯನ್ನು ವಿಮರ್ಶಿಸಿದೆ. ಸರಕಾರದ ಈ ವರದಿಯ ಬಗ್ಗೆ ಟೀಕೆಗಳಿದ್ದರೂ ಅನುಷ್ಠಾನ ಆರಂಭಿಸಿದೆ ಬೇರೆ ಬೇರೆ ಸಚಿವಾಲಯಗಳು ವರದಿಯ ಅನುಷ್ಠಾನಕ್ಕೆ ಕ್ರಮ ಕೈಗೊಂಡಿವೆ. ಸಮಾಜದ ತಳಮಟ್ಟದಲ್ಲಿ ಕೆಲಸ ಮಾಡುವ ಎಲ್ಲಾ ಸಾಮಾಜಿಕ ಕಾರ್ಯಕರ್ತರು ಮುಸ್ಲಿಂ ಮಹಿಳೆಯರ ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯವರು 11ನೇ ಯೋಜನೆಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಶೇ.15 ಆಯವ್ಯಯದ ಉಪಯೋಜನೆ ತಯಾರಿಸಬೇಕೆಂದು ಮನವಿ ಮಾಡಿದ್ದರು. ಸದ್ಯದಲ್ಲಿ 12ನೇಯ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದ್ದು ಈ ಸಂಬಂಧ ಸಲಹೆ ಮತ್ತು ಸೂಚನೆಗಳನ್ನು ಆಹ್ವಾನಿಸಲಾಗುತ್ತಿದೆ ಎಂದರು.

ಕೇರಳದ ಮಾಜಿ ಲೋಕಸಭಾ ಸದಸ್ಯರಾದ ಟಿ.ಕೆ. ಹಂಝುರವರು ಕೇರಳ ಸರ್ಕಾರ ಸಾಚಾರ್ ವರದಿಯ ಅನುಷ್ಠಾನಕ್ಕೆ ಪಾಲೊಲಿ ಮಹಮ್ಮದ್ ಕುಟ್ಟಿಯವರು ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಿಸಿ, ಆ ಸಮಿತಿಯ ಶಿಫಾರಸ್ಸಿನಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ ಎಂದರು.

ಎಂ.ಎ.ಎ. ಫಾತ್ಮಿ (ಮಾಜಿ ಮಾನವ ಸಂಪನ್ಮೂಲ ಸಚಿವರು) ಕೋಮುವಾದವು ಜನರ ಮಾನಸಿಕ ಸ್ಥಿತಿ ಅನ್ನುವ ಮಟ್ಟಕ್ಕೆ ತಲುಪಿದೆ. ಈ ಸ್ಥಿತಿಯನ್ನು ಸಾಚಾರ್ ಸಮಿತಿಯ ವರದಿಯ ಅನುಷ್ಠಾನದ ಮೂಲಕ ಸರಿಪಡಿಸಬೇಕು. ಮುಸ್ಲಿಂ ವಿದ್ಯಾರ್ಥಿಗಳಿಗೆ ಕೇಂದ್ರಿಯ ವಿದ್ಯಾಲಯ ಸೇರ್ಪಡೆಗೆ ಮೀಸಲಾತಿ ಕಲ್ಪಿಸಬೇಕು. ಮುಸ್ಲೀಮರು ವಾಸಿಸುವ ಪ್ರದೇಶಗಳಲ್ಲಿ ಹೆಚ್ಚು ಕಸ್ತೂರ್ಬಾ ಬಾಲಿಕ ವಿದ್ಯಾಲಯಗಳನ್ನು ಸ್ಥಾಪಿಸಿ, ಮುಸ್ಲಿಂ ಹೆಣ್ಣುಮಕ್ಕಳು ಶಾಲೆಗೆ ಕಲಿಯಲು ಬರುವಂತೆ ವಾತಾವರಣ ನಿರ್ಮಿಸಬೇಕೆಂದರು.

ಸಮಾವೇಶದಲ್ಲಿ ಸಿಪಿಐ(ಎಂ) ಕಾರ್ಯದರ್ಶಿ ಪ್ರಕಾಶ್ ಕಾರಟ್, ಬೃಂದಾ ಕಾರಟ್, ರಾಜ್ಯಸಭಾ ಸದಸ್ಯರು, ಎಂ.ಎಲ್.ಎ.ಗಳು ವಿಶ್ವವಿದ್ಯಾನಿಲಯ ದಿಂದ ಅಧ್ಯಾಪಕರುಗಳು ಪತ್ರಕರ್ತರು ಭಾಗವಹಿಸಿದ್ದರು.

ಶಮೀಮಾ ತುಮಕೂರು.

ನಿರ್ಣಯಗಳು

- ಸಮಾವೇಶವು ರಂಗನಾಥ್ ಮಿಶ್ರಾ ಆಯೋಗ ಮತ್ತು ಸಾಚಾರ್ ಸಮಿತಿ ವರದಿಗಳ ಅನುಷ್ಠಾನದ ಬಗ್ಗೆ 2 ನಿರ್ಣಯಗಳನ್ನು ತೆಗೆದುಕೊಂಡಿತು.
- ರಂಗನಾಥ್ ಮಿಶ್ರಾ ಆಯೋಗದ ವರದಿಯ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರ ಕಾಲೆಳೆಯುವುದನ್ನು ನಿಲ್ಲಿಸಬೇಕು ಮತ್ತು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದ ಮುಸ್ಲೀಮರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಶೇ.10 ಮೀಸಲಾತಿ ನೀಡಬೇಕು.
- ಪರಿಶಿಷ್ಟ ವರ್ಗ ಮತ್ತು ಜಾತಿಯವರಿಗೆ ಸಿಕ್ಕಿರುವ ಎಲ್ಲ ಸೌಲಭ್ಯಗಳು ಮುಸ್ಲೀಮರಿಗೆ ಮತ್ತು ಕ್ರಿಶ್ಚಿಯನ್ನರಿಗೆ ಸಿಗಬೇಕು.
- ಮೀಸಲಾತಿಯ ಗರಿಷ್ಟ ಮಿತಿ ಶೇ.50 ಇರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಸಾಂವಿಧಾನಿಕ ತಿದ್ದುಪಡಿ ಮಾಡಬೇಕು.
- ಸಾಚಾರ್ ಸಮಿತಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಪೂರ್ಣ ಪ್ರಮಾಣದ ಚರ್ಚೆ ನಡೆಸಬೇಕು.
- ಕೇಂದ್ರ, ಸರ್ಕಾರ ಮುಸ್ಲಿಮರ ಅಭಿವೃದ್ಧಿಗೆ ನಿರ್ಣಯಾತ್ಮಕ ಹೆಜ್ಜೆಗಳನ್ನು ತೆಗೆದುಕೊಂಡು ಅಲ್ಪಸಂಖ್ಯಾತ ಉಪಯೋಜನೆಯನ್ನು ಶೀಘ್ರವಾಗಿ ಜಾರಿಗೊಳಿಸಬೇಕು.

ನರ ಹೊರ

ಡಾ. ಬಾಬಾಸಾಹೇಬ್ ಅಂಬೇಡ್ಕರ್ ವಿ.ವಿ. ಸೆನೆಟ್ ಚುನಾವಣೆ: ಎರಡೂ ಸ್ಥಾನದಲ್ಲಿ ಎಸ್‌ಎಫ್‌ಐ ವಿಜಯ

ಸೆಪ್ಟೆಂಬರ್ 27, 2010ರಂದು ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿರುವ ಡಾ: ಬಾಬಾಸಾಹೇಬ್ ಅಂಬೇಡ್ಕರ್ ವಿಶ್ವ ವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ತಂಡ ವಿಜಯ ದ್ಾಖಲಿಸಿತ್ತು.

ಇತ್ತೀಚೆಗೆ ಇದೇ ವಿಶ್ವ ವಿದ್ಯಾಲಯದ ಸೆನೆಟ್‌ಗೆ ವಿದ್ಯಾರ್ಥಿ ಪ್ರಾತಿನಿಧ್ಯಕ್ಕಾಗಿ ನಡೆದ ಚುನಾವಣೆಯಲ್ಲಿ ಇರುವ ಎರಡೂ ಸ್ಥಾನಗಳಿಗೂ ಎಸ್‌ಎಫ್‌ಐನ ವಿದ್ಯಾರ್ಥಿ ಮುಖಂಡರು ಚುನಾಯಿತರಾಗಿರುವುದು ವಿಶೇಷವಾಗಿ ಜನಮನವನ್ನು ಸೆಳೆದಿದೆ.

ವಿ.ವಿ. ವ್ಯಾಪ್ತಿಯ 395 ಕಾಲೇಜುಗಳನ್ನು ಪ್ರತಿನಿಧಿಸಿರುವ 395 ವಿದ್ಯಾರ್ಥಿ ಪಾರ್ಲಿಮೆಂಟಿನ ಕಾರ್ಯದರ್ಶಿಗಳು ಮತ ಚಲಾಯಿಸಿ ಆಯ್ಕೆ ಮಾಡುವ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್‌ಎಫ್‌ಐನ ಸಂದೀಪ್ ದೇವ್ಕರ್ ಅಧ್ಯಕ್ಷರಾಗಿ ಶೇಕ್ ಜಕಾರಿಯಾ ಅವರು ಕಾರ್ಯದರ್ಶಿಯಾಗ್ಗಿ ಚುನಾಯಿತರಾಗಿದ್ದಾರೆ. ಇದರೊಂದಿಗೆ ವಿ.ವಿ. ನಿಯಮಗಳಂತೆ ಈ ಇಬ್ಬರೂ ವಿಶ್ವ ವಿದ್ಯಾಲಯದ ಸೆನೆಟ್‌ನ ವಿದ್ಯಾರ್ಥಿ, ಸದಸ್ಯರುಗಳಾಗಿ ಚುನಾಯಿತರಾದಂತಾಗಿದೆ.

ಈ ಚುನಾವಣೆಯಲ್ಲಿ ಬಾರಿ ಸ್ಪರ್ಧೆ ಇತ್ತು. ಹೇಗಾದರೂ ಸರಿ ಎಸ್‌ಎಫ್‌ಐಯನ್ನು ಸೋಲಿಸುವ ಹುನ್ನಾರವಿತ್ತು. ಆರೆಸ್ಸೆಸ್ ಬಳಗದ ಎಬಿವಿಪಿ, ಎನ್‌ಸಿಪಿ ಪಕ್ಷದ ವಿದ್ಯಾರ್ಥಿ ಘಟಕ ಆರ್‌ವಿಸಿ, ಆರ್‌ಪಿಐ ಪಕ್ಷದ ವಿದ್ಯಾರ್ಥಿ ಘಟಕ ಎಲ್ಲವೂ ಎಸ್‌ಎಫ್‌ಐ ವಿರುದ್ಧ ಕೈ ಜೋಡಿಸಿದ್ದವು. ಆದರೆ ಈ ಮೂರು ಸಂಘಟನೆಗಳ ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತಗೊಂಡವು. ಏಕೆಂದರೆ ಆರ್‌ವಿಸಿ ಮತ್ತು ಆರ್‌ಪಿಐ ವಿದ್ಯಾರ್ಥಿ ಘಟಕದ ಮುಖಂಡರು ತಾವು ಅಭ್ಯರ್ಥಿಗಳಾಗಿರುವುದಲ್ಲದೆ ಎಬಿವಿಪಿ ಅಭ್ಯರ್ಥಿಗಳಿಗೆ ಅನುಮೋದಕರಾಗಿ ಸಹಿ ಮಾಡಿದ್ದಾರೆ. ವಿ.ವಿ. ನಿಯಮಗಳಂತೆ ಈ ಎಲ್ಲಾ ಮೂರು ಸಂಘಟನೆಗಳ ಅಭ್ಯರ್ಥಿಗಳು ಸ್ಪರ್ಧೆಗೆ ಅನರ್ಹರಾದರು.

ಆದರೆ ಅಲ್ಲಿಗೆ ಸವಾಲು ಮುಗಿಯಲಿಲ್ಲ. ಈ ಹಂತದಲ್ಲಿ ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಒತ್ತಡ ಹೇರುವುದು, ಅದೂ ಮಹಾರಾಷ್ಟ್ರ ನವ ನಿರ್ಮಾಣ ವೇದಿಕೆ(ರಾಜ್ ಠಾಕ್ರೆ)ಯ ಗೂಂಡಾಗಳಿಂದ ಎಸ್‌ಎಫ್‌ಐ ಕಾರ್ಯಕರ್ತರ ಮೇಲೆ ಗಂಭೀರ ಹಲ್ಲೆ, ಎನ್‌ಸಿಪಿ ಶಾಸಕರಿಂದ ಬೆದರಿಕೆ.... ಎಲ್ಲವೂ ನಡೆಯಿತು.ಈ ಯಾವುದಕ್ಕೂ ಸೊಪ್ಪು ಹಾಕದ ಎಸ್‌ಎಫ್‌ಐ ಅಭ್ಯರ್ಥಿಗಳು ಅಂತಿಮವಾಗಿ ವಿಜಯ ದಾಖಲಿಸಿದರು.

ಇನ್ನೂ ಒಂದು ಅಸ್ಪೃಶ್ಯತೆ ಗೋಡೆ ಪುಡಿ ಪುಡಿ

ಡಿಸೆಂಬರ್ 25, 2010ರಂದು ತಮಿಳುನಾಡಿನ ಕೊಯಮತ್ತೂರು ನಗರದ ಹೊರವಲಯದ ಹಳ್ಳಿಯಾದ ನಾಗರಾಜಪುರಂ ಎಂಬಲ್ಲಿ ದಲಿತ



ಸಮುದಾಯದ ಜನರು ಹೆದ್ದಾರಿ ಕಡೆಗೆ ಮತ್ತು ತಮ್ಮ ಕೇರಿಯ ಕಡೆಗೆ ಬರುವುದನ್ನು ತಡೆಯಲು ಮೇಲ್ಜಾತಿಯ ಜನ ಹಾಕಿದ್ದ ಗೋಡೆಯೊಂದು ಪುಡಿ ಪುಡಿಯಾಗುತ್ತಿದೆ.

ಎಂದಿನಂತೆ ಈ ಗೋಡೆಯನ್ನು ಪತ್ತೆ ಹಚ್ಚಿ, ಅದನ್ನು ಒಡೆದು ಹಾಕುವಂತೆ ಜಿಲ್ಲಾಡಳಿತದ ಮೇಲೆ ಒತ್ತಡ ತಂದು ಹೋರಾಟ ನಡೆಸಿದ್ದು, ತಮಿಳುನಾಡಿನ ಅಸ್ಪೃಶ್ಯತಾ ನಿವಾರಣಾ ರಂಗ ಮತ್ತು ಸಿಪಿಐ(ಎಂ) ಪಕ್ಷದ ಮುಖಂಡರು.

ತಮಿಳುನಾಡಿನ ಒಂದು ಜನಪ್ರಿಯ ವಾರಪತ್ರಿಕೆಯಾದ 'ಆನಂದ ವಿಕಟನ್' 2010 ವರ್ಷದ '[illegible]' [illegible] ಜನ ಸಾಧಕರನ್ನು ಗುರುತಿಸಿದೆ. [illegible] ಜನರಲ್ಲಿ ಅಸ್ಪೃಶ್ಯತಾ ನಿವಾರಣಾ ರಂಗದ ರಾಜ್ಯ ಅಧ್ಯಕ್ಷರಾದ ಪಿ.ಸಂಪತ್ ಕೂಡ ಒಬ್ಬರು. ಜನಪರವಾದ ನಿಲುವು ಮತ್ತು ಹೋರಾಟಗಳ ಕಾರಣಕ್ಕಾಗಿ ಸಿಪಿಐ(ಎಂ)ನ ಶಾಸಕಿಯಾದ ಜಿ.ಲತಾ ಅವರು ಸಹ ಈ ಹತ್ತು ಜನ ಸಾಧಕರ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದಾರೆ. ಇದು ಜನಪರ ಹೋರಾಟ-ಕಾಳಜಿಗೆ ಸಿಕ್ಕ ಮಾನ್ಯತೆ ಅಲ್ಲವೇ?

ದಾವಣಗೆರೆ ಕೋಮುಗಲಭೆ

ಪುಟ 5 ರಿಂದ

ಗಳಿಕೆಗಾಗಿ ಕಾಂಗ್ರೆಸ್ ಮತ್ತಿತರ ಬಂಡವಾಳಶಾಹಿ ಪಕ್ಷಗಳು ಜಾತ್ಯಾತೀತ ನಿಲುಮೆಗೆ ಬದ್ಧವಾಗಿ ಹೋರಾಡುತ್ತಿಲ್ಲ. ಸಿಪಿಐ(ಎಂ) ಪಕ್ಷ ಅಲ್ಪಸ್ವಲ್ಪ ಪ್ರಯತ್ನ ನಡೆಸುತ್ತಿದ್ದರೂ ಪ್ರಭಾವ ಸೀಮಿತವಾಗಿದೆ. ಅಲ್ಪ ಸಂಖ್ಯಾತರೂ ಹೆಚ್ಚು ಕೋಮುವಾದಿತನಕ್ಕೆ ಅಂಟುತ್ತಿದ್ದಾರೆ.

ಡಿಸೆಂಬರ್ 24 ರಂದು ವಿನೋಬ ನಗರದಲ್ಲಿ ಘರ್ಷಣೆಯ ವಾತಾವರಣದಲ್ಲಿ ನಮಗೆ ಭರವಸೆಯ ಬೆಳಕು ಕಂಡುಬಂದಿದೆ. ಬಹುಸಂಖ್ಯಾತರು ಅಲ್ಲಲ್ಲಿ ಅಲ್ಪಸಂಖ್ಯಾತರ ಮೇಲೆ ಮನೆ ಮೇಲೆ ಧಾಳಿ ಮಾಡದಂತೆ ತಡೆದಿದ್ದಾರೆ. ಮುಸ್ಲೀಮರೂ ಕೂಡಾ ಹಿಂದೂಗಳ ಮೇಲೆ ಹಲ್ಲೆ ಮಾಡದಂತೆ ತಡೆಯಲು ಕೆಲವೆಡೆ ಪ್ರಯತ್ನಿಸಿದ್ದಾರೆ. ಕೋಮು ಸಾಮರಸ್ಯಕ್ಕೆ ಎರಡೂ ಜನಾಂಗದವರು ಕೆಲಸ ಮಾಡಿದ್ದಾರೆ. ನಡೆದ ಘಟನೆಗಳ ಬಗ್ಗೆ "...... ಈ ರಸ್ತೆಯ ಜನ ಮಾಡಿಲ್ಲ. ಹೊರಗಿನವರು ಮಾಡಿದ್ದಾರೆ" (ಬೇರೆ ಊರಿನವರು, ಬಡಾವಣೆಯವರು ಇತ್ಯಾದಿ) ಎಂದು ಮಾತನಾಡುತ್ತಿದ್ದಾರೆ. ಈ ಮಸೀದಿ ರಸ್ತೆಯಲ್ಲಿ ಯಾವುದೇ ಮೆರವಣಿಗೆ ಹಿಂದುಗಳದ್ದು ನಡೆದಾಗಲೂ ಮಸೀದಿ ಎದುರು ಸ್ವಲ್ಪಕಾಲ ನಿಂತು ಮೈಕ್, ಹಾಡು, ಘೋಷಣೆ ಮಾಡಲಾಗುತ್ತಿದೆ ಎಂಬುದು ಆ ರಸ್ತೆಯಲ್ಲಿರುವ ಮೈಸೂರು ಕಿರ್ಲೋಸ್ಕರ್ ಕಂಪನಿಯ ನೌಕರರ ಮುಖಂಡರು ಹೇಳುತ್ತಾರೆ. ಬಹುತೇಕ ಮುಸ್ಲೀಮರ ಆಟೋ , ಸ್ಕೂಟರ್ ಮನೆಗಳಿಗೆ ಧಕ್ಕೆಯಾದದ್ದು ಕಂಡುಬಂದಿದೆ. ಪ್ರಥಮದಲ್ಲಿ ಪೊಲೀಸರು ಹಿಂದೂಪರ ನಿಂತು ಮುಸ್ಲಿಂ ಹುಡುಗರನ್ನು ಮಾತ್ರ ಬಂಧಿಸಿದ್ದರೂ, ನಂತರ 2 ಕೋಮಿನವರನ್ನು ವಶಪಡೆಯಲಾಗಿದೆ.

ಈ ನಡುವೆ ಜನವರಿ 2 ರ ರಾತ್ರಿ ಮತಾಂತರದ ಆರೋಪ ಹೊರಿಸಿ ಪ್ರಾರ್ಥನಾ ನಿರತರಾಗಿದ್ದ ಪಾದ್ರಿ [illegible] [illegible] ಗೂಂಡಾಗಳು ತೀವ್ರ ಹಲ್ಲೆ ನಡೆ[illegible] [illegible]

ಮುಂಬೈ : ನಗರ ರೈಲು ವ್ಯವಸ್ಥೆ ನೇರ್ಪುಗೊಳಿಸಲು ಆಗ್ರಹ

ಮುಂಬೈ ಒಂದು ಮಹಾನಗರ. ಮಹಾನಗರ ಅಂದರೆ ಎಂಥಾ ಮಹಾನಗರ ಅಂತೀರಿ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಒಂದು ವಯೋವೃದ್ಧ ಜೋಡಿ ತಮ್ಮ ಮಗಳ ಮನೆಗೆಂದು ಮುಂಬೈಗೆ ಹೋಯಿತಂತೆ. ರೈಲು ಮುಂಬೈ ತಲುಪಿತು. ಇನ್ನೇನು ಅಲ್ಲಿ ಇಳಿಯ ಬೇಕು. ಎಲ್ಲಿ ಇಳಿಯುವುದು ಅಲ್ಲಿ !! ಆ ಜನ ಸಂದಣಿಯನ್ನು ಕಂಡ ಜೋಡಿ ಬೆಚ್ಚಿ ಬಿದ್ದು, ಕೆಳಕ್ಕೆ ಇಳಿಯಲು ಒಪ್ಪದೇ ಅದೇ ರೈಲಿನಲ್ಲಿ ಹಾಗೇ ವಾಪಸ್ ಊರಿಗೆ ಬಂದಿತಂತೆ.

ಮುಂಬೈ ಲೋಕಲ್ ಟ್ರೈನುಗಳ ಕತೆ ಇನ್ನೂ ಭಯಾನಕವಾದುದು. ಕೈಗೆ ಎಟುಕದ ಕಂಬಿ ಹಿಡಿದು ನೇತಾಡುತ್ತಾ, ಜೋತಾಡುತ್ತಾ ತಮ್ಮ ಪ್ರಾಣಗಳನ್ನೇ ಪಣವಾಗಿಟ್ಟು ಪ್ರಯಾಣ ಮಾಡಬೇಕಾದ ಸ್ಥಿತಿ ಇಲ್ಲಿನ ಲಕ್ಷಾಂತರ ಜನರದ್ದು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಈ ಪ್ರಶ್ನೆಯನ್ನು ಕೈಗೆತ್ತಿಕೊಂಡಿದೆ. ಇತ್ತೀಚಿನ ಕೆಲವೊಂದು ವರ್ಷಗಳಲ್ಲಿ ಡಿವೈಎಫ್‌ಐ ಸ್ಥಳೀಯ ರೈಲುಗಳ ಸಂಖ್ಯೆಯನ್ನು ಹೆಚ್ಚಿಸಬೇಕು, ಪ್ರಯಾಣಿಕರ ಸುರಕ್ಷತೆಗೆ ಕ್ರಮ ವಹಿಸಬೇಕೆಂಬ ಬೇಡಿಕೆಗಳನ್ನು ಇಟ್ಟು ಬಾರಿ ಹೋರಾಟವನ್ನೆ ಸಂಘಟಿಸಿದೆ.

ಏನಾದರೇನು? ರೈಲ್ವೆ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಪ್ರಚಂಡ [illegible] ರೈಲ್ವೆ ಸಚಿವೆ ಮಮತಾ ಬ್ಯಾನರ್ಜಿಯವರಿಗೆ ಈ ಮುಂಬೈ [illegible] ಲಕ್ಷಾಂತರ ಜನರ ಧಿಕ್ಕಾರದ ಕೂಗು ಇನ್ನು ಕಿವಿಗೆ ತಟ್ಟಲೇ ಇಲ್ಲ.

ಮುಂಬೈ ನಗರಕ್ಕೆ ಉತ್ತಮ ರೈಲ್ವೆ ಸಾರಿಗೆ ವ್ಯವಸ್ಥೆಯನ್ನು ರೂಪಿಸಲು ಇದೇ ಮುಂಬೈ ರೈಲ್ವೆ ಪ್ರಯಾಣಿಕರಿಂದ ಕಳೆದ ಹತ್ತು ವರ್ಷಗಳಿಂದ ಸರ್ ಚಾರ್ಜ್ ವಸೂಲಿ ಮಾಡಲಾಗುತ್ತಿದ್ದರೂ ಆ ಬಗ್ಗೆ ಏನೊಂದನ್ನೂ ಜನತೆಗೆ ಸರಿಯಾಗಿ ತಿಳಿಸಲಾಗಿಲ್ಲ. ಕೆಲವೊಂದು ಮಾರ್ಗಗಳಲ್ಲಿ ಟ್ರೈನುಗಳ ಹೆಚ್ಚಳ ಬಿಟ್ಟರೆ ಜನರಿಗೆ ಇಲ್ಲಿಯವರೆಗೆ ಹೆಚ್ಚಿನದೇನೂ ಸಿಕ್ಕಿಲ್ಲ.

ಮುಂಬೈ ನಗರದ ಮುಖ್ಯಭಾಗ, ದೊಡ್ಡ ಭಾಗ ದಿನೇ ದಿನೇ ಶ್ರೀಮಂತರ ಪಾಲಾಗುತ್ತಾ ನಡೆದಿದೆ. ಬಡವರೇನು, ಮಧ್ಯಮ ವರ್ಗದವರಿಗು ಕೂಡ ಅಲ್ಲಿ ವಾಸಿಸುವುದು ಬಲು ಕಷ್ಟವೆನಿಸುತ್ತಾ ಈ ಜನ ವಿಭಾಗಗಳು ನಗರದ ಹೊರ ವಲಯಕ್ಕೆ ಸರಿಯುತ್ತಿರುವುದು ನಡೆಯುತ್ತಿದೆ. ಇಂತಹ ಸ್ಥಿತಿಯಲ್ಲಿ ನಗರದ ಹೊರಭಾಗಗಳಿಗೆ ನಗರ

ರೈಲ್ವೆ ವ್ಯವಸ್ಥೆಯನ್ನು ವಿಸ್ತರಿಸಬೇಕಾದ ಅಗತ್ಯವಿದೆ. ದಹನೂ ರಸ್ತೆಗೆ ನಗರ ರೈಲ್ವೆ ವಿಸ್ತರಣೆ ಮಾಡಬೇಕೆಂಬುದು ಇಂತಹ ಕಾರಣಕ್ಕಾಗಿ ಹುಟ್ಟಿಕೊಂಡಿರುವ ಒಂದು ಪ್ರಮುಖವಾದ ಬೇಡಿಕೆ.

ಈ ಪ್ರಶ್ನೆಗಳ ಆಧಾರದಲ್ಲಿ ಮುಂಬೈ ಮತ್ತು ನೆರೆಯ ಥಾಣೆ ಜಿಲ್ಲೆಗಳ ಎರಡೂ ಡಿವೈಎಫ್‌ಐ ಸಂಘಟನೆಗಳು ಸೇರಿ ಡಿಸೆಂಬರ್ 10 ರಂದು ವಿಶಿಷ್ಟ ರೈಲು ಜಾಥಾ ಸಂಘಟಿಸಿದ್ದವು. ದಹನೂ ರೋಡ್ -ವಿರರ್ ಷಟಲ್ ರೈಲಿನ ತುಂಬ ಪ್ರತಿಭಟನಾಕಾರರದ್ದೇ ಕಲರವ. ಚರ್ಚ್‌ಗೇಟ್‌ವರೆಗಿನ ಮಾರ್ಗದ ಬೇರೆ ಬೇರೆ ನಿಲ್ದಾಣಗಳಲ್ಲೂ ಪ್ರತಿಭಟನಾಕಾರರರು ನೂರಾರು ಸಂಖ್ಯೆಯಲ್ಲಿ ಸೇರುತ್ತಲೇ ಹೋದರು. ರೈಲಿನ ತುಂಬೆಲ್ಲಾ ಡಿವೈಎಫ್‌ಐನ ಶ್ವೇತ ಪತಾಕೆ. ಅವು ಕಿಟಕಿಯ ಹೊರಕ್ಕೂ ಇಣುಕಿ ನೋಡುತ್ತಿದ್ದವು. ಪ್ರಯಾಣಿಕರಿಂದ ಹೋರಾಟಕ್ಕೆ ತುಂಬು ಸಹಕಾರ. ಕೊನೆಗೆ ಬೃಹತ್ ಪ್ರತಿಭಟನೆ. ಮುಖಂಡರ ಬಂಧನ. ಆ ನಂತರ ರೈಲ್ವೆ ಅಧಿಕಾರಿಗಳನ್ನು ಭೇಟಿಮಾಡಿಸಲು ಪೊಲಿಸರ ಪ್ರಯತ್ನ. ಸಾಕಷ್ಟು ಮೊದಲೇ ಲಿಖಿತ ನೋಟಿಸ್ ನೀಡಿದ್ದರೂ ಸಂಬಂಧಿಸಿದ ಅಧಿಕಾರಿಗಳ ನಾಪತ್ತೆ.........

ಇಷ್ಟಕ್ಕೆಲ್ಲಾ ನಿರಾಶೆಗೆ ಒಳಗಾಗುವ ಸಂಘಟನೆಯಲ್ಲ ಡಿವೈಎಫ್‌ಐ. ಇನ್ನಷ್ಟು ತೀವ್ರ ಹೋರಾಟದ ತೀರ್ಮಾನದೊಂದಿಗೆ ಇಲಾಖೆಗೆ ಎಚ್ಚರಿಕೆ ನೀಡಿರುವ ಸಂಘಟನೆ ಮುಂದಿನ ಹೋರಾಟಕ್ಕೆ ಜನರನ್ನು, ಯುವಜನರನ್ನು ಸಜ್ಜು ಮಾಡುತ್ತಿದೆ.

ಈ ಕ್ರೌರ್ಯ

ಈ ಮಲ ಹೊರಿಸುವ ಕ್ರೌರ್ಯ ಹಿಂದೆಯೇ ರೂಢಿ
ಮಾಡಿದ್ದು ಮನುವಾದಿ ಮಂದಿಗಳು ಕೂಡಿ
ದೈವೀ ಸ್ವರೂಪರೈ ಈ ಜನರು ಎಲ್ಲ
ಹೀಗಾಗಿ ಮಾನವತೆ ಸುಳಿಯಲೂ ಇಲ್ಲ.

- ವಿಡಂಬಾರಿ



ಬಿಜೆಪಿ ದರ್ಬಾರ್

ಅಸಮಾನತೆ ನಿವಾರಣೆ ಎಂಬ ಒಗ್ಗರಣೆ

ನಮ್ಮ ನಾಡಿನ ವಿವಿಧ ಪ್ರದೇಶಗಳು ತಾಲ್ಲೂಕುಗಳು ಸಮಾನವಾಗಿ, ಅಭಿವೃದ್ಧಿಯಾಗಿಲ್ಲ. ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಪ್ರದೇಶಗಳು ಅಭಿವೃದ್ಧಿಯ ಪ್ರಶ್ನೆಯಲ್ಲಿ ಹಿಂದುಳಿದಿವೆ ಮತ್ತು ಇತರ ಪ್ರದೇಶಗಳಲ್ಲೂ ಹಲವು ತಾಲ್ಲೂಕು ಹಿಂದುಳಿದಿವೆ ಎಂಬ ಪ್ರಶ್ನೆಗಳ ಆಧಾರದಲ್ಲಿ ಈ ಅಸಮಾನತೆಯ ನಿವಾರಣೆಗೆ ಹಿಂದುಳಿದಿರುವಿಕೆ ಆಧಾರದಲ್ಲಿ ವಿಶೇಷ ಅನುದಾನ ನೀಡುವ ಕ್ರಮ ಜಾರಿಗೆ ಬಂದಿದೆ. ಪ್ರಸ್ತುತ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ದರ್ಬಾರಿನಲ್ಲಿ ಈ ವರ್ಷ ಇಲ್ಲಿಯವರೆಗೆ ಏನು ಅಸಮಾನತೆ ನಿವಾರಣೆಯಾಗಿದೆ ಎಂಬುದನ್ನು ನೋಡಿ.

2010-11 ನೇ ಸಾಲಿನಲ್ಲಿ ಈ ಉದ್ದೇಶಕ್ಕೆ ನಿಗದಿಯಾದ ಮೊತ್ತ 2,464.00 ಕೋಟಿ ರೂಪಾಯಿಗಳು. ಅಕ್ಟೋಬರ್ ತಿಂಗಳವರೆಗೆ ಈ ಉದ್ದೇಶಕ್ಕೆ ಬಿಡುಗಡೆಯಾದ ಹಣ ಕೇವಲ 814.93 ಕೋಟಿ ರೂಗಳು. ಈ 814.93 ಕೋಟಿ ರೂಗಳಲ್ಲಿ ಬಳಕೆಯಾಗಿರುವುದು ಕೇವಲ 646.10 ಕೋಟಿ ರೂಪಾಯಿಗಳು ಮಾತ್ರ. ಉಳಿದದ್ದು ಬಳಕೆಯಾಗದೆ ವಾಪಸ್ಸಾಗಿದೆ.


ಸದ್ಯ ಉಳಿದ ಹಣ ಖಜಾನೆಗೆ ವಾಪಸ್ಸಾದರೂ ಬಂದಿದೆಯಲ್ಲ, ಬಿಜೆಪಿ ಸರ್ಕಾರದ ದರ್ಬಾರಿನಲ್ಲಿ ಅದೇ ಒಂದು ಪವಾಡ ಅಲ್ಲವೇ ?

ಮತ್ತೆ ಆಪರೇಷನ್ ಕ-ಮಲ!

ರಾಜ್ಯದಲ್ಲಿ ನಡೆದ ಪಂಚಾಯತ್ ಚುನಾವಣೆಗಳ ಫಲಿತಾಂಶ ಬಂದಿದೆ. ಈ ಕುರಿತು ಪ್ರತ್ಯೇಕ ವರದಿ ಇರುವುದರಿಂದ ಇಲ್ಲಿ ಚುನಾವಣೆಯ ಸಮಗ್ರ ವಿಶ್ಲೇಷಣೆ ಏನೂ ಅಗತ್ಯವಿಲ್ಲ. ಆದರೆ 'ಹಾಗೆ ಸುಮ್ಮನೆ.....' ಕೆಲವು ಟ್ರೆಂಡ್‌ಗಳನ್ನು ಗಮನಿಸಬಹುದು.

ಚುನಾವಣೆಗಳಲ್ಲಿ ಜಾತಿ ಬಲದ ಬಳಕೆ, ಹಣಬಲದ ಬಳಕೆಗಳನ್ನು ಬಂಡವಾಳಶಾಹಿ ಪಕ್ಷಗಳೆಲ್ಲವೂ ಮಾಡುತ್ತವೆ ಎಂಬುದು ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ. ಯಾರು ಎಷ್ಟು ಪ್ರಮಾಣದಲ್ಲಿ ಮಾಡಿದರು ಎಂಬುದಷ್ಟೆ ಕೇಳಬಹುದಾದ ಪ್ರಶ್ನೆ.

ಇಲ್ಲೊಂದು ಚಿತ್ರವಿದೆ. (ಪ್ರಜಾವಾಣಿ- ಜನವರಿ 1,2011) . ಮೈಸೂರು ನಗರದ ಸಮೀಪದ ರಮ್ಮನ ಹಳ್ಳಿಯಲ್ಲಿನ ಚುನಾವಣಾ ಪ್ರಚಾರದ ಭರಾಟೆಯ ಚಿತ್ರ ಅದು. ಕಮಲದ ಗುರುತಿನ ಕುತ್ತಿಗೆ ಪಟ್ಟಿಯನ್ನು ಕೊರಳಿಗೆ ನೇತು ಹಾಕಿಕೊಂಡಿರುವ ಈ ಯುವಕ ಮತದಾರರ ಕೈಗೆ ನೂರರ ನೋಟುಗಳನ್ನು ಇಟ್ಟು ಇಷ್ಟು ಸಾಕಾ, ಇನ್ನೂ ಬೇಕಾ? ಎನ್ನುತ್ತಿದ್ದಾನೆ.



ಮೈಸೂರಿನಂತಹ ಮೈಸೂರು ಜಿಲ್ಲೆಯಲ್ಲೆ, ಅದೂ ಮಹಾನಗರದ ಸೆರಗಿನಂಚಿನಲ್ಲೆ "ಧನ ವಿತರಣ ಕೈಂಕರ್ಯ" ಈ ಪರಿಯಾಗಿ ನಡೆದರೆ ಇನ್ನು ದೂರದೂರುಗಳು, ಸಂಪರ್ಕ ಸಂವಹನಗಳಿಲ್ಲದ ಕುಗ್ರಾಮಗಳು, ಬಳ್ಳಾರಿ ಜಿಲ್ಲೆಯಂತಹ ರೆಡ್ಡಿಗಳ ಪಾಳೇಯ ಪಟ್ಟುಗಳಲ್ಲಿ ಏನೇನು !! ಮತ್ತು ಯಾವ್ಯಾವ ಪ್ರಮಾಣದಲ್ಲಿ ನಡೆಯಬಹುದು ಅದು ನಿಮ್ಮ ಊಹಾಶಕ್ತಿ ಮತ್ತು ದೇಶಭಕ್ತ ಪಕ್ಷದ ಶಕ್ತಿ, ಸಾಮರ್ಥ್ಯವನ್ನು ಅವಲಂಬಿಸಿದ್ದು. ಆದರೆ ಬಳ್ಳಾರಿಯ ಜನತೆಯೂ ಈ ಸಾರಿ ರೆಡ್ಡಿ ಧಣಿಗಳು ಮುಟ್ಟಿ ನೋಡಿಕೊಳ್ಳುವಂತೆ ಕೊಂಚ ತಿರುಗಿಸಿ ಕೊಟ್ಟಿರುವುದನ್ನು ರೆಡ್ಡಿಗಳಾಗಲಿ, ಯಡಿಯೂರಪರಪ್ಪ, ಈಶ್ವರಪ್ಪರಂತಹ ಬಿಜೆಪಿ ಮುಖಂಡರಾಗಲಿ, ಚಾಮರಾಜಪೇಟೆಯ ಕೇಶವ ಕೃಪಾದ ಮಂದಿಯಾಗಲಿ ಮರೆಯಬಾರದು. ಜನಾದೇಶ ವನ್ನು ಧಿಕ್ಕರಿಸುವುದೇ ಬಾರಿ ಶೌರ್ಯ ಎಂದುಕೊಂಡಿರು ವವರಿಗೆ ಜನರ ತೀರ್ಪು ಯಾವ ಲೆಕ್ಕ. ಅಗೋ ಈಗಾಗಲೇ ಬಳ್ಳಾರಿಯಲ್ಲಿ, ಕಾಂಗ್ರೆಸ್ ಪಕ್ಷದ ನೀತಿ, ಧೋರಣೆಗಳನ್ನು ಹೇಳಿಕೊಂಡು, ಕಾಂಗ್ರೆಸ್ ಪಕ್ಷದ ಹಸ್ತದ ಗುರುತಿನ ಮೇಲೆ ಗೆದ್ದಿರುವ ಸಿರಗುಪ್ಪ ತಾಲ್ಲೂಕಿನ ಹಳೆಕೋಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರದ ನಾಗರತ್ನಮ್ಮರನ್ನು ಆಗಲೇ ಆಪರೇಷನ್ ಕಮಲ ಮಾಡಿ ಸೆಳೆದುಕೊಂಡು ನಾಚಿಕೆ ಇಲ್ಲದೇ ವಿಜಯದ ಗುರುತಾಗಿ ಕೈಬೆರಳೆತ್ತಿ ತೋರುತಿದ್ದಾರೆ. ಇವರು ಗೆದ್ದದ್ದು ಯಾರ ವಿರುದ್ಧ !? ○

ಮು.ಮ. ವರದಿ ಸುಳ್ಳೇ ಸುಳ್ಳು...

"ಮುಖ್ಯಮಂತ್ರಿಗಳು ರಾಜ್ಯದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆದಿಲ್ಲ ಎಂದು ರಾಜ್ಯಪಾಲರಿಗೆ ವರದಿಯನ್ನು ನೀಡಿರುವುದು ನನಗೆ ಆಶ್ಚರ್ಯವಾಗಿದೆ. ಇಂದಿಗೂ ಸಹ ಗಣಿ ಸಂಪತ್ತು ಬಳ್ಳಾರಿಯಿಂದ ನೇರವಾಗಿ ಆಂಧ್ರಪ್ರದೇಶದ ಮೂಲಕ ಪೂರ್ವ ಸಮುದ್ರ ತೀರದಿಂದ ರವಾನೆಯಾಗುತ್ತಿದೆ. ಗಣಿಗಾರಿಕೆ ರಾಜ್ಯದಲ್ಲಿ ಅವ್ಯಾಹತವಾಗಿ ನಡೆದಿದೆ. ಆದರೆ ಗಣಿಗಾರಿಕೆಯೇ ನಡೆದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿರುವುದು ಸರಿಯಲ್ಲ..."

ಯಾರು ಈ ಮಾತು ಹೇಳಿದವರು? ರಾಜ್ಯದ ಯಾವುದೇ ವಿರೋಧ ಪಕ್ಷದ ಮುಖಂಡರಲ್ಲ. ಯಡಿಯೂರಪ್ಪನವರ ದಾಯಾದಿಗಳೂ ಅಲ್ಲ.

ಕರ್ನಾಟಕ ರಾಜ್ಯ ಲೋಕಾಯುಕ್ತರಾದ ನ್ಯಾ: ಸಂತೋಷಹೆಗಡೆಯವರು ಸ್ವತಃ ಈ ಹೇಳಿಕೆ ನೀಡಿದ್ದಾರೆ. ಏನನ್ನುತ್ತಾರೆ ನಮ್ಮ ಯಡಿಯೂರಪ್ಪನವರು. ಬಹುಶಃ ಅವರು ಏನು ಅನ್ನುವುದಿಲ್ಲ. ಯಾಕೆಂದರೆ ಅಕ್ರಮ ಗಣಿಗಾರಿಕೆ ವಿರುದ್ಧದ ಅವರ ಗುಡಗಾಟವೆಲ್ಲಾ ಬರೀ ಬೂಟಾಟಿಕೆ ಎಂಬುದು ಈಗಾಗಲೇ ಜಗಜ್ಜಾಹೀರಾಗಿ ಹೋಗಿದೆ. ಮತ್ತೇನು ಮಾತಾಡಿ ಯಾರು?

........ಉಂಡವನೇ ಜಾಣ

ಹುಚ್ಚನ ಮದುವೆಯಲ್ಲಿ ಉಂಡೋನೆ ಜಾಣ ಅಂದಾಗ ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದ ಈ ಕೆಲವ ಪ್ರಕರಣಗಳನ್ನು ನಾವು ಗಮನಿಸಲೇ ಬೇಕು.

ಹಳೇ ಬೆಂಗಳೂರಿನಲ್ಲಿ ಸಹಸ್ರಾರು ಕಾರ್ಮಿಕರಿಗೆ ಉದ್ಯೋಗ ನೀಡಿ ಬೆಂಗಳೂರಿನ ಒಂದು ಬೃಹತ್ ಉದ್ದಿಮೆಯಾಗಿದ್ದ ಸಂಪಿಗೆ ರಸ್ತೆಯ ರಾಜಾಮಿಲ್ ಇದ್ದ ಜಾಗದಲ್ಲೀಗ ಮಂತ್ರಿ ಮಾಲ್ ಎಂಬ ಬಹುಮಹಡಿ ಕಟ್ಟಡ ತಲೆ ಎತ್ತಿ ನಿಂತಿದೆ. ಹಲವಾರು ನಿಯಮಗಳನ್ನು ಮೀರಿ ಈ ಬೃಹತ್ ಮಾಲ್‌ಅನ್ನು ಕಟ್ಟಲು ಅನುಮತಿ ನೀಡಲಾಗಿದ್ದು ಈ ಕಟ್ಟಡದ ಸುತ್ತಮುತ್ತಲ ರಸ್ತೆಗಳಲ್ಲಿ ಸಂಚಾರ ದಟ್ಟಣೆ ತೀವ್ರವಾಗಿ ಜನರಿಗೆ ತೊಂದರೆ ಉಂಟುಮಾಡಿರುವುದು ಗಮನಕ್ಕೆ ಬರುತ್ತಿದೆ. ಈ ವಿಚಾರ ಬೆಂಗಳೂರು ಮಹಾನಗರಪಾಲಿಕೆ ಸಭೆಯಲ್ಲಿ ಚರ್ಚೆಗೆ ಬಂದಾಗ ನಗರದ ಮೇಯರ್ ಅವರು ನೀಡಿರುವ ಮಾಹಿತಿ ಇನ್ನೂ ಸ್ವಾರಸ್ಯಕರವಾಗಿದೆ. ಪಾಲಿಕೆಯು ಅನುಮತಿ ನಿರಾಕರಿಸಿದ ಒಟ್ಟು 45 ಕಟ್ಟಡಗಳಿಗೆ ಅಧಿಕಾರಿಗಳು ಅಕ್ರಮವಾಗಿ 'ಸ್ವಾಧೀನತಾ ಪತ್ರ' ನೀಡಿದ್ದಾರಂತೆ.

ಪಾಲಿಕೆ ಸಭೆಯಲ್ಲಿ ಪ್ರಸ್ತಾಪವಾದ ಮತ್ತೊಂದು ವಿಷಯ ಗಮನಿಸಿ.

2009ರ ಫೆಬ್ರವರಿಯಲ್ಲಿ ಬೆಂಗಳೂರಿನ ಯಲಹಂಕದಲ್ಲಿ ನಡೆಯಲಿದ್ದ ವೈಮಾನಿಕ ಪ್ರದರ್ಶನಕ್ಕೆ ಸಂಬಂಧಿಸಿ ಪಾಲಿಕೆಗೆ ಕೆಲವೊಂದು ಜವಾಬ್ದಾರಿ ವಹಿಸಲಾಯಿತಂತೆ. ಈ ಕಾಮಗಾರಿಗಳಿಗೆ ಗರಿಷ್ಟ ವೆಚ್ಚದ ಮಿತಿಯನ್ನು 38.65 ಕೋಟಿಗೆ ಹಣಕಾಸು ಇಲಾಖೆ ನಿಗದಿ ಮಾಡಿತ್ತಂತೆ.

ಾಮಗಾರಿಗಳನ್ನು ನಿಯಮಗಳಿಗೆ ವಿರುದ್ಧವಾಗಿ ಪಾಲಿಕೆಯಲ್ಲಿ ನೋಂದಣಿ ಮಾಡಿಕೊಳ್ಳದ

ಪುಟ 15 ಕ್ಕೆ

ಲಾವ್ ಲಾವ್ ಸಂಸ್ಕೃತಿ

ಹಂಪಿಯ ವಾಸ್ತುಶಿಲ್ಪದಲ್ಲಿ ಏನೇನೋ ವಿಶೇಷಗಳಿವೆ. ಅಲ್ಲಿನ ಕೆಲವೊಂದೊಂದು ಕಲ್ಲು ಕಂಬಗಳು ಒಂದೊಂದು ಬಗೆಯ ನಾದವನ್ನು ಹೊಮ್ಮಿಸುವಂತಹ ವಿಶಿಷ್ಟತೆ ಹೊಂದಿವೆ. ಹಾಗೆಯೇ ನಮ್ಮ ವಿಧಾನ ಸೌಧ, ವಿಕಾಸ ಸೌಧಗಳ ಇತ್ಯಾದಿ ಕಚೇರಿಗಳ ಕಂಬ ಕಂಬಗಳು, ಟೇಬಲ್, ಕುರ್ಚಿಗಳು ತಮ್ಮದೇ ಆದ ಧ್ವನಿಯನ್ನು ಹೊರಡಿಸುವುದಕ್ಕೆ ಬಹಳ (ಕು) ಖ್ಯಾತವಾಗಿವೆ ಎಂಬುದು ನಮಗೆಲ್ಲಾ ಗೊತ್ತಿರುವುದೇ ಆಗಿದೆ.

ಇವೆಲ್ಲಾ ಗೊತ್ತಿರುವುದೇ ಆದರೂ ಯಾವುದಕ್ಕೂ ಒಂದು ನಿರ್ದಿಷ್ಟ ಪ್ರಕರಣದ ಉದಾಹರಣೆ ಇರಲಿ ಅಂತ ಈ ಘಟನಾವಳಿಗಳ ವಿವರ. ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಕಾರ್ಯದರ್ಶಿಗಳಿದ್ದಾರೆ. ಜಂಟಿಕಾರ್ಯದರ್ಶಿ ಗಳೂ ಇದ್ದಾರೆ. ಜಂಟಿ ಕಾರ್ಯದರ್ಶಿಗಳಿಗೆ ಕಾರು, ಆ ಕಾರಿಗೆ ಒಬ್ಬ ಚಾಲಕರು ಇದ್ದಾರೆ. ಹೌದು ಆ ಕಾರು ಚಾಲಕರೀಗ ಲೋಕಾಯುಕ್ತರ 'ಬಂಧನ ಯೋಗ'ದಲ್ಲಿದ್ದಾರೆ. ಇವೆಲ್ಲಾ ನಡೆದಿರುವುದು ಹೀಗೆ.

ನಮ್ಮ ರಾಜ್ಯದ ಮುಖ್ಯಮಂತ್ರಿಗಳು ರಾಜ್ಯದ ಧಾರ್ಮಿಕ ದತ್ತಿ ಆಯುಕ್ತರೂ ಆಗಿದ್ದಾರೆ. ಅವರಿಗೆ ಬಿ.ಜಿ.ನಂದಕುಮಾರ್ ಎಂಬ ಜಂಟಿ ಕಾರ್ಯದರ್ಶಿ ಇದ್ದಾರೆ. ಅವರ ಕಾರು ಚಾಲಕ ಸುಂದರ್ ಎಂಬುವವರಾಗಿದ್ದಾರೆ. ಈ ಸುಂದರ್ ಮತ್ತು ಬೆಂಗಳೂರು ನಗರದ ರಾಜರಾಜೇಶ್ವರಿ ನಗರದ ಸಬ್ ರಿಜಿಸ್ಟ್ರಾರ್ ಪ್ರಭಾಕರ್ ಮತ್ತಿತರ ಕೆಲವರು ಸೇರಿ ನಡೆಸಿರುವ ಘನಕಾರ್ಯ ನೋಡಿ.

ಬೆಂಗಳೂರಿನ ಬನಶಂಕರಿ ದೇವಸ್ಥಾನದ ಅರ್ಚಕರ ಮೇಲೆ ಸುಳ್ಳು ದೂರು ದಾಖಲಿಸಿದ ಈ ಗುಂಪು ಮೂರು ಲಕ್ಷ ರೂಪಾಯಿ ಲಂಚ ಕೊಡದಿದ್ದರೆ ಸೇವೆಯಿಂದ ಅಮಾನತ್ತು ಮಾಡಿಸುವುದಾಗಿ ಅವರಿಗೆ ಬೆದರಿಕೆ ಹಾಕಿ ದುಡ್ಡು ಕೀಳಲು ಯತ್ನಿಸಿದೆ. ಈಗ ತಂಡ ಲೋಕಾಯುಕ್ತರ ಅತಿಥಿಯಾಗಿದೆ ಎಂಬುದು ಸಮಾಧಾನದ ವಿಷಯ. ಇರಲಿ. ರಾಜ್ಯದ ಈ ಅಮೊಘ ಬಿಜೆಪಿ ದರ್ಬಾರ್‌ನಲ್ಲಿ ಈ ಪ್ರಕರಣಕ್ಕೆ ಸ್ಫೂರ್ತಿ ಮೂಲವಾದ, ಪ್ರೇರಕವಾದ ವಿಚಾರಗಳೇನು ಎಂಬ ಬಗ್ಗೆ ತುಂಬಾ ಆಳವಾದ ವಿಶ್ಲೇಷಣೆಗೆ ಹೋಗುವುದು ಬೇಡ. ಬದಲಿಗೆ ಕನ್ನಡದ ಕೆಲವೊಂದು ಗಾದೆ ಮಾತುಗಳನ್ನು ನೆನಪಿಸಿಕೊಂಡು ಬಿಟ್ಟರೆ ಅಷ್ಟೆ ಸಾಕು.

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ..
ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ....
ಹುಚ್ಚನ ಮದುವೆಯಲ್ಲಿ ಉಂಡೋನೆ ಜಾಣ. ○


ಕನ್ನಡ ವಾರಪತ್ರಿಕೆ

ಮತ್ತೆ ಭೋಫೋರ್ಸ್ : ಪ್ರಧಾನಿಗಳ ಹೊಸ ವರ್ಷದ ಆಶಯ ಕ್ಕೆ ಸವಾಲು


ಹೊಸ ವರ್ಷದಲ್ಲಿ ಹೊಸ ಆರಂಭ ಮಾಡೋಣ ಎಂದಿದ್ದಾರೆ ಪ್ರಧಾನ ಮಂತ್ರಿಗಳು. ಹಣದುಬ್ಬರವನ್ನು ತಡೆಯುವ, ನಮ್ಮ ಆಡಳಿತ ಪ್ರಕ್ರಿಯೆಗಳನ್ನು ಸ್ವಚ್ಛಗೊಳಿಸುವ, ರಾಷ್ಟ್ರೀಯ ಭದ್ರತೆಯ ಮತ್ತು ನಮ್ಮ ವಿತರಣೆ ವ್ಯವಸ್ಥೆ 'ಆಮ್ ಆದ್ಮಿ' ಪರವಾಗಿ ಕೆಲಸ ಮಾಡುವಂತೆ ಮಾಡುವ ಸವಾಲುಗಳನ್ನು ಪರಿಣಾಮಕಾರಿಯಾಗಿ, ವಿಶ್ವಾಸಾರ್ಹವಾಗಿ ಎದುರಿಸುವ ಪ್ರಯತ್ನಗಳನ್ನು ದ್ವಿಗುಣಗೊಳಿಸುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಹತಾಶೆ, ಸಿನಿಕತನ ಬೇಡ, ಪ್ರಜಾಪ್ರಭುತ್ವದ ಶಕ್ತಿಯಲ್ಲಿ, ದಾರಿಯನ್ನು ಸರಿಪಡಿಸಿಕೊಳ್ಳುವ ಸಾಮರ್ಥ್ಯದಲ್ಲಿ ನಂಬಿಕೆಯಿಡಿ ಎಂದು ಜನತೆಗೆ ಹೇಳಿದ್ದಾರೆ.

ಹೀಗೆ ಹೇಳುತ್ತಿರುವಂತೆ ಆಹಾರ ಹಣದುಬ್ಬರ ಶೇ.14.44 ಕ್ಕೆ ಏರಿರುವ ಸುದ್ದಿ, ಬೊಫೋರ್ಸ್‌ನಲ್ಲಿ ನಿಜವಾಗಿಯೂ ಕಮಿಶನ್(ಲಂಚ) ಇತ್ತು, ಅದರ ಮೇಲೆ ಆದಾಯ ತೆರಿಗೆ ಸಲ್ಲಬೇಕಾಗಿದೆ ಎಂದು ಆದಾಯ ತೆರಿಗೆ ನ್ಯಾಯಮಂಡಳಿ ಹೇಳಿರುವ ಸುದ್ದಿ ಬಂದಿದೆ. ಇವಕ್ಕೆ ಯುಪಿಎ-2 ಸರಕಾರದ ಸ್ಪಂದನೆ ಹೊಸ ವಿಶ್ವಾಸವನ್ನು ಮೂಡಿಸುವಂತೇನೂ ಇಲ್ಲ.

ಯುಪಿಎ-2 ಸರಕಾರದ ಹಗರಣಗಳ ವರ್ಷ ಕೊನೆಗೊಳ್ಳುತ್ತಿದ್ದಂತೆ 23 ವರ್ಷಗಳ ಹಿಂದೆ ನವ-ಉದಾರವಾದದ ಹಗರಣಗಳ ಪರ್ವವನ್ನು ಉದ್ಘಾಟಿಸಿದ ಬೊಫೋರ್ಸ್ ಹಗರಣದ ಭೂತ ಮತ್ತೆ ಯುಪಿಎ-2 ಸರಕಾರದ ನೇತೃತ್ವದಲ್ಲಿರುವ



ಕಾಂಗ್ರೆಸ್ ಎದುರು ನಿಂತಿದೆ. ವಿನ್ ಚಡ್ಡಾ ಮತ್ತು ಇಟಾಲಿಯನ್ ವ್ಯಾಪಾರಿ ಒಟ್ಟೇವಿಯೊ ಕ್ವಟ್ರೋಚಿ ಬೊಫೋರ್ಸ್ ತೋಪು ವ್ಯವಹಾರದಲ್ಲಿ 41.2 ಕೋಟಿ ರೂ. ಪಡೆದಿದ್ದಾರೆ, ಅದಕ್ಕೆ ಆದಾಯ ತೆರಿಗೆ ಕಟ್ಟಬೇಕು ಎಂದು ಆದಾಯ ತೆರಿಗೆ ಮೇಲ್ಮನವಿ



ಕೃಪೆ: ದಿ ಹಿಂದೂ

ನ್ಯಾಯಮಂಡಲಿ(ಐಟಿಎಟಿ) ತೀರ್ಪಿತ್ತಿದೆ. ಭಾರತದ್ದು ಒಂದು ಸಾರ್ವಭೌಮ ಪ್ರಭುತ್ವ, ಅದರ ತೆರಿಗೆ ಕಾನೂನುಗಳೊಂದಿಗೆ ಮನಬಂದಂತೆ ವರ್ತಿಸಬಹುದು ಎಂಬ ಭಾವನೆ ಉಂಟಾಗದಿರಲು ಇದು ಆವಶ್ಯಕ ಎಂದು ಅದು ಹೇಳಿದೆ. ಇಂತಹ ವ್ಯವಹಾರದಲ್ಲಿ ಯಾವ ಕಮಿಶನೂ ಇರುವುದಿಲ್ಲ ಎಂಬುದು ಸರಕಾರದ ಧೋರಣೆಯಾದ್ದರಿಂದ ಹಗರಣದ ಪ್ರಶ್ನೆಯೇ ಇಲ್ಲ ಎಂಬುದು ಕಾಂಗ್ರೆಸಿನ ನಿಲುವಾಗಿತ್ತು. ಆದಾಯ ತೆರಿಗೆ ಇಲಾಖೆಯೇ ಈ ಕಮಿಶನ್ ಮೊತ್ತವನ್ನೂ ಸೂಚಿಸಿರುವುದು ಕಾಂಗ್ರೆಸಿಗೆ ಪೇಚು ತಂದಿದೆ.

ಕಾಕತಾಳೀಯವೋ ಏನೋ, ಸಿಬಿಐ ಈ ಕೇಸನ್ನು ಮುಚ್ಚುವಂತೆ ಕೋರಿದ ಅರ್ಜಿ ದಿಲ್ಲಿಯ ಮುಖ್ಯ ಮೆಟ್ರೊಪೊಲಿಟನ್ ಮ್ಯಾಜಿಸ್ಟ್ರೇಟರ ಮುಂದೆ ಬಂದಿದೆ. ಇದರ ವಿಚಾರಣೆಯ ಸಂದರ್ಭದಲ್ಲಿ ಆದಾಯ ತೆರಿಗೆ ಆದೇಶದ ಹಿನ್ನೆಲೆಯಲ್ಲಿ ಸರಕಾರದಿಂದ ತನಗೇನೂ ಹೊಸ ಸೂಚನೆ ಬಂದಿಲ್ಲ ಎಂದು ಸಿಬಿಐ ಹೇಳಿದೆ.

ಹಗರಣಕೋರರು ಶಿಕ್ಷೆಗೊಳಗಾಗದೆ ತಪ್ಪಿಸಿಕೊಳ್ಳುವಂತೆ ಈ ಕೇಸನ್ನು ನಿರ್ವಹಿಸಿರುವ ರೀತಿ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರಕ್ಕೆ ತಡೆಯೇ ಇಲ್ಲ ಎಂಬುದನ್ನು ಮತ್ತೊಮ್ಮೆ ನೆನಪಿಸುತ್ತಿದೆ ಎಂದು ಈ ಕುರಿತು ಟಿಪ್ಪಣಿ ಮಾಡಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಈಗ ಬಯಲಾಗಿರುವ ದೊಡ್ಡ ಪ್ರಮಾಣದ ಹಗರಣಗಳ ತನಿಖೆ ನಡೆಯುತ್ತದೆ, ತಪ್ಪಿತಸ್ಥರ ಮೇಲೆ ಕ್ರಮಕೈಗೊಳ್ಳಲಾಗುತ್ತದೆ ಎಂದು ಜನರಲ್ಲಿ ತುಸುವಾದರೂ ವಿಶ್ವಾಸ ಮೂಡಬೇಕಾದರೆ ಬೊಫೋರ್ಸ್ ವಿಚಾರಣೆಯನ್ನು ಮುಂದುವರೆಸಬೇಕು ಎಂದು ಅದು ಅಭಿಪ್ರಾಯ ಪಟ್ಟಿದೆ.

ಪ್ರಧಾನಿಗಳ ಹೊಸ ವರ್ಷದ ಸಂದೇಶದಂತೆ ಜನತೆ ಹತಾಶ, ಸಿನಿಕ ಭಾವ ತಳೆಯದಿರಬೇಕಾದರೆ, ಆ ಸಂದೇಶ ಆರಂಭದಲ್ಲೇ ಅರ್ಥಹೀನವಾಗದಿರಬೇಕಾದರೆ ಇಂತಹ ಕ್ರಮವನ್ನು ಯುಪಿಎ-2 ಸರಕಾರದಿಂದ ಎಲ್ಲಾ ಪ್ರಜಾಪ್ರಭುತ್ವವಾದಿಗಳೂ ನಿರೀಕ್ಷಿಸುತ್ತಾರೆ.

★ ★ ★

ಮತ್ತದೇ ಅಮೆರಿಕನ್ ವಿದೇಶಾಂಗ ನೀತಿಗೆ ಶರಣಾಗತಿ

2010 ಕೊನೆಗೊಳ್ಳುತ್ತಿದ್ದಂತೆ ಯುಪಿಎ-2 ಸರಕಾರ ಅಮೆರಿಕಾದ ವಿದೇಶಾಂಗ ಧೋರಣೆಗೆ ಮತ್ತೊಮ್ಮೆ ಶರಣಾಗಿ ಅಮೆರಿಕನ್ ದೊರೆಗಳಿಂದ ಸೈ ಎನಿಸಿಕೊಂಡಿದೆ. ತಾನು ಹೇಳಿದಂತೆ ಕೇಳಲು ನಿರಾಕರಿಸುವ ಇರಾನಿನೊಂದಿಗೆ ವ್ಯವಹಾರ ನಡೆಸುವ ಎಲ್ಲ ಕಂಪನಿಗಳ ಮೇಲೆ ನಿಷೇಧ ಹಾಕಿರುವ ಅಮೆರಿಕಾದ ಆಳರಸರು ಇರಾನಿನೊಂದಿಗೆ ತೈಲ ವ್ಯವಹಾರ ನಡೆಸುತ್ತಿರುವ ಭಾರತೀಯ ಕಂಪನಿಗಳು ಹಣ ಪಾವತಿಗೆ ಬಳಸುತ್ತಿದ್ದ ಏಶ್ಯನ್ ಕ್ಲಿಯರಿಂಗ್ ಯೂನಿಯನ್(ಎಸಿಯು)ನ್ನು ಮುಚ್ಚಬೇಕು ಎಂದು ಭಾರತ ಸರಕಾರದ ಮೇಲೆ ಒತ್ತಡ ಹಾಕುತ್ತಿದ್ದರು. ಯುಪಿಎ-2 ಸರಕಾರ ಅದಕ್ಕೆ ತಲೆ ಬಾಗಿದೆ. ಭಾರತೀಯ ರಿಝರ್ವ್ ಬ್ಯಾಂಕ್ ಮೂಲಕ ಅದನ್ನು ಮುಚ್ಚಿದೆ. ಅಮೆರಿಕನ್ ಆಡಳಿತದ ವಕ್ತಾರರು ಇದೊಂದು ಮಹತ್ವದ ಕ್ರಮ ಎಂದು ಟಿಪ್ಪಣಿ ಮಾಡಿದ್ದಾರೆ. ಆದರೆ ಇದರ ದುಷ್ಪರಿಣಾಮ ಇರಾನಿನೊಂದಿಗೆ ಕಚ್ಚಾತೈಲ ವ್ಯಾಪಾರದ ಮೇಲೆ ಬೀಳಲಿದೆ. ಭಾರತ ತನ್ನ ಕಚ್ಚಾ ತೈಲ ಅಗತ್ಯಗಳಲ್ಲಿ 16-17ಶೇ.ವನ್ನು ಇರಾನಿನಿಂದ ಪಡೆಯುತ್ತಿದೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ವಿಶ್ವ ಸಂಸ್ಥೆ ಅಮೆರಿಕಾದ ಒತ್ತಡದಿಂದ ಇರಾನಿನ ಮೇಲೆ ಹಾಕಿರುವ ನಿರ್ಬಂಧಗಳಲ್ಲಿ ಕೂಡ ಇಂಧನ ವಲಯದ ಆಮದುಗಳನ್ನು ಹೊರತು ಪಡಿಸಲಾಗಿದೆ. ಆದ್ದರಿಂದ ವಿಶ್ವ ಸಂಸ್ಥೆಯ ಸದಸ್ಯ ದೇಶವಾಗಿ ಭಾರತ ಇಂತಹ ಕ್ರಮವನ್ನು ಕೈಗೊಳ್ಳಬೇಕಾದ ಅಗತ್ಯವೇನೂ ಇರಲಿಲ್ಲ.

ಪುಟ 15 ಕ್ಕೆ

ಅರ್ಥ ತಿಳಿಯದೆಯೇ ತೃಣಮೂಲಿ ಭಾಷೆ ಬಳಸಿದ ಯುಪಿಎ ಗ್ರಹಮಂತ್ರಿ

ಪಶ್ಚಿಮ ಬಂಗಾಲದಲ್ಲಿ ವಿಧಾನ ಸಭಾ ಚುನಾವಣೆ ಹತ್ತಿರವಾಗುತ್ತಿರುವಂತೆ ಯುಪಿಎ-2 ಸರಕಾರ ತನ್ನ ಅಧಿಕಾರದ ದುರುಪಯೋಗದ ಮೂಲಕ ಅದಕ್ಕೆ ತಯಾರಿ ನಡೆಸುತ್ತಿರುವಂತೆ ಕಾಣುತ್ತಿದೆ. ಹೇಗಾದರೂ ಮಾಡಿ ರಾಜ್ಯದಲ್ಲಿ ಅಧಿಕಾರ ಗಿಟ್ಟಿಸುವುದೇ ಏಕೈಕ ಗುರಿಯಾಗಿರುವ ತನ್ನ ಪಾಲುದಾರ ಪಕ್ಷ ತೃಣಮೂಲ ಕಾಂಗ್ರೆಸಿನ ತಾಳಕ್ಕೆ ಕುಣಿಯುತ್ತಾ ನಗೆಪಾಟಲಾಗುತ್ತಿರುವಂತೆ ಕಾಣುತ್ತಿದೆ. ಕೇಂದ್ರ ಗ್ರಹಮಂತ್ರಿಗಳು ಡಿಸೆಂಬರ್ 21-22 ರಂದು ಮುಖ್ಯಮಂತ್ರಿಗಳಿಗೆ ಒಂದು ಗುಪ್ತ ಪತ್ರ ಬರೆಯುತ್ತಾರೆ. ಆದರೆ ಅದರಲ್ಲಿರುವ 'ಗುಪ್ತ' ವಿಷಯವನ್ನು ಡಿಸೆಂಬರ್ 24ರಂದು ಮಾಧ್ಯಮಗಳಿಗೆ ತಿಳಿಸಲಾಗುತ್ತದೆ. 25ರಂದು ಆ 'ಗುಪ್ತ ಪತ್ರ' ಜಗಜ್ಜಾಹೀರಾಗುತ್ತದೆ, ಅದಾದ ಎರಡು ದಿನಗಳ ನಂತರ ಯಾರಿಗೆ ಆ ಪತ್ರ ಬರೆಯಲಾಗಿತ್ತೋ ಅವರಿಗೆ, ಮುಖ್ಯಮಂತ್ರಿಗಳಿಗೆ ಅದು ತಲುಪುತ್ತದೆ. ಅದರಲ್ಲಿರುವ ಭಾಷೆ ಆ 'ಗುಪ್ತ' ಪತ್ರವನ್ನು ಯಾರಿಗಾಗಿ, ಯಾಕೆ ಬರೆಯಲಾಗಿದೆ, ಶೀಘ್ರವಾಗಿರಲಿಲ್ಲ ಯಾಕೆ ಎಂದು ಸ್ಪಷ್ಟಪಡಿಸುತ್ತದೆ. ಅದರೊಂದಿಗೇ ಯುಪಿಎ-2 ಸರಕಾರದ ವಿಚಿತ್ರ ಸಂಪರ್ಕ ಮಾದರಿ ಬಯಲಾಗುತ್ತದೆ.

ಕೇಂದ್ರ ಗ್ರಹಮಂತ್ರಿಗಳು ಮತ್ತು ಒಂದು ರಾಜ್ಯದ ಮುಖ್ಯಮಂತ್ರಿಯೊಡನೆ ಸಂಪರ್ಕದ ವಿಚಿತ್ರ ಮಾದರಿಯಿದು, ಅವರು ತನ್ನ ಈ ಪಕ್ಷಪಾತಪೂರ್ಣ ನಿಲುವಿಗೆ ವಿವರಣೆ ಕೊಡಬೇಕಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ,

'ಗುಪ್ತ ಪತ್ರ' ಕೈಸೇರಿದ ಮರುದಿನವೆ ಅದಕ್ಕೆ ಉತ್ತರಿಸಿದ ಪಶ್ಚಿಮ ಬಂಗಾಲ ಮುಖ್ಯಮಂತ್ರಿಗಳು ಮಾವೋವಾದಿಗಳ ಚಟುವಟಿಕೆಗಳ ಅರಿವಿರುವ ಕೇಂದ್ರ ಗ್ರಹಮಂತ್ರಿಗಳು ಬೇರೆ ರಾಜ್ಯಗಳೊಂದಿಗೆ ಗಡಿ ಹೊಂದಿರುವ ಮೂರು ಜಿಲ್ಲೆಗಳ 28 ಪೋಲೀಸ್ ಠಾಣೆಗಳ ಪ್ರದೇಶದಲ್ಲಿನ ಪರಿಸ್ಥಿತಿಯ ಬಗ್ಗೆ ಮಾಡಿರುವ ಟಿಪ್ಪಣಿ ಆಶ್ಚರ್ಯಕರವಾದದ್ದು ಎಂದು ಹೇಳಿದ್ದಾರೆ. ಗ್ರಹಮಂತ್ರಿಗಳೂ ಸೇರಿದಂತೆ ಯುಪಿಎ ಸರಕಾರದ ಎಲ್ಲ ಹಿರಿಯ ಮಂತ್ರಿಗಳೂ ಮಾವೋವಾದಿ ಹಿಂಸಾಚಾರ ದೇಶದ ಅತ್ಯಂತ ದೊಡ್ಡ ಆಂತರಿಕ ಸವಾಲು ಎಂದಿದ್ದಾರೆ. ಪಶ್ಚಿಮ ಬಂಗಾಲದ ಈ ಮೂರು ಜಿಲ್ಲೆಗಳಲ್ಲಿ ಎಡಪಕ್ಷಗಳ ಕಾರ್ಯಕರ್ತರು ಈ ಸವಾಲನ್ನು ಜನಗಳನ್ನು ಅಣಿನೆರೆಸುವ ಮೂಲಕ ಎದುರಿಸಲು ನೆರವಾಗುತ್ತಿದ್ದಾರೆ. ಅಂತವರನ್ನೇ ಕೇಂದ್ರ ಗ್ರಹಮಂತ್ರಿಗಳು ಈ ಸಮಸ್ಯೆಗೆ ಕಾರಣ ಎನ್ನುವುದು, ತೃಣಮೂಲಿಗಳು ಸೃಷ್ಟಿಸಿದ 'ಹರ್ಮದ್' ಎಂಬ ಕೆಟ್ಟ ಪದವನ್ನು ಅದರ ನಿಜವಾದ ಅರ್ಥ ತಿಳಿಯದೆಯೇ ಬಳಸಿ ದೂಷಿಸಿರುವುದು ದುರದೃಷ್ಟಕರ ಎಂದು ಮುಖ್ಯಮಂತ್ರಿಗಳು ತಮ್ಮ ಪತ್ರದಲ್ಲಿ ಖೇದ ವ್ಯಕ್ತಪಡಿಸಿದ್ದಾರೆ.

ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಲು ಎಲ್ಲಾ ರಾಜಕೀಯ ಪಕ್ಷಗಳ ಸಹಕಾರದೊಂದಿಗೆ ತಾವು ಶ್ರಮಿಸುತ್ತಿರುವುದನ್ನು ಗ್ರಹಮಂತ್ರಿಗಳಿಗೆ ತಿಳಿಸಿದ ಮುಖ್ಯಮಂತ್ರಿಗಳು, ಇದರಲ್ಲಿ ತೃಣಮೂಲ ಕಾಂಗ್ರೆಸ್ ಸಹಕರಿಸಲು ನಿರಾಕರಿಸುತ್ತಿರುವದನ್ನು ಅವರ ಗಮನಕ್ಕೆ ತಂದಿದ್ದಾರೆ.

ಈ ಹಿಂದೆ ತೃಣಮೂಲ ಕಾಂಗ್ರೆಸಿಗರು ಸ್ವತಃ ಯುಪಿಎ ಸರಕಾರವೇ ಅತಿ ದೊಡ್ಡ ಬೆದರಿಕೆ ಎಂದು ವರ್ಣಿಸುವ ಮಾವೋವಾದಿಗಳೊಂದಿಗೆ ಗುಪ್ತ ಚಟುವಟಿಕೆ ನಡೆಸುತ್ತಿದ್ದವರು ಈಗ ಬಹಿರಂಗವಾಗಿಯೇ ನಡೆಸುತ್ತಿದ್ದಾರೆ. ತೃಣಮೂಲ ಕಾಂಗ್ರೆಸಿನ ಸಂಸದ, ಕಬೀರ್ ಸುಮನ್ ಅವರ ಈ ವಾರ ಪ್ರಕಟವಾದ ಪುಸ್ತಕದಲ್ಲಿ ನಂದಿಗ್ರಾಮ ಚಳುವಳಿಯ ಸಮಯದಲ್ಲಿ ಕೊಲ್ಕತದಲ್ಲಿರುವ ತೃಣಮೂಲ ಭವನದಲ್ಲಿ ಮಾವೋವಾದಿಗಳು ಸಭೆ ನಡೆಸಿದರು ಎಂದು ಹೇಳಲಾಗಿದೆ. ನಂದಿಗ್ರಾಮದ 'ಯುದ್ಧ ವಲಯ'ದಲ್ಲಿ ಶಿಶಿರ್ ಅಧಿಕಾರಿ ಮತ್ತು ಪಾರ್ಥ ಚಟರ್ಜಿ ಎಂಬಿಬ್ಬರು ತೃಣಮೂಲಿ ಮುಖಂಡರ ಕಾವಲಿಗೆ 'ಸಶಸ್ತ್ರ ಕಾರ್ಯಕರ್ತ'ರಿದ್ದರು, ಈ 'ಮಹಾನ್' ಮಾವೋವಾದಿಗಳಿಲ್ಲದಿದ್ದರೆ ಸಿಪಿಐ(ಎಂ)ನ್ನು ಎದುರಿಸಲಾಗುತ್ತಿರಲಿಲ್ಲ ಎಂದು ಈ ಪುಸ್ತಕದಲ್ಲಿ ಹೇಳಲಾಗಿದೆಯಂತೆ.

ಈ ಪುಸ್ತಕ ಪ್ರಕಟವಾದ ಮರುದಿನವೇ 'ಮಾವೋವಾದಿ' ಮುಖಂಡ ಬಿಕ್ರಂ ಸಹಿ ಹಾಕಿದ 'ಮಮತಾಬ್ಯಾನರ್ಜಿ ಮತ್ತು ಅವರ ಪಕ್ಷದೊಂದಿಗೆ ಪರಸ್ಪರ ತಿಳುವಳಿಕೆ, ಬೆಂಬಲ ಮತ್ತು ಜಂಟಿ ಪ್ರತಿರೋಧ'ವನ್ನು ಬಹಿರಂಗವಾಗಿ ಸಾರುವ ಕೈಬರಹದ ಸಂದೇಶ ಯುಪಿಎ ರೈಲ್ವೇ ಮಂತ್ರಿಯೊಂದಿಗೆ, ಗ್ರಹಮಂತ್ರಿಗೂ ಪೇಚು ತಂದಿವೆ ಎನ್ನಲಾಗಿದೆ. ○

ಪಿರಿಯಾಪಟ್ಟಣ : ದುರಹಂಕಾರಿ ಸಿಡಿಪಿಓಗೆ ಅಂಗನವಾಡಿ ನೌಕರರ ಧಿಕ್ಕಾರ

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯಡಿ ಮದ್ದಾನೆಸ್ವಾಮಿ ಎಂಬ ಸಿಡಿಪಿಓಗೆ ತಾಲ್ಲೂಕಿನಲ್ಲಿ 7 ತಿಂಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಈತ ಇಲಾಖೆಗೆ ಅನರ್ಹ ಅಧಿಕಾರಿಯಾಗಿದ್ದು, ಕೇಂದ್ರಕ್ಕೆ ಭೇಟಿ ನೀಡಿದಾಗ ಅಂಗನವಾಡಿ ಕಾರ್ಯಕರ್ತರನ್ನು ಗ್ರಾಮದ ಜನರ ಎದುರೆ ನಿಂದಿಸುವುದು, ನ್ಯಾಯ ಕೇಳಿದರೆ "ಬಾಯಿ ಮುಚ್ಕೊಂಡು ಕೂತ್ಕೋಳೇ" ಅಂತ ಏಕವಚನದಲ್ಲಿ ನಿಂದಿಸುವುದು. ಸಭೆಗೆ ಹೋದಾಗ.. "ನಿಮ್ಮನ್ನು ವರ್ಕರ್ ಆಗಿ ಯಾವ ಬೋ... ಮಗ ಆಯ್ಕೆ ಮಾಡಿದ.." ಎನ್ನುವುದು. ಕಾರ್ಯಕರ್ತೆಯರು ವಿರೋಧಿಸಿದರೆ "ಮುಚ್ಕೊಂಡು ಕೂತ್ಕೊ, ನಿನ್ನ ಬಂಡವಾಳ ಗೊತ್ತು. ಯೋಗ್ಯತೆ ಗೊತ್ತು"..... ಎನ್ನುವುದು. ಇದನ್ನು ಅಂಗನವಾಡಿ ಸಂಘಟನೆಯ ಪದಾಧಿಕಾರಿಗಳಾದ ಕಾವೇರಮ್ಮ ರಾಜಮಣಿ ಕೇಳಲು ಹೋದರೆ 'ಅಪಾಯಿಂಟ್‌ಮೆಂಟ್ ಪಡೆದು ಬಾ' ಎಂದಿದ್ದಲ್ಲದೇ "ಇವರನ್ನು ಕಛೇರಿಯಿಂದ ಆಚೆಗೆ ದಬ್ಬಿ" ಎಂದು ಕಿರುಚಿದ್ದಾನೆ. ಕಿರುಕುಳ ತಾಳದ ನೌಕರರು ಜಿಲ್ಲಾ ಸಂಘಟನೆ ಗಮನಕ್ಕೆ ವಿಷಯ ತರಲಾಗಿ ಜಿಲ್ಲಾ ಕಾರ್ಯದರ್ಶಿ ಸುನಂದ ಸಿಡಿಪಿಓ ಅವರನ್ನು ವಿಚಾರಿಸಿದರು. ಅವರಿಗೆ ಸಹ "ನೀನು ನನ್ನ ತಾಲ್ಲೂಕಿನಲ್ಲಿ ಸಭೆ ನಡೆಸಲು ಯಾರು, ಅವರ ಪರ ಮಾತಾಡಲು ನೀವು ಯಾರು" ಎಂದು "ನನ್ನ ತಾಲ್ಲೂಕು; ನಾನು ಏನಾದರೂ ಮಾಡಿಕೊಳ್ಳುವೆ" ಎಂದೂ 13-11-2010 ರಂದು ಜಗಳ ಮಾಡಿದ್ದ. ಹೋರಾಟವೇ ಇದಕ್ಕೆಲ್ಲಾ ಸರಿಯಾದ ಮಾರ್ಗ ಎಂದು ಡಿಸೆಂಬರ್ 8ರಂದು ಪಿರಿಯಾ ಪಟ್ಟಣ ಸಿಡಿಪಿಓ ಕಛೇರಿ ಎದುರು ಧರಣಿ ನಡೆಸಲಾಯ್ತು. ತಾಲ್ಲೂಕಿನ 300 ಕಾರ್ಯಕರ್ತೆಯರು ಕಛೇರಿ ಮುಂದೆ ಮಹಿಳಾ ವಿರೋಧಿ ಸಿಡಿಪಿಓಗೆ ಧಿಕ್ಕಾರ ಕೂಗಲಾರಂಭಿಸಿದರು. 3 ಗಂಟೆ ಆದರೂ ಯಾವ ಅಧಿಕಾರಿ ಮನವಿ ಸ್ವೀಕರಿಸಲು ಬಾರದೆ ಇದ್ದಾಗ ಕಛೇರಿಗೆ ನುಗ್ಗಿ ಅಧಿಕಾರಿಗಳಿಗೆ ದಿಗ್ಬಂಧನ ಹಾಕಲು ಕಾರ್ಯಕರ್ತೆಯರು ಮುಂದಾದರು. ನಂತರ ಪೋಲೀಸರು ಮಧ್ಯ ಪ್ರವೇಶಿಸಿ "ತಹಶೀಲ್ದಾರ್ ಚುನಾವಣೆ ಸಭೆಗೆ ಹೋಗಿದ್ದಾರೆ, ಅವರು ಬರಲು ಸಾಧ್ಯವಿಲ್ಲ. ದಯಮಾಡಿ ನಿಮ್ಮ5 ಜನ ಸಭೆ ಸ್ಥಳಕ್ಕೆ ಕರೆದೊಯ್ಯುತ್ತೇವೆ. ಬನ್ನಿ" ಎಂದರು. ಆದರೆ ಇದಕ್ಕೆ ಜಗ್ಗದ ನೌಕರರು ಚುನಾವಣೆ ಕೆಲಸ ಹಚ್ಚಲು ಬೇಕಾದರೆ ತಹಶೀಲ್ದಾರ್ ಬರ್ತಾರೆ, ನಮ್ಮ ಮನವಿ ಸ್ವೀಕರಿಸಲು ಸಮಯ ಇಲ್ಲವೇ ಎಂದು ತಹಶೀಲ್ದಾರ್‌ರವರು ಬರಬೇಕು ಎಂದು ಒತ್ತಾಯ ಮಾಡಿದ್ದರು. ನಂತರ ಅವರ ಕಛೇರಿಯಿಂದ ಶಿರಸ್ತೆದಾರ್‌ರವರನ್ನು ಕಳಿಸಿಕೊಟ್ಟರು. ಅವರಿಗೂ ಮನವಿ ಕೊಡಲಿಲ್ಲ. ನಂತರ ಕ್ಷೇತ್ರದ ಶಾಸಕರು ಹೋರಾಟದ ಸ್ಥಳಕ್ಕೆ ಬಂದು "ತಹಶೀಲ್ದಾರ್‌ರವರು ಬರಲು ಸಾಧ್ಯವಾಗುತ್ತಿಲ್ಲ. ತಾಲ್ಲೂಕಿನ ಅಧಿಕಾರಿಗಳು ಮತ್ತು ಶಾಸಕನಾದ ನಾನು ನಿಮ್ಮ ಪರ ಇದ್ದೇವೆ. ಅವರಿಗೆ ತಕ್ಕ ಪಾಠ ಕಲಿಸೋಣ" ಎಂದು ಹೋರಾಟ ನಿರತ ಕಾರ್ಯಕರ್ತೆಯರನ್ನುದ್ದೇಶಿಸಿ ಮಾತನಾಡಿ ಮನವಿ ಸ್ವೀಕರಿಸಿದರು. ನಂತರ ಜಿಲ್ಲಾ ಉಪನಿರ್ದೇಶಕರಿಗೆ ಎಸಿಡಿಪಿಓ ಮುಖಾಂತರ ಮನವಿ ಸಲ್ಲಿಸಲಾಯಿತು. ಜಿಲ್ಲೆಯ ಎಲ್ಲಾ ಶಾಸಕರು, ಡಿ.ಸಿ., ಸಿ.ಎಸ್. ಎಲ್ಲರಿಗೂ ಮನವಿ ನೀಡಲಾಗಿದೆ.

ಈತ ಮಹಿಳಾ ಇಲಾಖೆಯಲ್ಲಿ ಕುಟುಂಬ ದೌರ್ಜನ್ಯ, ಮಹಿಳಾ ದೌರ್ಜನ್ಯ ಅಧಿಕಾರಿ ಆಗಿದ್ದು, ಅಂಗನವಾಡಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ಈತ ಇಲಾಖೆಗೆ ಬೇಡ ಎಂದು, ಸಿಡಿಪಿಓ ಆಗಿ ಈತನನ್ನು ಮುಂದುವರೆಸಿದರೆ ಡಿ.ಸಿ.ಕಛೇರಿ ಎದುರು ಧರಣಿ ನಡೆಸುವುದಾಗಿ ಎಚ್ಚರಿಸಲಾಯಿತು. ಹೋರಾಟದಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಹಿಂದೆ ಈತ ಯಳಂದೂರು ತಾಲ್ಲೂಕಿನಲ್ಲಿ ಸಿಡಿಪಿಓ ಆಗಿದ್ದಾಗಲೂ ಕೂಡ ಈ ರೀತಿ ವರ್ತನೆಯಿಂದ ಅಲ್ಲಿಯೂ ಛೀಮಾರಿ ಹಾಕಿಸಿಕೊಂಡು ಪ್ರತಿಭಟನೆ ಎದುರಿಸಿದ್ದಾನೆ ಎಂಬ ವರದಿಗಳಿವೆ. ಪರಿಸ್ಥಿತಿ ಬದಲಾಗದಿದ್ದರೆ ನೌಕರರು ಆತನಿಗೆ ಸರಿಯಾದ ಪಾಠ ಕಲಿಸುವುದು ನಿಶ್ಚಿತ.

ವರದಿ : ಸುನಂದ.ಹೆಚ್.ಎಸ್. ಮೈಸೂರು

ಅತಂತ್ರ ಸ್ಥಿತಿಯಲ್ಲಿ ಆದಿವಾಸಿಗಳ ಹಾಡಿ

ಗೋಣಿಕೊಪ್ಪ ಮತ್ತು ತಿತಿಮತಿ ಮಧ್ಯದಲ್ಲಿರುವಂತೆ ಒಂದು ಕಾಲೋನಿ ದೇವರಪುರದಲ್ಲಿ ದೇವರಕಾಡು ಎನ್ನುವಂತಹ ಕಾಲೋನಿ ಇದೆ. ಇದು ವಿರಾಜಪೇಟೆ ತಾಲ್ಲೂಕಿಗೆ ಸೇರುತ್ತೆ. ಇಲ್ಲಿ ಸುಮಾರು 185 ಕುಟುಂಬಗಳಷ್ಟು ಆದಿವಾಸಿಗಳಿದ್ದಾರೆ. ಇವರು ಸುಮಾರು 30-40ವರ್ಷಗಳಿಂದ ಇಲ್ಲಿ ವಾಸವಾಗಿದ್ದಾರೆ. ಮತ್ತು ಇವರಿಗೆ ಪಂಚಾಯಿತಿನಿಂದ ನೀರಿನ ಟ್ಯಾಂಕುಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಮತ್ತು ಒಂದು ಅಂಗನವಾಡಿಯು ಇದೆ. ರಸ್ತೆಯು ಇದೆ. ಕೆಲವು ಜನರಿಗೆ ಪಂಚಾಯಿತಿ ಮುಖಾಂತರ ಮನೆ ಕೂಡ ಕಟ್ಟಿಸಿಕೊಟ್ಟಿದ್ದಾರೆ.

ಇತ್ತೀಚಿಗೆ ಇವರಿಗೆ ಯಾವುದೇ ರೀತಿಯ ಸೌಲಭ್ಯಗಳನ್ನು ಕೇಳಿ ಪಂಚಾಯಿತಿಗೆ ಹೋದರೆ, 'ಯಾವುದು ನಿಮಗೆ ಸಿಕ್ಕಲ್ಲ. ನಿಮ್ಮ ಕಾಲೋನಿಯ ಜಾಗ ದೇವರಕಾಡು ಅಂತ ಇದೆ. ನೀವು ಈ ಕಾಲೋನಿ ಬಿಟ್ಟು ಹೋಗುವಂತೆ ಇದೆ. ಅದರಿಂದ ನಿಮಗೆ ಯಾವುದೇ ಸೌಲಭ್ಯ ಸಿಕ್ಕಲ್ಲ' ಅಂತ ಹೇಳುತ್ತಾರಂತೆ. ಪಂಚಾಯಿತಿಯವರು. ಈ ಜನ ಸರಿಯಾಗಿ ಒಗ್ಗಟ್ಟಿನಲ್ಲಿ ಇಲ್ಲ. ಅವರವರ ಪಾಡಿಗೆ ಅವರು ಇರುತ್ತಾರೆ. ಇದರಿಂದ ಬೇರೆಯವರಿಗೆ ಇವರ ಮಧ್ಯೆ ಜಗಳ ತಂದಿಡಲು ತುಂಬ ಸುಲಭವಾಗಿದೆ. ಇಲ್ಲಿಗೆ ಮಾತ್ರ ಕಾಡು ಸಂಸ್ಥೆಯವರು (ಅರಣ್ಯ ಇಲಾಖೆ) ಬಂದಿಲ್ಲ. ಬಾಕಿ ಇರುವಂತೆ ಹಾಡಿಗಳಿಗೆ ಕಾಡು ಸಂಸ್ಥೆಯವರು ಬೇಲಿ ಹಾಕಿದ್ದಾರೆ.

ಇವರಲ್ಲಿ ಸುಮಾರು ಪ್ರಶ್ನೆಗಳಿವೆ. ಆದರೆ, ಅದು ಅವರಿಗೆ ದೊಡ್ಡದಲ್ಲ. ಅವರಿಗೆ ಇದು ಒಂದೇ ಬೆಟ್ಟದಂತಹ ಪ್ರಶ್ನೆಯಾಗಿದೆ. ಅದರಲ್ಲಿ ಮೂರು ವಿಭಾಗದ ಆದಿವಾಸಿಗಳಿದ್ದಾರೆ. ಒಂದು ಯರವ ಸಮುದಾಯದವರು ಮತ್ತು ಜೇನು ಕುರುಬರು ಮತ್ತು ಬೆಟ್ಟ ಕುರುಬರು ಇದ್ದಾರೆ. ಇವರ ಬದುಕಿನ ಆಸರೆ ಉಳಿಸಲು ಗಮನ ಅಗತ್ಯವಾಗಿದೆ.

ಯುಪಿಎ ದರ್ಬಾರ್....

ಪುಟ 13 ರಿಂದ

ಇದು ಸ್ಪಷ್ಟವಾಗಿ ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾದದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಈ ವಾರದ ಇನ್ನೊಂದು ಸುದ್ದಿಯೂ ಯುಪಿಎ-2 ದರ್ಬಾರಿನಲ್ಲಿ ನಮ್ಮ ದೇಶದ ವಿದೇಶಾಂಗ ನೀತಿ ಹೇಗೆ ಅಮೆರಿಕಾದ ವಿದೇಶಾಂಗ ನೀತಿಗೆ ಅಡಿಯಾಳಾಗುತ್ತಿದೆ ಎಂಬುದನ್ನು ತೋರಿಸಿದೆ. 'ಅಮೆರಿಕಾ ಸಂಯುಕ್ತ ಸಂಸ್ಥಾನ ಭಾರತದೊಂದಿಗೆ ಒಂದು ವಿಶೇಷ ಸಂಬಂಧವನ್ನು ಬೆಳೆಸುತ್ತಾ, ಚೀನಾದೊಂದಿಗೆ ದೀರ್ಘ ಗಡಿ ಹೊಂದಿರುವ ಒಂದು ಮೂಡಿ ಬರುತ್ತಿರುವ ಶಕ್ತಿಯೊಂದಿಗೆ ಭಾಗೀದಾರಿಕೆಯನ್ನು ಈಗಾಗಲೇ ಆರಂಭಿಸಿದೆ' ಎಂದು ಅಮೆರಿಕಾದ 'ಕಾರ್ನೆಗಿ ಅಂತರ್‍ರಾಷ್ಟ್ರೀಯ ಶಾಂತಿ ಎಂಡೋಮೆಂಟ್' ಎಂಬ ಅಮೆರಿಕನ್ ಆಡಳಿತಕ್ಕೆ ಸಲಹೆ ಕೊಡುವ 'ಚಿಂತಕರ ಚಾವಡಿ'ಯ ಅಧ್ಯಕ್ಷೆ ಜೆಸಿಕಾ ಮ್ಯಾಥಿವ್ಸ್ ಹೇಳಿದ್ದಾರೆ. 'ನವದೆಹಲಿಯೊಂದಿಗೆ ವಾಶಿಂಗ್ಟನ್ ಅನುಸಂಧಾನಕ್ಕೆ ಅತಿ ದೊಡ್ಡ ಪ್ರೇರಣೆಯೆಂದರೆ ಚೀನಾದ ಉದಯಿಸುತ್ತಿರುವ ಶಕ್ತಿಯನ್ನು ಸರಿಹೊಂದಿಸುವಲ್ಲಿ ಭಾರತ ನೆರವಾಗಬಲ್ಲದು ಎಂಬ ನಿರೀಕ್ಷೆ-ನಿಜ ಇದನ್ನು ಹೇಳುತ್ತಿಲ್ಲ' ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ. ಅಮೆರಿಕಾಕ್ಕೆ ಭಾರತ ಬೇಕಾಗಿರುವುದು ಚೀನಾವನ್ನು ತಡೆದು ನಿಲ್ಲಿಸಲಷ್ಟೇ; ಅದನ್ನು ಯುಪಿಎ-2 ಸರಕಾರ ವಿಧೇಯತೆಯಿಂದ ಪಾಲಿಸುತ್ತಿದೆ!

★ ★ ★

ಕಾಮನ್ವೆಲ್ತ್ ಹಗರಣ: ಆಪಾದನೆಗಳು ನಿಜವಾಗುತ್ತಿವೆ

ಕಾಮನ್ವೆಲ್ತ್ ಕ್ರೀಡಾಕೂಟಕ್ಕಾಗಿ ಕ್ರೀಡಾಂಗಣದ ನವೀಕರಣ ಭ್ರಷ್ಟಾಚಾರದ ಒಂದು ಮುಖ್ಯ ಮೂಲ ಎಂಬುದು ಕೇಂದ್ರೀಯ ವಿಚಕ್ಷಣಾ(ವಿಜಿಲೆನ್ಸ್) ಆಯೋಗದ ತನಿಖೆಗಳಲ್ಲಿ ಸಾಬೀತಾಗುತ್ತಿದೆ. ಕ್ರೀಡಾಂಗಣಗಳ ನವೀಕರಣಕ್ಕೆ ಆರಂಭದಲ್ಲಿ ಮಂಜೂರು ಮಾಡಿದ ಒಟ್ಟು ಹಣ ರೂ.1000ಕೋಟಿ. ಕ್ರೀಡಾಂಗಣವಾರು ವಿವರ ಅದರಲ್ಲಿರಲಿಲ್ಲ. ನಂತರ ರೂ.2460 ಕೋಟಿಯ ಪರಿಷ್ಕೃತ ಮೊತ್ತಕ್ಕೆ ಕೇಂದ್ರ ಸಂಪುಟ ಮಂಜೂರಾತಿ ನೀಡಿತು. ಇದನ್ನು ಮಾಡಿದ್ದು ಕ್ರೀಡಾಕೂಟದ ಸಂಘಟನಾಸಮಿತಿಯ ಪ್ರಸ್ತಾವದ ಪ್ರಕಾರ. ಈ ಕುರಿತ ಸಲಹಾ ಸೇವೆಗಳಿಗೆ ಖರ್ಚು ಮಾಡಿದ ಹಣ ರೂ. 42 ಕೋಟಿ. ಮಾಹಿತಿ ಹಕ್ಕು ಕಾನೂನಿನ ಅಡಿಯಲ್ಲಿ ದೊರೆತಿರುವ ಮಾಹಿತಿ ಇದು.

ಕ್ರೀಡಾಕೂಟಕ್ಕೆ ಕಟ್ಟಿರುವ ಕ್ರೀಡಾಗ್ರಾಮದ ಕಟ್ಟಡಗಳ ನಿರ್ಮಾಣ ಗುಣಮಟ್ಟ ಕಳಪೆಯಾಗಿದ್ದು 2ಕೋಟಿ ರೂ. ವೆಚ್ಚದ ಈ ಕಟ್ಟಡಗಳನ್ನು ಹೆಚ್ಚೆಂದರೆ 20 ವರ್ಷಗಳ ವರೆಗೆ ಬಳಸಬಹುದು ಎಂದು ಕೇಂದ್ರೀಯ ಕಟ್ಟಡ ಸಂಶೋಧನಾ ಸಂಸ್ಥೆ(ಸಿಬಿಆರ್‌ಐ) ವರದಿಗಳು ಹೇಳುತ್ತಿವೆ ಎಂದು ಟೈಂಸ್ ಆಫ್ ಇಂಡಿಯಾ ವರದಿ ಮಾಡಿದೆ. ನಿರ್ಮಾಣದಲ್ಲಿನ ಕೊರತೆಗಳನ್ನು ಈ ಸಂಸ್ಥೆಯ ಆರು ವರದಿಗಳು ಗಮನಕ್ಕೆ ತಂದಿದ್ದು ಅವನ್ನು ಸರಿಪಡಿಸಲಾಗಿಲ್ಲ.

ಕ್ರೀಡಾಂಗಣಗಳ ಹೊರಗಡೆ 'ಟಿಕೇಟುಗಳೆಲ್ಲ ಮಾರಾಟವಾಗಿವೆ' ಎಂಬ ಫಲಕ, ಒಳಗೆ ಖಾಲಿ ಸೀಟುಗಳು- ಈ 'ರಹಸ್ಯ'ವೂ ಈಗ ಭೇದಿಸಲ್ಪಡುತ್ತಿದೆ. ಒಟ್ಟು 74 ಕೋಟಿ ರೂ.ಗಳ ಟಿಕೇಟುಗಳನ್ನು ಕ್ರೀಡಾ ಸಂಘಟನಾ ಸಮಿತಿ ಪುಕ್ಕಟೆಯಾಗಿ ಹಂಚಿತ್ತಂತೆ. ಅಂದರೆ ಆಮೂಲಕ ದೇಶದ ಹೆಮ್ಮೆಯೆಂಬ ಈ ಕ್ರೀಡಾಕೂಟವನ್ನು ನೋಡಲು ಸಾರ್ವಜನಿಕರಿಗೆ ಅವಕಾಶ ವಂಚನೆ ಮತ್ತು ಇಷ್ಟೊಂದು ಹಣ ಕೇಂದ್ರ ಸರಕಾರದ ಬೊಕ್ಕಸಕ್ಕೆ ನಷ್ಟ.

ಕಾಮನ್ವೆಲ್ತ್ ಕ್ರೀಡಾಕೂಟಗಳ ಒಕ್ಕೂಟದ ಜನರಲ್ ಅಸೆಂಬ್ಲಿ ಸಭೆ ಅಕ್ಟೋಬರ್ 12, 2009ರಂದು ನಡೆದಿತ್ತು. ಅದರಲ್ಲಿ ಕ್ರೀಡಾಕೂಟದ ತಯಾರಿಯ ವಿವರಗಳನ್ನು ಮಂಡಿಸಲಾಗಿತ್ತು. ಅದರ ಕಲಾಪಗಳ ದಾಖಲೆಗಳಿಂದ ತಮಗೆ ಕೆಲವು ಸಂಕೇತಗಳು ದೊರೆಯಬಹುದು ಎಂದು ಸಿಬಿಐ ಅಧಿಕಾರಿಗಳು ಆ ಸಭೆಯ ವಿಡಿಯೋವನ್ನು ಕೇಳಿದರು. ಆದರೆ ಅವರಿಗೆ ಕೊಟ್ಟಿರುವ ವಿಡಿಯೋದಲ್ಲಿ ಬಹಳ ಕತ್ತರಿ ಹರಿದಾಡಿದ್ದು, ಮಹತ್ವದ ಅಂಶಗಳನ್ನು ತೆಗೆದೇ ಹಾಕಿರುವುದು ಕಂಡು ಬಂದಿದೆ. ಆದ್ದರಿಂದ ಲಂಡನ್ನಿನಲ್ಲಿರುವ ಕ್ರೀಡಾಕೂಟದ ಕೇಂದ್ರದಿಂದ ಕತ್ತರಿ ಹರಿದಾಡದಿರುವ ವಿಡಿಯೋವನ್ನು ಪಡೆಯಲು ಸಿಬಿಐ ಪ್ರಯತ್ನ ನಡೆಸಿದೆಯಂತೆ. ಈ ಹಿನ್ನಲೆಯಲ್ಲಿ ಕ್ರೀಡಾಕೂಟಕ್ಕೆ ಕಳಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳು ಮಾರ್ಚ್ 31ರ ವರೆಗೆ ಅಲ್ಲಿಯೇ ಮುಂದುವರೆಯಬೇಕು ಎಂಬ ಕ್ರೀಡಾ ಇಲಾಖೆಯ ನಿರ್ದೇಶನವಿದ್ದರೂ ಸುರೇಶ ಕಲ್ಮಾಡಿಯವರು ಡಿಸೆಂಬರ್ 23 ರಂದು ಎಲ್ಲಾ ಅಧಿಕಾರಿಗಳಿಗೆ ತಮ್ಮ ಬಳಿಯಿರುವ ದಾಖಲೆಗಳನ್ನೆಲ್ಲಾ ದಾಖಲೆ ಕೊಠಡಿಗೆ ಒಪ್ಪಿಸಿ ತಂತಮ್ಮ ಜಾಗ ಖಾಲಿ ಮಾಡಬೇಕು ಎಂದು ಆದೇಶ ನೀಡಿರುವುದು ಉದ್ದೇಶಪೂರ್ವಕವಾಗಿರಬಹುದು ಎಂದು ಭಾವಿಸಲಾಗುತ್ತಿದೆ.

ಈ ಅಂಕಣ ಬರೆಯುವ ವೇಳೆಗೆ ಸಿಬಿಐ ಸುರೇಶ ಕಲ್ಮಾಡಿಯವರ ವಿಚಾರಣೆ ಆರಂಭಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಆರ್.ಜಿ. ಸ್ಥಳೇಕರ್....

ಟ 2 ರಿಂದ

ಮರಶೀಲರಾಗಿಯೇ ಉಳಿದರು, ಎಂದೂ ಕಾರ್ಮಿಕ ಂದೋಲನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ರಾಜಿ ಮಾಡಿಕೊಳ್ಳಲಿಲ್ಲ.

ಂದು ಒಗಟು

ಅವರು ಚುನಾವಣಾ ರಂಗ ಪ್ರವೇಶಿಸಿದ್ದು 973ರಲ್ಲಿ, ಹಳಿಯಾಳ ಕ್ಷೇತ್ರದಲ್ಲಿ ಸಿಪಿಐ(ಎಂ) ಭ್ಯರ್ಥಿಯಾದಾಗ. ಈ ಚುನಾವಣೆಗಳಲ್ಲಿ ಕಾಂ. ಎಂಎಸ್ ಅವರ ಪರವಾಗಿ ಪ್ರಚಾರ ನಡೆಸಿದರು. ಂತರ 1978ರಲ್ಲಿ ಸಮರ ಶೀಲ ಕಾರ್ಮಿಕ ಾರ್ಯಕರ್ತರ ಒಂದು ಗುಂಪನ್ನು ಕಲೆಹಾಕಿ ಅವರು ಾಂಡೇಲಿ ಮುನಿಸಿಪಾಲಿಟಿಯನ್ನು ವಶಪಡಿಸಿ ೊಂಡರು. 1982ರ ವರೆಗೆ ಅವರು ಮುನಿಸಿಪಲ್ ಧ್ಯಕ್ಷರಾಗಿದ್ದರು. ನಿದ್ದೆಯಲ್ಲಿದ್ದಂತಹ ಒಂದು ಟ್ಟಣವನ್ನು ಒಂದು ಆಧುನಿಕ ಮುನಿಸಿಪಾಲಿಟಿಯಾಗಿ ಳೆಸುವಲ್ಲಿ ಅವರ ಕೊಡುಗೆ ಅಪಾರ. ದಾಂಡೇಲಿ ೂ ಕಬಳಿಕೆ ನಡೆಸಿದವರ ಪಟ್ಟಣ ಪ್ರದೇಶವಾಗಿತ್ತು. ಈ ಸಿರಿವಂತ ಕಬಳಿಕೆಕೋರರಿಗೆ ಅವರು ಶಾಂತಿ ಲ್ಲದಂತೆ ಮಾಡಿದರು. ಅದೇ ವೇಳೆಗೆ ಬಡವರ ೀದಿಬದಿ ಗುಡಿಸಲುಗಳಿಗೆ ಪ್ರೋತ್ಸಾಹ ನೀಡಿದರು. ವರು ಮುನಿಸಿಪಲ್ ಅಧ್ಯಕ್ಷರಾಗಿದ್ದಾಗ ಇಲೆಕ್ಟ್ರೊ-ಟಲರ್ಜಿಕಲ್ ಎಂಪ್ಲಾಯೀಸ್ ಯೂನಿಯನ್ ುಷ್ಕರ ನಡೆಸಿದಾಗ, ಮುಷ್ಕರ ನಿರತ ದಾಂಡೇಲಿ ೆರೊ ಅಲಾಯ್ಸ್ ಕಾರ್ಮಿಕರವನ್ನು ಬಳಸಿಕೊಂಡು ಂದು ದೊಡ್ಡ ವಾಸದ ಲೇಔಟನ್ನು ಸಂಘಟಿಸಿದರು.

ಸ್ಥಳೇಕರ್ ಹಳಿಯಾಳದಲ್ಲಿ ಭೂಮಿಯನ್ನು ಶಪಡಿಸಿಕೊಳ್ಳುವ ಒಂದು ಆಂದೋಲನಕ್ಕೆ ನೇತೃತ್ವ ೀಡಿದರು. ಅದರಲ್ಲಿ ಒಬ್ಬ ರೈತ ಕೊಲ್ಲಲ್ಪಟ್ಟ, ಪರೀತ ದಮನ ನಡೆಯಿತು. ಮುಂದೆ 1981ರಲ್ಲಿ ವರು ಮತ್ತು ಕಾಂ. ಧಾರೇಶ್ವರ್ ಪೋಲೀಸ ೊಂದಿಗೆ ಬಹಿರಂಗ ಸಂಘರ್ಷ ನಡೆಸಿದರು. ದರಿಂದಾಗಿ ಇಡೀ ದಾಂಡೇಲಿ ಕಷ್ಟಪಡ ೇಕಾಯಿತು, ಹಲವಾರು ಸಮರಶೀಲ ಕಾರ್ಮಿಕರು ೋಲೀಸ್ ದಮನಕ್ಕೊಳಗಾದರು. ಪರಿಸ್ಥಿತಿಯನ್ನು ಂಭಾಳಿಸಲು ಮತ್ತು ಸ್ಥಳೇಕರ್ ಮತ್ತು ಇತರ ಂಗಾತಿಗಳನ್ನು ಇನ್ನಷ್ಟು ಪೋಲೀಸ್ ಕಿರಿಕುಳದಿಂದ ಕ್ಷಿಸಲು ಈ ಲೇಖಕ ಬಹಳಷ್ಟು ಪ್ರಯತ್ನ ಡೆಸಬೇಕಾಗಿ ಬಂತು.

ಈ ಘಟ್ಟದಲ್ಲೂ ಮಾಲಕರು ಸ್ವಲ್ಪ ುದ್ರೇಕಿಸಿದರೂ ಸಾಕು, ಸ್ಥಳೇಕರ್ ಪ್ರತಿಭಟನಾ ುತಪ್ರದರ್ಶನಕ್ಕೆ ನೇತೃತ್ವ ಕೊಡುತ್ತಿದ್ದರು ಅಥವಾ ಸಮರಶೀಲ ಕಾರ್ಯಾಚರಣೆಗೆ ಇಳಿದು ಬಿಡುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಸ್ವತಃ ಮುಂದೆ ಕೆಂಬಾವುಟ ಹಿಡಿದು, ಬಹಿರಂಗವಾಗಿಯೆ ಕ್ರೋಧ ಪ್ರಕಟಿಸುತ್ತಾ ಸಾಗುತ್ತಿದ್ದರು, ಕಾರ್ಮಿಕ ಆಂದೋಲನದ ಶತ್ರುಗಳೊಂದಿಗೆ ಒರಟಾಗಿ ವರ್ತಿಸುತ್ತಿದ್ದರು. ಆತ ಎಂತಹ ಒರಟು ಎಂದರೆ ಅವರನ್ನು ತೀವ್ರವಾಗಿ ಪ್ರೀತಿಸುತ್ತಿದ್ದ, ಅದೇ ವೇಳೆಗೆ ಅವರ ತಪ್ಪುಗಳ ಬಗ್ಗೆ ಎಂದೂ ಸುಮ್ಮನಿರದಿದ್ದ ಈ ಲೇಖಕ ಅವರನ್ನು ರಕ್ಷಿಸಬೇಕಾಗಿ ಬರುತ್ತಿತ್ತು ಮತ್ತು ಅವರನ್ನು ಬಯಲಿಗೆಳೆಯಲು ಅವರೊಂದಿಗೆ ಹೋರಾಡಬೇಕಾಗಿಯೂ ಬರುತ್ತಿತ್ತು. ಅದು ಬಹಳ ಕಷ್ಟದ ಕೆಲಸವಾಗಿತ್ತು. ಇದನ್ನು ಬಹಳ ತಡವಾಗಿ ಕಾಂ.ಸ್ಥಳೇಕರ್, ಅವರ ವ್ಯಕ್ತಿವಾದಿ ಮಾರ್ಗಗಳನ್ನು ವಿರೋಧಿಸಿ ನಾನು ಸರಿಯಾದ ಕೆಲಸವನ್ನೆ ಮಾಡಿದ್ದೆ ಎಂದು ಒಪ್ಪಿಕೊಂಡರು.

ಕಾರ್ಪೊರೇಟ್ ಮಾದರಿ!

ಆರ್.ಜಿ.ಸ್ಥಳೇಕರ್ ಯಶಸ್ಸು ಎಂದರೆ ಕಾರ್ಮಿಕರಲ್ಲಿ ಸಮರಶೀಲ ಮನೋಭಾವನೆ ಬಡಿದೆಬ್ಬಿಸುವಲ್ಲಿ ಮತ್ತು ಅವರನ್ನು ರಾಜಕೀಯ ಚಟುವಟಿಕೆಗಳಲ್ಲಿ ಯಶಸ್ವಿಯಾಗಿ ತೊಡಗಿಸುವುದರಲ್ಲಿ ಕೂಡ. ಆದರೆ ಇದನ್ನು ಯಾವುದೇ ರೀತಿಯ ಸಾಮೂಹಿಕ ನಿರ್ಧಾರ ಪ್ರಕ್ರಿಯೆಯನ್ನು ಉಲ್ಲಂಘಿಸುವ, ಕಾರ್ಮಿಕ ವರ್ಗದ ಸಂಘಟಿತ ರಾಜಕೀಯ ಪಕ್ಷಕ್ಕೆ ತನ್ನನ್ನು ಒಳಪಡಿಸಿಕೊಳ್ಳಲು ನಿರಾಕರಿಸುವ ಅವರ ವರ್ತನೆಯೊಂದಿಗೆ ನೋಡಬೇಕು. ಕಾರ್ಮಿಕರಿಗೆ ಬಹಳಷ್ಟನ್ನು ದೊರಕಿಸಿ ಕೊಡುವಲ್ಲಿ, ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲಿನಲ್ಲಿ ದೀರ್ಘ ಹೋರಾಟಗಳ ಮೂಲಕ ನೂರಾರು ಕಾಂಟ್ರಾಕ್ಟ್ ಕಾರ್ಮಿಕರನ್ನು ಖಾಯಂಗೊಳಿಸುವಂತಹ ಪ್ರಯತ್ನಗಳಲ್ಲಿ ಅವರು ಯಶಸ್ವಿಯಾಗಿದ್ದರೂ, ರಾಜಕೀಯ ಬದ್ಧತೆ ಕುರಿತಂತೆ ಕಾರ್ಮಿಕರಲ್ಲಿ ಉತ್ಸಾಹದ ಕೊರತೆಯ ಬಗ್ಗೆ ಅವರಿಗೆ ಪೂರ್ಣ ಭ್ರಮ ನಿರಸನವಾಗಿತ್ತು. ಇದು ಅವರಲ್ಲಿ ಕಾರ್ಮಿಕ ಸಂಘಗಳನ್ನು ಕಾರ್ಪೊರೇಟ್ ಮಾದರಿಯಲ್ಲಿ ನಡೆಸಬಹುದೆಂಬ ಭ್ರಮೆಗಳನ್ನು ಉಂಟು ಮಾಡಿತ್ತು. ಇದರಿಂದಾಗಿ ಅವರು ಬಿಟಿ ರಣದಿವೆಯವರ ಮಾರ್ಗದ ಬದಲು ಬಹಿರಂಗವಾಗಿ ಮುಂಬೈನ ದತ್ತಾ ಸಾಮಂತ್‌ಗೆ ನಿಕಟವಾದ ಲೈನನ್ನು ಪ್ರತಿಪಾದಿಸುವಂತಾಯಿತು.

1980ರ ವೇಳೆಗೆ ಸ್ಥಳೇಕರ್ ದಾಂಡೇಲಿ ಮಾತ್ರವಲ್ಲ, ಹರಿಹರದಿಂದ ಧಾರವಾಡ ಹಾದು ಬೆಳಗಾವಿಯ ವರೆಗಿನ ಪ್ರದೇಶದಲ್ಲಿ ಕಾರ್ಮಿಕ ಸಂಘಗಳಲ್ಲಿ ಪ್ರಧಾನ ಸ್ಥಾನ ಗಳಿಸಿದ್ದರು. ಎಪ್ಪತ್ತರ ದಶಕದಲ್ಲಿ ಅವರು ಅತ್ಯಂತ ಸಮರಶೀಲರಾಗಿದ್ದರು, ಎಂಭತ್ತರ ದಶಕದ ಆರಂಭದ ವೇಳೆಗೆ ಮೆದುವಾಗಲಾರಂಭಿಸಿದ್ದರು. ಇದು ಆವೇಳೆಗೆ ಕಾರ್ಮಿಕ ಸಂಘಗಳನ್ನು ಕಾರ್ಪೊರೇಟ್ ಮಾದರಿಯಲ್ಲಿ ನಡೆಸಬೇಕೆನ್ನುವ ಅವರ ಅಭಿಪ್ರಾಯಕ್ಕೆ ಅನುಗುಣವಾಗಿಯೇ ಇತ್ತು.

ಕಾಂ. ಸ್ಥಳೇಕರ್ ಸ್ವತಃ ಒಪ್ಪಿಕೊಳ್ಳುವಂತೆ, ಅವರು ಎಷ್ಟೊಂದು ವ್ಯಕ್ತಿವಾದಿ ಎಂದರೆ 1980ರ ದಶಕದಲ್ಲಿ ಅವರು ಪಕ್ಷಕ್ಕಿಂತ ಭಿನ್ನವಾದ ದಾರಿ ಹಿಡಿದರು. 1980ರಲ್ಲಿ ಪಕ್ಷದ ಮೈಸೂರು ಪ್ಲೀನಂ ನಂತರ ಅವರು ಇದ್ದಕ್ಕಿದ್ದಂತೆ ಪಕ್ಷ ಬಿಟ್ಟರು. ಯುವ ಪಡೆಯನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವರಿಗನ್ನಿಸಿತು. ನಿಜ ಸಂಗತಿಯೆಂದರೆ ಕಾಂ.ಇಎಂಎಸ್ ಈ ಲೇಖಕನನ್ನು ಅವರನ್ನು ಪಕ್ಷಕ್ಕೆ ವಾಪಾಸು ತರಲು ಪ್ರಯತ್ನಿಸಲೆಂದು ಕಳಿಸಿದರು. ಸ್ಥಳೇಕರ್ ಮನೆಯಲ್ಲಿ ಮೂರು ದಿನ ಇದ್ದು ಅವರು ಪಕ್ಷಕ್ಕೆ ಮರಳುವಂತೆ ಮಾಡಲು ಈ ಲೇಖಕ ಸಾಧ್ಯವಿದ್ದ ಪ್ರಯತ್ನವನ್ನೆಲ್ಲಾ ಮಾಡಿದರೂ ಯಶಸ್ವಿಯಾಗಲಿಲ್ಲ. ಸ್ಥಳೇಕರ್ ಸಿಐಟಿಯುನಲ್ಲಿ ಇರಲು ಒಪ್ಪಿದರಷ್ಟೇ. ಅಲ್ಲಿಯೂ ಅವರು ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯ ಪಕ್ಷದ ಅಭಿಪ್ರಾಯಕ್ಕಿಂತ ಭಿನ್ನವಾಗಿರುತ್ತಿತ್ತು. ಬಹಳ ಜನ ಸೇರಿರುತ್ತಿದ್ದ ಸಾರ್ವಜನಿಕ ಸಭೆಗಳಲ್ಲೇ ಬಹಿರಂಗ ತಿಕ್ಕಾಟವಾಗುತ್ತಿತ್ತು.

"ಕಾರ್ಮಿಕ ವರ್ಗ ನಮ್ಮ ಸೇವೆಗಳನ್ನು ಬಳಸಿಕೊಳ್ಳುತ್ತದೆ ಮತ್ತು ತನ್ನ ಕರ್ತವ್ಯಗಳನ್ನು ಕೈಬಿಡುತ್ತದೆ" ಎಂದು ಅವರು ಆ ದಿನಗಳಲ್ಲಿ ತಪ್ಪಾಗಿ ವಾದಿಸುತ್ತಿದ್ದರು. ಆದ್ದರಿಂದ ಮುಖಂಡತ್ವ ಕೊಡಬೇಕಾದರೆ ಕಾರ್ಮಿಕರು ಮುಂಗಡವಾಗಿ ಸಾಕಷ್ಟು ನಿಧಿಯನ್ನು ಒದಗಿಸಬೇಕು ಎಂಬ ಲೈನನ್ನು ಅವರು ಬೆಳೆಸಿದರು. ಇದರ ಜೊತೆಗೆ ಸೋವಿಯೆತ್ ಒಕ್ಕೂಟವನ್ನು ಬಹಿರಂಗವಾಗಿ ಟೀಕಿಸುತ್ತಿದ್ದರು. ನಮ್ಮ ಪಕ್ಷ ಕೂಡ ಸೋವಿಯೆತ್ ಮುಖಂಡತ್ವವನ್ನು ಪರಿಷ್ಕರಣವಾದಿ ಎಂದು ಪರಿಗಣಿಸಿದ್ದರೂ 1981ರಿಂದ ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದಿಂದ ದೂರವಿರುವುದನ್ನು ನಿಲ್ಲಿಸಿ ಅಂತರ್ರಾಷ್ಟ್ರೀಯ ಸಂಬಂಧಗಳನ್ನು ಮತ್ತೆ ಸ್ಥಾಪಿಸಲು ಶ್ರಮಿಸುತ್ತಿತ್ತು. ಸ್ಥಳೇಕರ್‌ರವರ ಬಹಿರಂಗ ಟೀಕೆಗಳನ್ನು ಈ ಲೇಖಕ ಬಹಿರಂಗವಾಗಿಯೇ ಎದುರಿಸಬೇಕಾಗಿತ್ತು. ಅಲ್ಲದೆ ಈ ಲೇಖಕನೇ ಅವರ ಸಂಘಗಳ ಮುಖಂಡತ್ವವನ್ನು ವಹಿಸಿಕೊಳ್ಳುವಂತೆ ಮಾಡಲಾಯಿತು. ಅದನ್ನು ಯಶಸ್ವಿಯಾಗಿ ಮಾಡಿದರೂ ಅದರ ಪ್ರತಿಕೂಲ ಪರಿಣಾಮ ಸ್ವತಃ ಈ ಲೇಖಕನ ಮೇಲೆ ಮತ್ತು ಕಾರ್ಮಿಕ ಆಂದೋಲನದ ಮೇಲೆ ಬೀಳದಿರಲಿಲ್ಲ.

ಅವಿವೇಕತನ ತೋರಿದ್ದರೂ...

1980ರ ದಶಕದಲ್ಲಿ ಸ್ಥಳೇಕರ್ ಮುಂಗಡ ಹಣ ಠೇವಣಿ ಮಾಡಬೇಕು, ಇತ್ಯರ್ಥದ ಮೊತ್ತಗಳಲ್ಲಿ ಪಾಲು ಕೊಡಬೇಕು ಎಂಬಿತ್ಯಾದಿಗಳಿಗೆ ಒಪ್ಪಿದಲ್ಲಿ ಕಾರ್ಮಿಕ ಸಂಘಗಳಿಗೆ ಸಲಹೆ ನೀಡುವ ಪಾತ್ರವನ್ನು ಒಪ್ಪಿಕೊಳ್ಳುತ್ತಿದ್ದರು. ಆದರೆ ಈ ಘಟ್ಟದಿಂದ ಅವರಿಗಾಗಲೀ, ಆಂದೋಲನಕ್ಕಾಗಲೀ ಏನೂ ಒಳ್ಳೆಯದಾಗಲಿಲ್ಲ.

ಕ್ರಮೇಣ ಸ್ಥಳೇಕರ್ ತಮ್ಮೂರು ಕತ್ಗಲ್‌ಗೆ ಹಿಂದಿರುಗಿ ವ್ಯಾಪಾರ ನಡೆಸಲು ಪ್ರಯತ್ನಿಸಿದರು, ರೈಸ್ ಮಿಲ್ ಮಾಲಕರಾಗಲು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಅವರು ಸಾರ್ವಜನಿಕ ಬ್ಯಾಂಕುಗಳಿಗೆ ಸಾಲಗಾರರಾದರು, ಅವುಗಳಿಂದ ಹೊರಬರಲು ಅವರಿಗೆ ಸಾಧ್ಯವಾಗಲಿಲ್ಲ. ನಿಜ, ಕಾರ್ಮಿಕರು ನಮಗೆ ಕೈಕೊಟ್ಟು ಅವರ ಬಳಿ ಹೋದಾಗ ಸಲಹೆ ಕೊಡುವ ಪಾತ್ರವನ್ನು ನಿರ್ವಹಿಸಲು ಅವರೇನೂ ನಿರಾಕರಿಸಲಿಲ್ಲ, ಇದನ್ನೆಲ್ಲಾ ಪ್ರತಿಫಲ ಪಡೆದೇ ಮಾಡುತ್ತಿದ್ದರು.

ಸುಮಾರು ಒಂದು ದಶಕದ ಕಾಲ ಅವರು ನಮ್ಮ ಆಂದೋಲನದ ಟೀಕಾಕಾರರಾಗಿದ್ದರು. ಇತ್ತೀಚೆಗೆ ತಮ್ಮ ಬದುಕಿನ ಕೊನೆಯ ವೇಳೆಗೆ ಅವರಿಗೆ ತಮ್ಮ ತಪ್ಪುಗಳ ಅರಿವಾಗಿದ್ದು, ಮತ್ತೆ ಪಕ್ಷದ ಸದಸ್ಯರಾಗದಿದ್ದರೂ, ಪಕ್ಷದ ಹಿತೈಷಿಯಾಗಿರಬಯಸಿದ್ದರು.

ಸ್ಥಳೇಕರ್ ಏನೆಲ್ಲಾ ಅವಿವೇಕತನಗಳನ್ನು ತೋರಿದ್ದರೂ ಸಮರಶೀಲ ಕಾರ್ಮಿಕ ಆಂದೋಲನಕ್ಕೆ ಅವರ ಬದ್ಧತೆಗಾಗಿ ಈ ಲೇಖಕ ಅವರನ್ನು ಸದಾ ಮೆಚ್ಚಿಕೊಳ್ಳುತ್ತಿದ್ದ. ತನ್ನ ತಪ್ಪುಗಳನ್ನು ಅವರು ಕೊನೆಗೆ ಒಪ್ಪಿಕೊಂಡಿದ್ದರು. ಈ ವೈಯಕ್ತಿಕ ಸಂಬಂಧಗಳಿಂದಾಗಿ, 'ಇಲ್ಲಿದೆ ನೋಡಿ ಸಮರಶೀಲತೆಯ ಒಂದು ಅನುಕರಣೀಯ ಮಾದರಿ, ಅದೇ ರೀತಿ ಮಹಾನ್ ತ್ಯಾಗಗಳನ್ನು, ಸಾಧನೆಗಳನ್ನು ಮಾಡಿಯೂ ಪಕ್ಷವನ್ನು ಕಟ್ಟುವಲ್ಲಿ ಪ್ರಯೋಜನಕಾರಿಯಾಗದಿರುವುದಕ್ಕೂ ಒಂದು ಮಾದರಿ' ಎಂದು ಹೇಳುವಂತಾಗಿದೆ.

ಕರ್ನಾಟಕದ ಕಾರ್ಮಿಕ ಮತ್ತು ಪ್ರಜಾಪ್ರಭುತ್ವವಾದಿ ಆಂದೋಲನ ಈ ಹೋರಾಟಗಾರ ಸ್ಥಳೇಕರ್‌ರವರಿಂದ ಬಹಳಷ್ಟು ಕಲಿಯಬೇಕಾಗಿದೆ, ಅದೇ ರೀತಿ ವ್ಯಕ್ತಿವಾದಿ ಸ್ಥಳೇಕರ್‌ರಿಂದಲೂ ಕಲಿಯಲು ಮತ್ತು ಅದನ್ನು ಅನುಸರಿಸದಿರಲು ಕೂಡಾ ಬಹಳಷ್ಟು ಇದೆ.

ಸ್ಥಳೇಕರ್ ತನ್ನ ವ್ಯಕ್ತಿವಾದಿ ಕಾರ್ಯನಿರ್ವಹಣೆಯನ್ನು ಸಮರ್ಥಿಸಿಕೊಳ್ಳಲು ಹೇಳುವಂತೆ ಕಾರ್ಮಿಕ ಆಂದೋಲನದಲ್ಲಿ ಗುರು-ಶಿಷ್ಯ ಸಂಬಂಧವೆಂಬುದೇನೂ ಇಲ್ಲ. ಒಬ್ಬ ಕಾರ್ಮಿಕ ವರ್ಗದ ಮುಖಂಡ ಸಮೂಹಕ್ಕೆ ತನ್ನನ್ನು ಒಳಪಡಿಸಿಕೊಳ್ಳಬೇಕು, ಆ ಸಮೂಹದಲ್ಲಿ ಏನಾದರೂ ಕೊರತೆ ಇದ್ದಾಗ ಕೂಡ. ಈ ಗುಣ ಅವರಲ್ಲಿ ಇರಲಿಲ್ಲ. ಆದರೂ ಇಎಂಎಸ್‌ರಂತಹ ಮಹಾನ್ ಮುಖಂಡರು ಪಕ್ಷದ ವೇದಿಕೆಗಳಲ್ಲಿ ಪ್ರಶ್ನೆ ಕೇಳುವ ಅವರ ಗುಣವನ್ನು ಕಂಡಿದ್ದರು, ಆದ್ದರಿಂದ ಅವರು ಮುಂದುವರೆಯಬೇಕೆಂದು ಬಯಸಿದ್ದರು. ಸ್ಥಳೇಕರ್ ಅವರ ಅವಿವೇಕತನವೆಂದರೆ ಸಮೂಹ ತನ್ನ 'ಗುರು'ವಾಗಬಲ್ಲದು ಎಂದು ಅವರು ಅರಿಯದೇ ಹೋದರು.

ಸ್ಥಳೇಕರ್‌ರವರಂತೆ ಸಮರಶೀಲರಾಗಿರಬೇಕು ಮತ್ತು ಅವರಂತೆ ಅವಿಧೇಯರಾಗಿರಬಾರದು ಎಂಬುದು ಮಾರ್ಕ್ಸ್‌ವಾದಿಗಳಿಗೆಲ್ಲಾ ಒಂದು ಪಾಠ.

ಕಷ್ಟ-ನಷ್ಟಗಳನ್ನೆಲ್ಲ ಸಹಿಸಿಕೊಂಡು ಕೆಂಬಾವುಟ ವಿಶಾಲ ಪ್ರದೇಶಗಳಲ್ಲಿ ಹಾರಾಡುತ್ತ ಇರುವಂತೆ ಮಾಡಿರುವ ಇಂತಹ 'ಹೋರಾಟಗಾರ' ಸ್ಥಳೇಕರ್‌ರ ಬದುಕು ಮತ್ತು ಬದ್ಧತೆಯನ್ನು ಅನುಕರಿಸುವುದು ನಮ್ಮ ಕರ್ತವ್ಯ.

ಕಾರ್ಮಿಕ ವರ್ಗದ ಆಂದೋಲನ ಇರುವ ವರೆಗೆ ಸ್ಥಳೇಕರ್ ಅವರ ಹೆಸರು ಇರುತ್ತದೆ.

ಬಿಜೆಪಿ ದರ್ಬಾರ್....

ುಟ 12 ರಿಂದ

ುತ್ತಿಗೆದಾರರಿಗೆ ವಹಿಸಲಾಗಿದೆಯಂತೆ. ಅದು ಾಲದೆಂದು ವೆಚ್ಚದ ಗರಿಷ್ಠ ಮಿತಿ ಮೀರಿ ನೂರಾರು ೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ ಯಂತೆ. ಒಟ್ಟಾರೆ ಆ ವರ್ಷದಲ್ಲಿ ಯಲಹಂಕದಲ್ಲಿ ಟ್ಟು 161 ಕೋಟಿ ರೂಗಳ 'ಭಯಂಕರ ಭಿವೃದ್ಧಿ'ಯನ್ನೆ ಮಾಡಿ ಹಾಕಲಾಗಿದೆಯಂತೆ.

ಈ ಕುರಿತು ಕಾಂಗ್ರೆಸ್ ಪಕ್ಷದ ಸದಸ್ಯರೊಬ್ಬರು ಪಾಲಿಕೆ ಸಭೆಯಲ್ಲಿ ತನಿಖೆಗೆ ಆಗ್ರಹಿಸಿದ್ದಾರೆ. ಯಾರಾದರೂ ತನಿಖೆಗೆ ಆಗ್ರಹಿಸಲಿ. ರಾಜ್ಯದಲ್ಲಿ ಶಿಸ್ತು, ಸದಾಚಾರಕ್ಕೆ ಹೆಸರಾದ ದೇಶಭಕ್ತರ ಪಕ್ಷವಾದ ಬಿಜೆಪಿಯ ದರ್ಬಾರ್‌ನಲ್ಲಿ ಹುಚ್ಚನ ಮದುವೆಯಲ್ಲಿ ಉಂಡವರೇ ಜಾಣರು ಎಂಬುದನ್ನು ಎಷ್ಟೋಂದು ಜನ ಅರ್ಥ ಮಾಡಿಕೊಂಡಿದ್ದಾರಲ್ಲ ಅದೇ ನಿಜಕ್ಕೂ ಅಮೋಘವಾದ ವಿಷಯ. ಏನಂತೀರ ?

JANASHAKTHI KANNADA VARA PATRIKE JAN. 16, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2009-1

ಕ್ಯಾಂಕನ್‌ನಲ್ಲಿ ಹವಾಮಾನ ವೈಪರೀತ್ಯ ಮಾತುಕತೆ

ಭಾರತ ಸರ್ಕಾರದ ಬಾಲಂಗೋಚಿ ನೀತಿ



'ಈ ಸಲದ ಬೇಸಿಗೆ ಬಿಸಿಲು ಕಳೆದ ಸಲಕ್ಕಿಂತ ಜಾಸ್ತಿ' ಎಂದು ಪ್ರತಿ ಬೇಸಿಗೆಯಲ್ಲೂ ಜನ ಹೇಳುವುದನ್ನು ನಾವು ಕೇಳಿದ್ದೇವೆ. ಹಾಗೆಯೇ ಚಳಿ ಮತ್ತು ಮಳೆ ಬೀಳುವುದು ಅಥವಾ ಮಳೆ ಬಾರದೇ ಇರುವ ಬಗ್ಗೆಯೂ ನಾವು ಹೇಳುತ್ತಿರುತ್ತೇವೆ. ಹೀಗೆ ಕಳೆದ ವರ್ಷಕ್ಕೂ ಈ ವರ್ಷಕ್ಕೂ ಇರುವ ವ್ಯತ್ಯಾಸವು ಹವಾಮಾನ ಬದಲಾವಣೆಯಿಂದ ನಮಗೆ ತಟ್ಟುತ್ತದೆ. ಇಂಥಹ ಹವಾಮಾನ ವೈಪರೀತ್ಯ ಅಥವಾ ಬದಲಾವಣೆಯು ನಮ್ಮ ಆರೋಗ್ಯ, ಬೆಳೆ, ಜೀವವೈವಿಧ್ಯತೆಗಳು, ಇತ್ಯಾದಿಯ ಮೇಲೆ ತೀವ್ರ ಪರಿಣಾಮ ಬೀರುತ್ತಲಿದೆ. ಇದಕ್ಕೆ ಸಂಬಂಧಿಸಿರುವ ಕೆಲವು ಪರಿಣಾಮಗಳೆಂದರೆ ಶಾಖದ ಗಾಳಿ, ಚಳಿಗಾಳಿ, ಬರ, ಮಲೇರಿಯಾ, ಕಾಡ್ಗಿಚ್ಚು, ಬೆಳೆ ಇಳುವರಿ ಏರುಪೇರುಗಳು, ಜೀವಿಗಳ ಸಾವಯವ ಆವರ್ತನ, ಕಾಡುಗಳ ಕಣ್ಮರೆ, ಇತ್ಯಾದಿ. ಹಿಮಾಲಯದ ಬೃಹತ್ ಹಿಮಪರ್ವತಗಳು ಏರುತ್ತಿರುವ ತಾಪಮಾನದಿಂದಾಗಿ ಕರಗಿ ನೀರಾಗಿ ಹರಿಯುತ್ತಿವೆ. ಸಮುದ್ರದ ಮಟ್ಟವು ಸಹ ಏರುತ್ತಿದೆ.




ಹವಾಮಾನ ವೈಪರೀತ್ಯಕ್ಕೆ ಪ್ರಧಾನ ಕಾರಣಗಳು

ಕೈಗಾರಿಕೆಗಳಿಂದ ಬಿಡುಗಡೆಯಾಗುವ ಹಸಿರು ಮನೆ ಅನಿಲಗಳು ಎಂದು ಕರೆಯಲಾಗುವ ಇಂಗಾಲದ ಡೈಆಕ್ಸೈಡ್, ಮೀಥೇನ್, ಸಾರಜನಕ ಆಕ್ಸೈಡ್ ಮುಂತಾದವು. ನಾವು ಬೆಳಕು ಪಡೆಯಲು ವಿದ್ಯುಚ್ಛಕ್ತಿ ತಯಾರಿಸಲು ಮುಖ್ಯವಾಗಿ ಕಲ್ಲಿದ್ದಲನ್ನು ಉರಿಸುವುದರಿಂದ ಮತ್ತು ಸಾರಿಗೆ ವಾಹನಗಳಲ್ಲಿ ನಾವು ಪೆಟ್ರೋಲಿಯಂ ತೈಲಗಳನ್ನು ಉರಿಸುವುದರಿಂದ ಇಂಗಾಲದ ಅನಿಲಗಳು ವಾತಾವರಣಕ್ಕೆ ಬಿಡುಗಡೆಯುಗುತ್ತವೆ. ಅಲ್ಲದೆ ಮುಂದುವರಿದ ದೇಶಗಳಲ್ಲಿ ಏರ್‌ಕಂಡೀಷನರ್ (ಎಸಿ) ಗಳನ್ನು ಬಳಸುವುದರಿಂದ ಅವುಗಳ ನಿರ್ವಹಣೆಯಲ್ಲಿ ಬಳಸುವ ಇಂಧನದಿಂದ ಇಂಗಾಲವು ಬಿಡುಗಡೆಯಾಗುತ್ತದೆ. ಇದನ್ನು ತಡೆಗಟ್ಟುವುದೇ ಅತಿ ದೊಡ್ಡ ಸವಾಲಿನ ಕೆಲಸ.

ಅತಿ ದೊಡ್ಡ ಮಲಿನಕಾರಿ ರಾಷ್ಟ್ರಗಳು

ವಿಶ್ವದ ಅತಿ ದೊಡ್ಡ ಮಲಿನಕಾರಿ



ರಾಷ್ಟ್ರವೆಂದರೆ ಅಮೇರಿಕಾ. ಇಡೀ ವಿಶ್ವದ ಶೇ. 30ಕ್ಕೂ ಹೆಚ್ಚು ವಾಯು ಮಲಿನಕಾರಕಗಳನ್ನು ಆ ದೇಶದ ಕೈಗಾರಿಕೆಗಳು ವಾತಾವರಣಕ್ಕೆ ಹೊರಸೂಸುತ್ತಿವೆ. ಎರಡನೆಯದು ಯೂರೋಪಿಯನ್ ಒಕ್ಕೂಟ, ಶೇ. 23. ಆದರೆ, ಹವಾಮಾನ ಬದಲಾವಣೆಯನ್ನು ತಡೆಗಟ್ಟಬೇಕಾದರೆ, ಮಾನವ ಚಟುವಟಿಕೆಗಳಾದ ಕೈಗಾರಿಕೆಗಳಿಂದ ಬಿಡುಗಡೆ ಯಾಗುತ್ತಿರುವ ವಾಯು ಮಲಿನಕಾರಕಗಳನ್ನು ತಡೆಗಟ್ಟಬೇಕು. ಇದನ್ನು ಕೈಗೊಳ್ಳಲು ಅಮೇರಿಕಾ ತಯಾರಿಲ್ಲ. ಏಕೆಂದರೆ, ಅಲ್ಲಿನ ದೊಡ್ಡ ತೈಲ ಕಂಪನಿಗಳು ಒಳಗೊಂಡ ಅತಿ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಘಟಕಗಳಿಂದ ಬಿಡುಗಡೆಯಾಗುವ ಮಲಿನಕಾರಕಗಳನ್ನು ತಡೆಗಟ್ಟಲು ಹಣ ವ್ಯಯ ಮಾಡಲು ತಯಾರಿಲ್ಲ. ಲಾಭದ ಹಿಂದೆ ಬಿದ್ದಿರುವ ಈ ಕಂಪನಿಗಳು ಜಗತ್ತಿನ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುತ್ತಾ ಲಾಭ ಗಳಿಸುತ್ತಿವೆಯೇ ಹೊರತು, ಮನುಕುಲಕ್ಕೆ ಅಪಾಯಕಾರಿಯಾಗಿ ಬಂದೊದಗಿರುವ ಹವಾಮಾನ ವೈಪರೀತ್ಯ ತಡೆಗಟ್ಟಲು ಯಾವ ಜವಾಬ್ದಾರಿಯನ್ನು ಹೊರಲೂ ಸಿದ್ಧವಿಲ್ಲ. ಆದರೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಾದ ಚೀನಾ, ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾಗಳಂಥಹ ದೇಶಗಳಿಗೆ ಇಂಥಹ ಜವಾಬ್ದಾರಿಯನ್ನು ವರ್ಗಾಯಿಸಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಹವಣಿಸುತ್ತಿದೆ.



ಅಮೇರಿಕಾದ ಬಾಲಬಡುಕನಾಗ ಹೊರಟಿರುವ ಪರಿಸರ ಸಚಿವ

ಇಂತಹ ವಿನಾಶಕಾರಿ ಹವಾಮಾನ ವೈಪರೀತ್ಯ ತಡೆಗಟ್ಟಲು ಅವಶ್ಯ ಕ್ರಮಗಳನ್ನು ಕೈಗೊಳ್ಳಲು ಎಲ್ಲ ದೇಶದ ಪ್ರತಿನಿಧಿಗಳು ಈ ವರ್ಷ ಮೆಕ್ಸಿಕೋ ದೇಶದ ಕ್ಯಾಂಕನ್‌ನಲ್ಲಿ ಸಭೆ ಸೇರಿದ್ದರು. ಭಾರತವು ಮಲಿನಕಾರಕಗಳ ವಿಸರ್ಜನೆಯನ್ನು ಕಡಿತಗೊಳಿಸಲು ಕಾನೂನುಬದ್ಧ ಒಪ್ಪಂದಕ್ಕೆ ಸಿದ್ಧವಿದೆ ಎಂದು ಈ ಸಭೆಯಲ್ಲಿ ತಿಳಿಸುವ ಮೂಲಕ ನಮ್ಮ ಪರಿಸರ ಮಂತ್ರಿ ಜೈರಾಮ್ ರಮೇಶ್‌ರವರು ನಮ್ಮ ದೇಶದ ಮೇಲೆ ಇನ್ನಿಲ್ಲದಂಥ ಹೊರೆ ಹೊರೆಸಿದ್ದಾರೆ ಮಾತ್ರವೇ ಅಲ್ಲ, ಸಂಸತ್ತಿನಲ್ಲಿ ಈ ಹಿಂದೆ ಪ್ರಧಾನಮಂತ್ರಿ ನೀಡಿರುವ ಹೇಳಿಕೆಯಿಂದ ಅಡ್ಡದಾರಿ ಹಿಡಿದಿದ್ದಾರೆ ಎನ್ನಬಹುದು. ಅಲ್ಲದೆ, ಈ ಹಿಂದೆ ನಡೆದ ಸಂಸತ್ತಿನ ಮಾತುಕತೆಯಲ್ಲಿ ಭಾರತವು ಅಭಿವೃದ್ಧಿ ಹೊಂದಿರುವ ದೇಶಗಳು ಒತ್ತಾಯಿಸುತ್ತಿರುವಂತೆ, ವಿಸರ್ಜನೆ ಕಡಿತಗೊಳಿಸಲು ಕಾನೂನಬದ್ಧ ಒಪ್ಪಂದಕ್ಕೆ ಮಣಿಯುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿತ್ತು. ಆದರೆ, ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ ಅಮೇರಿಕಾದ ಬಾಲಂಗೋಚಿಯಂತೆ ಈ ಸಚಿವರು ವರ್ತಿಸಿದ್ದಾರೆ. ಒಂದು ಬಡರಾಷ್ಟ್ರವಾಗಿ ಇನ್ನೂ ದೇಶದ ಜನತೆಯ ಹಸಿವು ಹಿಂಗಿಸಲಾಗದ ಸ್ಥಿತಿಯಲ್ಲಿರುವಾಗ ಇಂಥಹ ಬಲವಂತದ ವಿಸರ್ಜನೆ ಕಡಿತಕ್ಕೆ ಒಪ್ಪಿಕೊಂಡಲ್ಲಿ, ಇದು ನಮ್ಮ ಕೈಗಾರಿಕಾಭಿವೃದ್ಧಿಯ ಮೇಲೆ ಅದರಲ್ಲೂ ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪೆಟ್ಟುನೀಡಲಿದೆ.



ಹಿಂದಿನ ಹವಾಮಾನ ಒಪ್ಪಂದ ಮಾತುಕತೆಗಳು:

ಹಿಂದೆ ಕೋಪನ್‌ಹೇಗನ್‌ನಲ್ಲಿ ಜರುಗಿದ ಇಂಥದೇ ಶೃಂಗಸಭೆಯಲ್ಲಿ ಅಮೇರಿಕಾ ತಾನು ಯಾವುದೇ ಜವಾಬ್ದಾರಿ ಹೊರದ ಕಾರಣ ಮಾತುಕತೆಗಳು ಫಲಿತಾಂಶ ಕಾಣದೆ ಮುರಿದುಬಿದ್ದಿದ್ದವು. ಬಹಳ ಹಿಂದೆ ಜಪಾನಿನ ಕ್ಯೋಟೋ ದಲ್ಲಿ ನಡೆದ ಮಾತುಕತೆಯ



ತೀರ್ಮಾನವನ್ನು ಅಮೇರಿಕಾ ತಿರಸ್ಕರಿಸಿತ್ತು. ಆದರೆ ಯೂರೋಪಿನ ರಾಷ್ಟ್ರಗಳು ಸೇರಿದಂತೆ ರಷ್ಯಾ ಮತ್ತು ಇತರೆ ರಾಷ್ಟ್ರಗಳು ಕೆಲಮಟ್ಟಿಗೆ ನಿಗಧಿಪಡಿಸಿದ ಗುರಿಯನುಸಾರ ತಮ್ಮ ದೇಶಗಳು ಬಿಡುಗಡೆ ಮಾಡುತ್ತಿರುವ ಮಲಿನಕಾರಕಗಳನ್ನು ನಿಯಂತ್ರಿಸಲು, ಕಾಲ ಕ್ರಮೇಣ ಕಡಿಮೆಗೊಳಿಸಲು ಒಪ್ಪಿದ್ದರಿಂದ ಕ್ಯೋಟೊ ಒಪ್ಪಂದಕ್ಕೆ ಜೀವವುಳಿದಿತ್ತು. ಅಮೇರಿಕಾದ ಕುಂಟುನೆಪವೇನೆಂದರೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕೂಡ ಮಲಿನಕಾರಗಳನ್ನು ಕಡಿಮೆಗೊಳಿಸಲು ಗುರಿ ನಿಗಧಿಪಡಿಸಿಕೊಳ್ಳಬೇಕು, ಇಲ್ಲದಿದ್ದಲ್ಲಿ ತಾನು ಒಪ್ಪುವುದಿಲ್ಲ ಎಂಬುದು. ಹಾಗೂ ಅನಿಲಗಳ ವಿಸರ್ಜನೆ ಕಡಿತಗೊಳಿಸಲು ಅಗತ್ಯವಾದ ತಂತ್ರಜ್ಞಾನ ಮತ್ತು ನಿಧಿಯನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಕೊಡುವುದಾಗಿ ಒಪ್ಪಿಕೊಂಡಿದ್ದ ಅಮೇರಿಕಾಯಾದಿಯಾಗಿ ಮುಂದುರೆದ ರಾಷ್ಟ್ರಗಳು ಇದುವರೆಗೂ ಆ ಕುರಿತು ಚಕಾರ ಎತ್ತುತ್ತಿಲ್ಲ. ಮುಂದುರೆದ ರಾಷ್ಟ್ರಗಳು ಅಂಥಹ ತಂತ್ರಜ್ಞಾನಗಳನ್ನು ಇನ್ನೂ ಬೌದ್ಧಿಕ ಆಸ್ತಿ ಹಕ್ಕುಸ್ವಾಮ್ಯಗಳು ಮತ್ತು ಪೇಟೆಂಟ್‌ಗಳಿಂದ ಬಂಧಿಸಿಟ್ಟಿವೆ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH